ಜನಪದ ವಿಚಾರ

ಬೆಲೆ : ರೂ ೧೮-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೩ ಜುಲೈ-೨೦೧೩ ಸಂಚಿಕೆ-೧೨



ಸರ್ಕಾರದಿಂದಲೇ ಭೂಗ್ರಹಣ! ಎಚ್ಚರ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜುಲೈ – ೨೦೧೩
ಸಂಪುಟ – ೧೩
ಸಂಚಿಕೆ – ೧೨

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ

✆ 08236 316344

✆ 08236 299854

e-mail : janapada@yahoo.com

web: janapada.net

ಅಕ್ಕರೆಯಿಂದ

ಕೂಗುವ ಕೋಳಿಯ ಕೊರಳಿನ ಕೂಗಿಗೆ
ಮೂಡುವ ಸೂರ್ಯನ ಕೇಸರಿ ಚೆಲುವಿಗೆ
ಬೀಸುವ ತಂಗಾಳಿ ಹಾಕುತೈತಿ,
ತಾಳ ಹಾಕುತೈತಿ॥

ಬಂಡಿಯ ಗಾಲಿ ಉರುಳುವ ನಾದಕೆ
ಎತ್ತಿನ ಕತ್ತಿನ ಗಂಟೆಯ ಶಬ್ದಕೆ
ಭಾರ ಹೊತ್ತ ನೊಗ ಹಾಕುತೈತಿ,
ತಾಳ ಹಾಕುತೈತಿ॥

ಹಾಡುವ ಕೋಗಿಲೆ ಮೋಹಕ ದನಿಗೆ
ಓಡುವ ನದಿಯ ಬಳುಕಿನ ಮೋಡಿಗೆ
ಹಸಿರಿನ ಬನಸಿರಿ ಹಾಕುತೈತಿ,
ತಾಳ ಹಾಕುತೈತಿ॥

ಗಿಡ–ಮರ–ಬಳ್ಳಿ ಜೋಲಿ ಚಿಗುರಿಗೆ
ನವಿಲಿನ ಪ್ರೇಮದ ನಾಟ್ಯದ ಕುಣಿತಕ
ತೇಲುವ ಮೋಡ ಹಾಕುತೈತಿ,
ತಾಳ ಹಾಕುತೈತಿ॥

ಗೊಲ್ಲನ ಕೊಳಲಿನ ನಾದದ ಗುಂಗಿಗೆ
ತಲೆದೂಗುವ ತುರು–ಕರು–ಕೊರಳನು
ಸವರುವ ಪ್ರೀತಿಗೆ ಹಾಕುತೈತಿ,
ತಾಳ ಹಾಕುತೈತಿ॥

– ಬಸಪ್ಪ ಉಪ್ಪಾರ
(ಸಾಭಾರ–ಉತ್ಥಾನ)

ವಿಚಾರ ದೀಪ್ತಿ

ಬದುಕಿನ ನಿಗೂಢಗಳ ಕುರಿತು, ಮನುಷ್ಯನೆಂಬ ಅದ್ಭುತ ಪ್ರಾಣಿಯ ಕುರಿತು ಯೋಚಿಸುತ್ತ ಹೋದಂತೆ ತಲವೇ ಇಲ್ಲದ ಬಾವಿಗೋ, ಎಂದೂ ಮುಟ್ಟಲಾಗದ ಆಕಾಶಕ್ಕೋ ಕೈಚಾಚಿದಂತಾಗುತ್ತದೆ. ಅನುಭಾವ, ಅಧ್ಯಾತ್ಮ ಅವೆಲ್ಲ ಬದುಕಿನಾಚೆಗಿನ ಅಥವಾ 'ಲೌಕಿಕ' ಮನುಷ್ಯನ ಆಸಕ್ತಿಗಳಿಗೆ ಹೊರತಾದ ಅಥವಾ ತಕ್ಕುದಲ್ಲದ ಸಂಗತಿಯೆಂದು ತಿಳಿಯುವುದು ಆಶ್ಚರ್ಯಕರವೇ ಸರಿ. ನಮ್ಮ ಅತಿ ಶ್ರೇಷ್ಠ ಸಂತರಲ್ಲಿ ಅನೇಕರು ಕವಿಗಳಾಗಿದ್ದರು. ರಮಣರು 'ಹಪ್ಪಳದ ಹಾಡು' ಬರೆದಿದ್ದಾರೆ. ಅವರ ತಾಯಿ ಈ ತರುಣ ಸನ್ಯಾಸಿ ಮಗನನ್ನು ಹಪ್ಪಳ ಮಾಡಲು ಕರೆದರು. ಅದು ಆಶ್ರಮ ಇವೆಲ್ಲ ಬೇಡ ಎಂದು ರಮಣರು ಸ್ಪಷ್ಟವಾಗಿಯೇ ಹೇಳಿದ್ದರೂ ತಾಯಿ ಹಪ್ಪಳ ಮಾಡುವ ಸಿದ್ಧತೆ ನಡೆಸಿದರು. ರಮಣರೂ ತಾಯಿ ಅಡುಗೆ ಮನೆಯಲ್ಲಿಲ್ಲದಾಗ ಹಪ್ಪಳದ ಉಂಡೆ ತಿಂದರಂತೆ! ಹಪ್ಪಳ ಮಾಡಲು ಮಾತ್ರ ಹೋಗಲಿಲ್ಲ. ಆದರೆ ಹಪ್ಪಳದ ಕುರಿತು ಪದ್ಯ ಬರೆಯುವೆನೆಂದು ಹೇಳಿದರಂತೆ. ತಾಯಿ ಒಪ್ಪಿದರು! ಇದಕ್ಕೆಲ್ಲ ಏನು ಹೇಳುತ್ತೀರಿ? ಯಾವುದು ಅಧ್ಯಾತ್ಮ ಮತ್ತು ಯಾವುದು ಅಲ್ಲ? 'ಆತ್ಮದ ಕುರಿತಾದುದು' ಅಧ್ಯಾತ್ಮ ಸಾಹಿತ್ಯ ಮತ್ತು ಎಲ್ಲ ಕಲೆಗಳೂ ಮನುಷ್ಯನ ಎಲ್ಲ ಚಟುವಟಿಕೆಗಳೂ ಅಧ್ಯಾತ್ಮವೇ ತತ್ತ್ವ. ನಿಸ್ಸಂದೇಹವಾಗಿ ಇಂಥ ಸಂತರು, ವಚನಕಾರರು, ದಾಸರು ನನ್ನನ್ನು ಬೆಳೆಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಸಂತ ಸಾಹಿತ್ಯದ ಕೃಪೆ, ಆಶೀರ್ವಾದ ದೊಡ್ಡದು. ಇದು ನನ್ನ ಮಾತಲ್ಲ, ವರಕವಿಗಳು ಎದೆತುಂಬಿ ಹೊರಡಿಸಿದ ಉದ್ಗಾರ.

– *ಚಿಂತಾಮಣಿ ಕೊಡ್ಲೆಕೆರೆ*

ಸರ್ಕಾರದಿಂದಲೇ ಭೂಗ್ರಹಣ! ಎಚ್ಚರ

– *ಸುರೇಂದ್ರ ಕೌಲಗಿ*

ಇದುವರೆಗೆ ಜಮೀನುದಾರರು, ಶ್ರೀಮಂತರು ಭೂಕಬಳಿಕೆಯನ್ನು ಮಾಡುತ್ತಾರೆ ಎಂದು ನಂಬಿದ್ದೆವು. ಆದರೆ ಈಗ ಪ್ರಜೆಗಳಿಂದ ಚುನಾಯಿತವಾದ ಸರ್ಕಾರಗಳೇ ಅಭಿವೃದ್ಧಿಯೆಂಬ ಸಿಹಿಲೇಪನದ ಮಾತ್ರೆ ಕೊಟ್ಟು ಭೂಕಬಳಿಕೆ ಮಾಡುತ್ತಿವೆ. ಈ ನಾಜೂಕು ಪ್ರಕ್ರಿಯೆಯ ಬಗ್ಗೆ ಜನತೆ ಎಚ್ಚೆತ್ತು ಕೊಳ್ಳಬೇಕಾದುದು ತೀವ್ರ ಅಗತ್ಯವಾಗಿದೆ. ಕರ್ನಾಟಕದಲ್ಲಿ ನೂತನವಾಗಿ ರಚಿತವಾಗಿರುವ ಸರ್ಕಾರ ಅಧಿಕಾರಕ್ಕೆ ಬಂದ ಮೊದಲದಿನವೇ, ಮೊದಲ ಗಂಟೆಯಲ್ಲಿಯೇ ಒಂದು ರೂಪಾಯಿಗೆ ಒಂದು ಕೆ.ಜಿ ದರದಲ್ಲಿ ಮೂವತ್ತು ಕೆ.ಜಿಯಷ್ಟು ಅಕ್ಕಿಯನ್ನು ಬಡತನ ರೇಖೆ ಕೆಳಗಿನ ಕುಟುಂಬಕ್ಕೆ ಕೊಡುವುದಾಗಿ ಘೋಷಿಸಿತು. ಕೇವಲ ೨೫ ದಿನಗಳಷ್ಟು ಕ್ಷಿಪ್ರ ಸಮಯದಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಮಾಹಿತಿ ತಂತ್ರಜ್ಞಾನದ ತಾಂತ್ರಿಕ ಬಂಡವಾಳ ಹೂಡಿಕೆ ಪ್ರದೇಶಕ್ಕಾಗಿ (I.T.I.R) ಗೋಸ್ಕರ ೧೦,೫೦೦ ಹೆಕ್ಟರ್ ಭೂಮಿಯನ್ನು ಕೊಡುವ ಬಗ್ಗೆ ಸಮ್ಮತಿಯನ್ನೂ ಕೊಟ್ಟಿತು. ಒಂದು ಕಡೆ ಆಹಾರ ಭದ್ರತಾ ಯೋಜನೆ ಅನ್ವಯ ಜನತೆಗೆ ಅಕ್ಕಿಯನ್ನು ಕೊಡುವ ಭರವಸೆಯನ್ನು ನೀಡುತ್ತದೆ. ಇನ್ನೊಂದೆಡೆಗೆ ಅನ್ನವನ್ನು ಬೆಳೆಯುವ ಭೂಮಿಯನ್ನು ಕಬಳಿಸುತ್ತದೆ. ಇದಕ್ಕೆ ಕೇಂದ್ರ ಸರ್ಕಾರದ ಆಶೀರ್ವಾದವೂ ಇದೆ. ಈ ಭೂಮಿಯ ಕಬಳಿಕೆ ವಿರುದ್ಧ ರೈತರ ಪ್ರತಿಭಟನೆ ಬರುವುದೆಂಬ ವಿಚಾರದಿಂದ ಕೇವಲ ಖುಷ್ಕಿ ಮತ್ತು ಅವ್ಯವಸಾಯ ಯೋಗ್ಯ ಭೂಮಿಯನ್ನು ಈ ಯೋಜನೆಗೆ ಕೊಡಲಾಗುವುದೆಂದು ರಾಜ್ಯ ಸರ್ಕಾರವೂ ಕೇಂದ್ರ ಸರ್ಕಾರಕ್ಕೆ ತಿಳಿಸಿದೆ. ೧೦,೫೦೦ ಹೆಕ್ಟರ್ ಪಡೆಯಲು ದೇವನಹಳ್ಳಿ ಮತ್ತು ದೊಡ್ಡ ಬಳ್ಳಾಪುರ ತಾಲ್ಲೂಕಿನ ೪೨ ಹಳ್ಳಿಗಳು ನಾಮಾವಶೇಷವಾಗಲಿವೆ. ಈ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಕ್ಷೇತ್ರ ಅಭಿವೃದ್ಧಿಮಂಡಲಿ ಗುರುತಿಸಿ ಕೊಟ್ಟಿದೆ ಮತ್ತು ಭೂ ಸ್ವಾಧೀನತೆಯ ಪ್ರಕ್ರಿಯೆ ಅಂಗವಾಗಿ ಮೊದಲ ಹಂತದಲ್ಲಿ ೨.೦೭೨ ಹೆಕ್ಟರ್ ಭೂಮಿಯನ್ನು ಪಡೆಯುವ ಬಗ್ಗೆ ಮೊದಲ ಪ್ರಕಟಣೆ ಮಾಡಿದೆ. ಅಗತ್ಯವಾಗಿರುವ ಉಳಿದ ಭೂಮಿಯನ್ನು ಕಾಲಕ್ರಮೇಣ ವಶಪಡಿಸಿಕೊಳ್ಳಲಾಗುವುದು. ಭೂಮಿ ವಶಪಡಿಸಿಕೊಳ್ಳುವ ಕಾರ್ಯಕ್ರಮ ೨೦೨೦ ರಿಂದ ೨೦೩೨ ರವರೆಗೆ ಮುಗಿಯುವ ಸಂಭವವಿದೆ. ತಮಾಷೆಯೆನೆಂದರೆ ರಾಜ್ಯ ಸರ್ಕಾರ ಕೇಂದ್ರಕ್ಕೆ ತಾನು ಕೇವಲ ಖುಷ್ಕಿ ಜಮೀನನ್ನು ವಶಪಡಿಸಿಕೊಳ್ಳವುದೆಂದು ಮತ್ತು ಆ ಪ್ರದೇಶದಲ್ಲಿ ಇರುವ ಮನೆಗಳನ್ನು, ವಸತಿಗಳನ್ನು ಹಾಗೆ ಉಳಿಸುವುದಾಗಿ ಹೇಳಿದೆ. ರಾಜ್ಯ ಸರ್ಕಾರದ ಈ ಭರವಸೆಯನ್ನು ನಂಬಬಹುದೇ ಎಂಬುದು ಮೊದಲ ಪ್ರಶ್ನೆ. ಈಗಿರುವ

ಅನುಭವದ ಪ್ರಕಾರ ಕೇಂದ್ರ ಸರ್ಕಾರವಾಗಲೀ, ರಾಜ್ಯಸರ್ಕಾರವಾಗಲೀ ಒಕ್ಕಲೆಬ್ಬಿಸಿದ ಜನಕ್ಕೆ ಪರಿಹಾರ ಕೊಟ್ಟಿಲ್ಲದೆ ಇರುವುದು ಅಥವಾ ಪರ್ಯಾಯ ಪುನರ್ ವಸತಿ ಮಾಡದೇ ಇರುವುದು ಗೊತ್ತಿದೆ. ಅಲ್ಲದೇ "ಕೆಟ್ಟತಾಯಿ" ಇಲ್ಲವೆಂಬ ಮಾತಿನಂತೆ ನಿರುಪಯೋಗವಾದ ಭೂಮಿಯಿಲ್ಲ, ಇಂದಿನ ಸಕಲ ವೈಜ್ಞಾನಿಕ ಜ್ಞಾನ ಮತ್ತು ಸಲಕರಣೆಗಳ ಕಾರಣದಿಂದಾಗಿ ಎಂಥ ಬರಡು ಭೂಮಿಯಲ್ಲಿಯೂ ಒಂದಿಲ್ಲ ಒಂದು ಅನ್ನಸ್ವರೂಪದ ಬೆಳೆಯನ್ನು ಬೆಳೆಯಬಹುದಾಗಿದೆ. ಮರುಳುಗಾಡಿನ ಅನೇಕ ದೇಶಗಳು ಅಲ್ಲಿಯ ಭೂಗರ್ಭದಲ್ಲಿಯ ಖನಿಜ ಸಂಪತ್ತಿನ ಕಾರಣದಿಂದಾಗಿ ಶ್ರೀಮಂತನಾಗಿವೆ. ನಿಜವಾದ ರೈತರು ಬೆಳೆಯದೆ ಇರುವಂಥ ಭೂಮಿಯಿಲ್ಲ. ಆದ್ದರಿಂದ ರಾಜ್ಯ ಸರ್ಕಾರ ಗ್ರಹಣ ಮಾಡುತ್ತಿರುವ ೧೦.೫೦೦ ಹೆಕ್ಟರ್ ಭೂಮಿ ಖಂಡಿತವಾಗಿಯೂ ನಿರುಪಯೋಗವಾಗಿರುಲು ಸಾಧ್ಯವಿಲ್ಲ. ಯಾರಿಗೆ ವ್ಯವಸಾಯದ ಪ್ರತ್ಯಕ್ಷ ಅನುಭವ ವಿಲ್ಲವೋ ಮಣ್ಣಿನ ವಾಸನೆ ಗೊತ್ತಿಲ್ಲವೊ ಮತ್ತು ಮಣ್ಣನ್ನು ಕೈಯಿಂದ ಸಹ ಮುಟ್ಟಿಲ್ಲವೊ ಅಂಥವರು ಮಾತ್ರ ಖುಷ್ಕಿ ಭೂಮಿ, ನಿರುಪಯೋಗಿ ಭೂಮಿ ಇತ್ಯಾದಿ ಕಟ್ಟು ಕಥೆಗಳನ್ನು ಕಟ್ಟಬಹುದು. ಈ ಭೂಮಿಯನ್ನು ವಶಪಡಿಸಿಕೊಳ್ಳುವವರು ಇಂಥ ಜನರೇ. ಇಷ್ಟು ವಿಸ್ತಾರವಾದ ಭೂ ಪ್ರದೇಶದಲ್ಲಿ ಬರುತ್ತಿರುವುದು ಮಾಹಿತಿ ತಂತ್ರಜ್ಞಾನಕ್ಕೆ ಸಂಭಂದಿಸಿದಂತ ಚಟಿವಟಿಕೆ. ಮಾಹಿತಿ ತಂತ್ರಜ್ಞಾನದಿಂದ ಒಂದು ಪೈಸೆಯಷ್ಟು ಜಿ.ಡಿ.ಪಿ ಹೆಚ್ಚಾಗುವುದಿಲ್ಲ. ಮರಗಳಿಂದ, ಪ್ರಾಣಿ ಸಂಕುಲದಿಂದ, ಜಿ.ಡಿ.ಪಿ ವೃದ್ಧಿಯಾಗುತ್ತದೆ. ಮಾಹಿತಿ ತಂತ್ರಜ್ಞಾನದಲ್ಲಿ ತೊಡಗುವ ಜನರು ಪರೋಪಹಾರಿ ಜೀವಿಗಳೇ. ಅವರು ಜೀವನಕ್ಕೆ ಮುಖ್ಯವಾಗಿ ಬೇಕಾದ ಅನ್ನ ಬಟ್ಟೆಯನ್ನು ಉತ್ಪಾದಿಸುವಂಥವರಲ್ಲ. ಐಷಾರಾಮಿ ಜೀವನ ನಡೆಸುವಂಥವರು ಕೊಳ್ಳಬಾಕ ಸಂಸ್ಕೃತಿಯನ್ನು ಸೃಷ್ಟಿಸುವವರು. ತನ್ಮೂಲಕ ಕೃತಕ ಅಭದ್ರ ಅರ್ಥಶಾಸ್ತ್ರವನ್ನು ನಿರ್ಮಿಸುವವರು.

ಮಾಹಿತಿ ತಂತ್ರಜ್ಞಾನಕ್ಕಾಗಿ ಅಭಿವೃದ್ಧಿಪಡಿಸಲೆಂದು ಯೋಜಿಸಲಾಗಿರುವ ಈ ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿ ೨೦೭ ಹೋಗುವುದು. ಅದನ್ನು ಅಗಲೀಕರಣಗೊಳಿಸುವುದಕ್ಕಾಗಿ ೬೫೦ ಕೋಟಿ ರೂಪಾಯಿ ಖರ್ಚುಮಾಡಲಾಗುವುದು. ಅಲ್ಲದೆ ಮೆಟ್ರೋರೈಲು ಕೆಲಸಕ್ಕಾಗಿ ೬.೩೬೦ ಕೋಟಿ ರೂಪಾಯಿ ಖರ್ಚು ಮಾಡಲಾಗುವುದು. ಇದೆಲ್ಲ ಯೋಜನೆ ೨೦೧೯ರ ವೇಳೆಗೆ ಮುಕ್ತಾಯ ಗೊಳ್ಳಬಹುದೆಂದು ಅಂದಾಜಿಸಲಾಗಿದೆ. ಪರಿಹಾರವಾಗಿ ಒಂದು ಹೆಕ್ಟರ್‌ಗೆ ೩ಕೋಟಿ ರೂಗಳಂತೆ ಲೆಕ್ಕಹಾಕಿದರೆ ೪೦.೦೦೦ ಕೋಟಿ ಹಣವನ್ನು ಸರ್ಕಾರ ಕೊಡಬೇಕು ಆದರೆ ಅದರ ಬಗ್ಗೆ ಯಾವ ಸುಳಿವನ್ನೂ ಕೊಟ್ಟಿಲ್ಲ. (I.T.I.R) ದಲ್ಲಿ ಕೆಲಸ ಪ್ರಾರಂಭವಾದ ಮೇಲೆ ೨೦೩೨ರ ಹೊತ್ತಿಗೆ ೨.೧ಲಕ್ಷ ಕೋಟಿ ರೂಪಾಯಿಯಷ್ಟು ವಾರ್ಷಿಕ ವಹಿವಾಟು ನಡೆಯುವುದಾಗಿ ಮತ್ತು ಈ ಕ್ಷೇತ್ರಕ್ಕೆ ೭೦ ರಷ್ಟು ಹಣ I.T ಮತ್ತು ಕೆಲ ಸಂಬಂಧಿಸಿದ ಸೇವೆಗಳಿಂದ ಬರುತ್ತದೆಂದು ನೀರಿಕ್ಷಿಸಲಾಗಿದೆ. ಇಷ್ಟೆಲ್ಲ ಬಂಡವಾಳ ಹೂಡಿಕೆಯಿಂದ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೇವಲ ಹತ್ತು ಲಕ್ಷ ಜನರಿಗೆ ಕೆಲಸ ದೊರೆಯುತ್ತದೆ.

ಆದರೆ ಕಬಳಿಸಲ್ಪಡುತ್ತಿರುವ ೧೦.೫೦೦ ಹೆಕ್ಟರ್ ಭೂಮಿಯಲ್ಲಿ ಮಳೆಯಾಧಾರಿತ ವ್ಯವಸಾಯ ಮಾಡಿದರೂ ಕೂಡ ಇದಕ್ಕಿಂತ ಎರಡರಷ್ಟು ಜನರಿಗೆ ಖಾಯಂ ಕೆಲಸ ಸಿಗುವ ಸಾಧ್ಯತೆಯಿದೆ. ಅಲ್ಲದೆ ಮಾಹಿತಿ ತಂತ್ರಜ್ಞಾನದ ಹೊರತಾಗಿ ಬೇರೆ ರೀತಿಯ ಕೈಗಾರಿಕೆಗಳಿಗೆ ಕಚ್ಚಾಪದಾರ್ಥ ಒದಗಿಸುವ ಮೂಲ ಕೃಷಿ. ಅದು ತಪ್ಪಿ ಹೋದರೆ ಅದೆಷ್ಟೊ ಕೈಗಾರಿಕೆಗಳಿಗೆ ಮೂಲ ಪದಾರ್ಥವಿಲ್ಲದೆ ಮುಚ್ಚಿಹೋಗುವ ಹಾಗೂ ತತ್‌ಪರಿಣಾಮವಾಗಿ ನಿರುದ್ಯೋಗ ಹೆಚ್ಚಾಗುವ ಸಾಧ್ಯತೆ ಬಹಳಷ್ಟಿದೆ. ಇಂಥ ಯೋಜನೆಗಳಲ್ಲಿ ಅದೂರದರ್ಶಿತ್ವವಿದೆ.

ಸರ್ಕಾರ ತನ್ನ ಅಭಿವೃದ್ಧಿನೀತಿಯಿಂದಾಗಿ ರಾಜ್ಯದ ಭೂಮಿಯಲ್ಲವೂ ಅಭಿವೃದ್ಧಿಗಾಗಿಯೇ ಇದೆಯೆಂಬ ದೃಷ್ಟಿಯಿಂದ ವ್ಯವಹರಿಸುತ್ತಿದೆ! ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೃಷಿಯನ್ನು ಅವಲಂಬಿಸಿದವರನ್ನೂ ಪರಾಧೀನರನ್ನಾಗಿ ಮಾಡುವ ತಂತ್ರವಾಗಿದೆ. ಗಾಂಧೀಜಿಯವರು ಸ್ವಾತಂತ್ರ್ಯ ಬಯಸಿದ್ದು ಹಾಗೂ ತಂದದ್ದು ಭಾರತೀಯರೆಲ್ಲರಿಗೆ ಅವರವರ ಜೀವನವನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯಸಿಗಲೆಂಬ ಉದ್ದೇಶ್ಯದಿಂದ ಗಾಂಧೀಜಿ ಹೋರಾಟಮಾಡಿದರು. ಆದರೆ ಈಗ ಸ್ವತಂತ್ರ ಭಾರತದಲ್ಲಿ ಭಾರತೀಯರದೆ ಆದ ಸರ್ಕಾರ ಭೂಮಿಯನ್ನು ಕಬಳಿಸಿ ಜನರನ್ನು ಪರತಂತ್ರನಾಗಿರಿಸುತ್ತಿದೆ.

ಸರ್ಕಾರದ I.T.I.R ಯೋಜನೆಗಾಗಿ ಗ್ರಹಣ ಮಾಡುವ ೧೦.೫೦೦ ಹೆಕ್ಟರ್ ಭೂಮಿ ಅದಕ್ಕೆ ಬಂಗಾರದ ಪಾತ್ರೆಯಂತೆ ಕಾಣುತ್ತಿದೆ. ಅದಕ್ಕಾಗಿ ಅದನ್ನು ಗ್ರಹಿಸಿಸುವ ಪ್ರಯತ್ನಮಾಡುತ್ತಿದೆ. ಆದರೆ ಆ ಹಿರಣ್ಮಯ ಪಾತ್ರೆಯಲ್ಲಿ ಸತ್ಯ ಮತ್ತು ಧರ್ಮ ಅಡಗಿ ಕುಳಿತಿವೆ. ಆ ಸತ್ಯ ಧರ್ಮಗಳೆಂದರೆ ಪರಿಸರ ನಾಶಮಾಡದಿರುವುದು ಪ್ರಾಣಿಸಂಕುಲಗಳ ನಾಶಮಾಡದಿರುವುದು ಮತ್ತು ಭೂಮಿಯ ಮಕ್ಕಳನ್ನು ಒಕ್ಕಲೆಬ್ಬಿಸದಿರುವುದು ಆಗಿದೆ. ಈ ಸತ್ಯ ಧರ್ಮವನ್ನು ಕಡೆಗಣಿಸಿ ಸರ್ಕಾರ ಈ ರೀತಿ ಅಭಿವೃದ್ಧಿಯ ಹೆಸರಿನಲ್ಲಿ ಭೂಮಿಯನ್ನು ಕಬಳಿಸುತ್ತಾ ಹೋದರೆ ದುರಂತ ಕಾದಿದೆ. ದೇಶದಲ್ಲಿ ಕಳೆದ ಒಂದು ದಶಕದಲ್ಲಿ ೧೨ಕೋಟಿ ಹೆಕ್ಟರ್ ಭೂಮಿ ಈಗಾಗಲೇ ಕೃಷಿಯೇತರ ಉಪಯೋಗಕ್ಕಾಗಿ ಹೋಗಿದೆ. ಈ ರೀತಿ ಕೃಷಿ ಜಮೀನು ಕಡಿಮೆಯಾಗುತ್ತಾ ಹೋದರೆ ಪರಿಣಾಮ ಗಂಭೀರವಾಗುತ್ತದೆ. ಮೊದಲನೇಯದಾಗಿ ಆಹಾರ ಧಾನ್ಯದ ಉತ್ಪಾದನೆಯ ಮೇಲೆ ಹಾಗೂ ಆಹಾರ ಭದ್ರತೆಯ ಮೇಲೆ ಪ್ರತಿಕೂಲ ಪ್ರಭಾವ ಉಂಟಾಗುವುದುದು. ಆಹಾರಕ್ಕಾಗಿ ವಿದೇಶಗಳ ಮೇಲೆ ಅವಲಂಬನೆ ಹೆಚ್ಚಾಗುವುದು. ಆಮದು ಮಾಡಿಕೊಳ್ಳಬೇಕಾಗುವುದು. ಇದು ದೇಶದ ಹಿತಕ್ಕೆ ಮಾರಕ. ಈಗ ದೇಶದಲ್ಲಿ ಪ್ರತಿ ನಾಲ್ಕು ಜನರಲ್ಲಿ ಒಬ್ಬ ಮನುಷ್ಯ ಹಸಿದಿದ್ದಾನೆ, ಸುಮಾರು ಪ್ರತಿ ಎರಡನೇ ಮಗು ಕುಪೋಷಣೆಗೆ ಒಳಗಾಗಿದೆ. ಸ್ಥಿತಿ ಇದಕ್ಕಿಂತಲೂ ಹೆಚ್ಚು ಕೆಡುವುದೆಂಬುದರ ಸಂಕೇತ ಕಾಣುತ್ತಿದೆ. ಭಾರತೀಯ ಕೃಷಿ ಇಂದು ಭಯಂಕರ ಸಂಕಟದಲ್ಲಿದೆ. ಕಳೆದ ಒಂದು ದಶಕದಲ್ಲಿ ಸುಮಾರು ೨.೫ಲಕ್ಷ ರೈತರು ಆತ್ಮಹತ್ಯಮಾಡಿಕೊಂಡಿದ್ದಾರೆ. ಕೃಷಿಯಲ್ಲಿಯ ಈ ಸಂಕಟಕ್ಕೆ ಕಾರಣ ಸರ್ಕಾರದ ತಪ್ಪು ಅಭಿವೃದ್ಧಿ ನೀತಿಗಳು ಹಾಗೂ

ವಿಶ್ವವಾಣಿಜ್ಯ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಪ್ಪಂದ ಕಾರಣವಾಗಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತದ್ವಾರವಿರುವುದರಿಂದ ಈ ಸಂಕಟ ಇನ್ನೂ ಹೆಚ್ಚು ಆಗಿದೆ. ದೇಶದ ಹಿಮಾಲಯ ಪರ್ವತದ ಬಳಿಯ ರಾಜ್ಯಗಳಲ್ಲಿ ಅಂದಾಜು ಒಂದು ಸಾವಿರ ಚಿಕ್ಕ ದೊಡ್ಡ ಜಲವಿದ್ಯುತ್ ಯೋಜನೆಗಳು ನಿರ್ಮಾಣಗೊಳ್ಳುತ್ತಿವೆ. ಇದರಿಂದಾಗಿ ಐದುಸಾವಿರ ಹಳ್ಳಿಗಳ ಇಪ್ಪತ್ತರಿಂದ ಇಪ್ಪತ್ತೆರಡು ಲಕ್ಷ ಜನಸಂಖ್ಯೆ ಸುರಂಗದ ಮೇಲೆ ವಾಸಿಸಬೇಕಾಗುತ್ತದೆ. ಹೀಗೆ ಭೂಮಿಯ ಮತ್ತು ಪ್ರಕೃತಿ ವಿನಾಶ ಅಭಿವೃದ್ಧಿಯ ಹೆಸರಿನಲ್ಲಿ ಅಡೆತಡೆ ಇಲ್ಲದೆ ಸಾಗಿದೆ. ಮಹಾತ್ಮಗಾಂಧೀ ಹೀಗೆ ಹೇಳಿದ್ದರು. "ಪೃಥ್ವೀ ಮೇಲೆ ನಮ್ಮ ಅಗತ್ಯದ ಎಲ್ಲ ವಸ್ತುಗಳು ಪರ್ಯಾಪ್ತ ಪ್ರಮಾಣದಲ್ಲಿವೆ. ಆದರೆ ಯಾರೆ ಒಬ್ಬರ ದುರಾಸೆಗೆ ಏನೂ ಇಲ್ಲ"

ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯವರು ಅಭಿವೃದ್ಧಿಯ ಮೂಲಕ ಆಗಿರುವ ಪ್ರಗತಿಯನ್ನು ಪ್ರದರ್ಶನಕ್ಕೆ ಇಟ್ಟಿರಬಹುದು. ಆದರೆ ಈ ಕೈಗಾರೀಕರಣದ ಹಿಂದೆ ರೈತರ ಆಕ್ರೋಶವಿರುವುದು ಕಂಡುಬರುತ್ತಿದೆ. ಆ ರಾಜ್ಯದ ಸುರೇಂದ್ರನಗರ ಜಿಲ್ಲೆಯ ೪೪ ಹಳ್ಳಿಗಳು ಯೋಜಿಸಲಾಗಿರುವ ವಿಶೇಷ ಬಂಡವಾಳ ಹೂಡಿಕೆ ಪ್ರದೇಶವನ್ನು (S.I.R) ವಿರೋಧ ಮಾಡುತ್ತಿದ್ದಾರೆ. ಏಕೆಂದರೆ ಈ ಯೋಜನೆಯಿಂದಾಗಿ ಈ ಹಳ್ಳಿಗಳ ಎರಡು ಸಾವಿರ ರೈತರ ಜೀವನವನ್ನು ಕಿತ್ತು ಕೊಳ್ಳುವ ಭಯ ಉಂಟಾಗಿದೆ. ವ್ಯಂಗ್ಯವೆಂದರೆ ೨೦೧೨ರಲ್ಲಿ ನಡೆದ ಅಲ್ಲಿಯ ವಿಧಾನಸಭೆಯ ಚುನಾವಣೆಯಲ್ಲಿ ತಮ್ಮ ಚುನಾವಣಾ ಪ್ರಚಾರವನ್ನು ಮೋದಿಯವರು ಈ ಕ್ಷೇತ್ರದಿಂದಲೇ ಪ್ರಾರಂಭಿಸಿದರು. ಯೋಜಿಸಲಾಗಿರುವ (S.I.R) ಯೋಜನೆ ೬೩ ಸಾವಿರ ಹೆಕ್ಟರ್ ಭೂಮಿಗಿಂತಲೂ ಹೆಚ್ಚು ವಿಸ್ತಾರವಾಗಲಿದೆ. ಹತ್ತು ಸಾವಿರ ರೈತರು ಈ ಯೋಜನೆಯ ವಿರುದ್ಧ ಪ್ರತಿಭಟನೆ ಪ್ರಾರಂಭಿಸಿದ್ದಾರೆ. ಈ ಪ್ರತಿಭಟನೆಯಲ್ಲಿ ೫೦೦ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳು ಇದ್ದವು. ಪ್ರತಿಭಟನಾ ಆಂದೋಲನದ ನೇತೃತ್ವವನ್ನು ಬಿ.ಜೆ.ಪಿಯ ಮಾಜಿ ಎಂ.ಎಲ್.ಎ ಕನು ಕಲಾಸಾರಿಯ ವಹಿಸಿದ್ದಾರೆ. ಭೂಗ್ರಹಣ ವಾಗುತ್ತಿರುವ ಭೂಮಿ ಫಲವತ್ತಾಗಿದೆ ಮತ್ತು ಕೆಲವೊಂದು ಕಡೆಗೆ ವರ್ಷದಲ್ಲಿ ಮೂರುಸಲ ಬೆಳೆಯನ್ನು ತೆಗೆಯಬಹುದಾಗಿದೆ. ಆಕ್ರಮಸಿಕೊಳ್ಳಬಹುದಾದ ಇಂಥ ಭೂಮಿಗೆ ಒಳ್ಳೆಯ ಪರಿಹಾರ ದೊರೆಯುವ ಸಂಭವ ತೀರಕಡಿಮೆಯಿದೆ.

ಇಲ್ಲಿ ಜೆ.ಪಿ.ರಾಜರತ್ನಂರವರ ವಿಚಾರ ರಶ್ಮಿಯೊಂದು ಜ್ಞಾಪಕಕ್ಕೆ ಬರುತ್ತದೆ. ಕಂಡದ್ದನ್ನೆಲ್ಲ ಬೇಕೆನ್ನುತ್ತಿರುವ ಇಂದಿನ ಸರ್ಕಾರದ ನೀತಿಗೆ ಅನ್ವಯಿಸುವಂಥ ಕಥೆಯೊಂದು ಈ ವಿಚಾರ ರಶ್ಮಿಯಲ್ಲಿದೆ. ಆ ಕಥೆ ಈರೀತಿ ಇದೆ:-

ಒಬ್ಬ ರಾಜ ಇದ್ದ. ಕಂಡದ್ದೆಲ್ಲ ತನಗೆ ಬೇಕು ಎನ್ನುತ್ತಿದ್ದ. ಒಂದು ದಿನ ಒಬ್ಬ ಮುದುಕಿಯ ಗುಡಿಸಿಲನ್ನು ನೋಡಿದ. 'ಇಲ್ಲಿ ಒಂದು ಚಿಕ್ಕ ಅರಮನೆ ಕಟ್ಟಿಕೊಂಡು, ಅದರ ಸುತ್ತ ತೋಟ ಮಾಡಿಕೊಂಡರೆ ಚೆನ್ನಾಗಿರುತ್ತೆ' ಎಂದುಕೊಂಡ.

ಮುದುಕಿಯನ್ನು ಕರಸಿದ. 'ಇದನ್ನು ನನಗೆ ಮಾರಿಬಿಡು' ಎಂದ. ಮುದುಕಿ ಮಾರಲು ಒಪ್ಪಲಿಲ್ಲ. ದೊರೆ 'ಸಾವಿರ ಕೊಡುತ್ತೇನೆ,' ಎಂದ. ಹತ್ತು

ಸಾವಿರ, ಎಂದ ಐವತ್ತು, ಎಂದ. ಲಕ್ಷ, ಎಂದ.

'ನಾನು ನೆಮ್ಮದಿಯಾಗಿ ವಾಸಮಾಡಬೇಕು ಎಂದು ಹಿರಿಯರು ನನಗೆ ಕೊಟ್ಟಿದ್ದು ಈ ಭೂಮಿ, ಈ ಗುಡಿಸಲು. ಹಣಕ್ಕಾಗಿ ನಾನು ಇದನ್ನು ಮಾರಿಕೊಂಡರೆ ದೇವರು ಮೆಚ್ಚುವನೆ? ಎಂದಳು ಮುದುಕಿ.

ದೊರೆಗೆ ಕೋಪ ಬಂತು. 'ಎಲಾ ಇವಳ ಪೊಗರೆ!' ಎಂದು ಆ ಮುದುಕಿಯನ್ನು ಅಲ್ಲಿಂದ ಓಡಿಸಿ, ಆ ಸ್ಥಳವನ್ನು ಆಕ್ರಮಿಸಿಕೊಂಡ. 'ಇಲ್ಲಿ ಒಂದು ಚಿಕ್ಕ ಅರಮನೆ, ಅದರ ಸುತ್ತ ಉದ್ಯಾನವನ ನಿರ್ಮಾಣವಾಗಲಿ' ಎಂದ.

ಮುದುಕಿ ರಾಜಪುರೋಹಿತ ಹತ್ತಿರ ಹೋಗಿ, ದೊರೆ ತನಗೆ ಮಾಡಿದ ಅನ್ಯಾಯವನ್ನು ಹೇಳಿಕೊಂಡಳು. 'ಸ್ವಲ್ಪ ತಾಳು, ತಾಯಿ. ನಿನ್ನ ಭೂಮಿಯನ್ನು ಕೊಡಿಸುತ್ತೇನೆ.' ಎಂದು ರಾಜಪುರೋಹಿತ ಅವಳನ್ನು ತನ್ನ ಮನೆಯಲ್ಲಿ ಇರಹೇಳಿದ.

ಕಾಲಕ್ರಮದಲ್ಲಿ ರಾಜ ಬಯಸಿದ್ದ ಅರಮನೆ, ತೋಟ ನಿರ್ಮಾಣವಾದವು. ಗೃಹ ಪ್ರವೇಶದ ದಿನ ಪುರೋಹಿತ ನಾಲ್ಕು ಕತ್ತೆಗಳನ್ನು ಅಲ್ಲಿಗೆ ಕರೆದುಕೊಂಡು ಹೋದ. ಈ ಭೂಮಿಯಿಂದ ನಾಲ್ಕು ಚೀಲ ಮಣ್ಣು ನನಗೆ ದಯಾಪಾಲಿಸಬೇಕು' ಎಂದ.

ದೊರೆ ದಯಾಪಾಲಿಸಿದ. 'ಇದರಲ್ಲಿ ಒಂದು ಚೀಲವನ್ನು ಎತ್ತಿ ಈ ಕತ್ತೆಯ ಮೇಲೆ ಇರಿಸಿ, ಪ್ರಭುವೆ' ಎಂದ, ಪುರೋಹಿತ.

ದೊರೆ ತಿಣುಕಿದ. ಚೀಲವನ್ನು ಎತ್ತಲಾಗಲಿಲ್ಲ.

'ಒಂದು ಮೂಟೆ ಭೂಮಿಯನ್ನು ಹೊರಲಾರದ ನೀನು, ದೇವರು ಕರೆದಾಗ ಈ ಇಡೀ ಭೂಮಿಯನ್ನು ಹೇಗೆ ತಾನೆ ಹೊತ್ತುಕೊಂಡು ಹೋಗುತ್ತೀಯೇ?' ಎಂದ, ಪುರೋಹಿತ.

ದೊರೆಗೆ ನಾಚಿಕೆಯಾಯಿತು. ಮುದುಕಿಯ ಕ್ಷಮೆ ಬೇಡಿ, ಆ ಅರಮನೆಯನ್ನೂ ತೋಟವನ್ನೂ ಅವಳಿಗೇ ಕೊಟ್ಟುಬಿಟ್ಟ.

ಮೇಲ್ಕಾಣಿಸಿದ ಕಥೆಯಲ್ಲಿ ನಿರೂಪಿತವಾಗಿರುವ ರೀತಿಯಲ್ಲಿ ಸರ್ಕಾರ ತನ್ನ ಯೋಜನೆಗಳಿಗಾಗಿ ಗ್ರಹಣ ಮಾಡಿಕೊಂಡಿರುವ ಭೂಮಿಯನ್ನು ಪುನಃ ಸಂಬಂಧಿಸಿದ ರೈತರಿಗೆ ಹಿಂದಿರಿಗಿಸುವುದಾದರೆ ಅದು ದೊಡ್ಡ ಸಾಮಾಜಿಕ ಅಹಿಂಸಕ ಕ್ರಾಂತಿಯೇ ಆಗುತ್ತದೆ. ಆದರೆ ಕೈಗಾರಿಕ ಕಂಪನಿಗಳಿಗೆ, ಕಾರ್ಪೊರೇರೆಟ್ ಕಂಪನಿಗಳಿಗೆ, ಬಂಡವಾಳ ಶಾಹಿಗಳಿಗೆ, ಇನ್ನಿತರ ಅಭಿವೃದ್ಧಿ ಕೆಲಸಕ್ಕಾಗಿ ಭೂಮಿಯ ಹಸ್ತಾಂತರ ಸುಗಮವಾಗುವಂಥ ಕಾನೂನನ್ನು ಸರ್ಕಾರ ಮಾಡಲು ಹೊರಟಿದೆ. ಪ್ರಸ್ತಾವಿತ ಭೂಮಿ ಅಧಿಗ್ರಹಣ, ಪುನರ್‌ವಸತಿ ಮತ್ತು ಪುನರ್‌ಸ್ಥಾಪನಾಧಿನಿಯಾಮ ೨೦೧೧ ಇಂಥದೇ ಒಂದು ಕ್ರಮವಾಗಿದೆ. ಈ ಕ್ರಮದಿಂದಾಗಿ ಭೂಮಿ ಅಧಿಗ್ರಹಣದಲ್ಲಿ ಖಾಸಗಿ ಕಂಪನಿಗಳ ಪಾತ್ರ ಪ್ರಮುಖವಾಗುತ್ತದೆ. ಉದ್ಯೋಗಪತಿಗಳು ಮತ್ತು ಬಿಲ್ಡರ್‌ಗಳು ನೇರವಾಗಿ ರೈತರಿಂದ ಭೂಮಿ ಖರೀದಿಸುವ ಅಧಿಕಾರ ಪಡೆಯುತ್ತಾರೆ. ಖಾಸಗಿಕಂಪನಿಗಳ, ನಿಗಮ ಮತ್ತು ಬಿಲ್ಡರ್ಸ್‌ಗಳ ಪರವಾಗಿ ಆಗಲಿರುವ ಈ ಕಾನೂನು

ಹಳ್ಳಿಗಳನ್ನು ಮತ್ತು ವ್ಯವಸಾಯವನ್ನು ಇನ್ನೂ ಹೆಚ್ಚು ದುರ್ಬಲಗೊಳಿಸುವುದು. ಅಮೇರಿಕಾ ದೇಶದ ಅಭಿವೃದ್ಧಿಯ ನೀತಿ ಮತ್ತು ಇಂಗ್ಲೆಂಡ್ ದೇಶದ ಅಭಿವೃದ್ಧಿ ನೀತಿ ನಮ್ಮ ದೇಶದ ಸಂದರ್ಭದಲ್ಲಿ ಖಂಡಿತ ಉಚಿತವಾಗಲಾರದು ಏಕೆಂದರೆ ಅಮೇರಿಕಾ ದೇಶ ಭಾರತ ದೇಶಕ್ಕಿಂತಲೂ ಎರಡು ಮೂರರಷ್ಟು ದೊಡ್ಡದಾಗಿದೆ. ಜನಸಂಖ್ಯೆಯೂ ಕಡಿಮೆ. ಇನ್ನು ಇಂಗ್ಲೆಂಡ್ ದೇಶ ತನ್ನ ಕೈಗಾರಿಕಾ ಕ್ರಾಂತಿಗಾಗಿ ಅನೇಕ ದೇಶಗಳನ್ನು ವಸಾಹತುಗಳನ್ನಾಗಿ ಮಾಡಿಕೊಂಡಿತು. ಭಾರತದೇಶ ಅಂಥ ವಸಾಹತುಶಾಹಿ ದೇಶವಾಗುವುದಿಲ್ಲ. ಆದ್ದರಿಂದ ದೇಶದಲ್ಲಿರುವ ಸೀಮಿತ ಭೌಗೋಳಿಕ ಕ್ಷೇತ್ರದಲ್ಲಿ ಅಪಾರವಾದ ಜನಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ಅಭಿವೃದ್ಧಿ ನೀತಿಯನ್ನು ರೂಪಿಸಬೇಕಾಗುತ್ತದೆ. ಆ ನೀತಿ ಭಾರತೀಯ ಮಣ್ಣಿನ ವಾಸನೆ ಒಳಗೊಂಡಂತೆ, ಭಾರತೀಯ ಗುಣಧರ್ಮದಂತೆ ಹಾಗೂ ಭಾರತೀಯ ಸಂಸ್ಕೃತಿ ಅನುಗುಣವಾದ ಅಭಿವೃದ್ಧಿ ನೀತಿಯನ್ನು ಅನುಸರಿಸಬೇಕು. ಈಗ ಜಗತ್ತಿನಲ್ಲೆಲ್ಲ, ವಿಶೇಷವಾಗಿ ಕೈಗಾರಿಕೆಯಲ್ಲಿ ಮುಂದುವರಿದ ದೇಶಗಳಲ್ಲಿ ಉತ್ಪಾದನೆಯ ಬೆಳವಣಿಗೆಯ ಅಂಶ ಕಡಿಮೆಯಾಗುತ್ತಿದೆ. ಕೈಗಾರಿಕೆ ಕ್ರಾಂತಿಯ ಹೊಸದರಲ್ಲಿ ತಾಂತ್ರಿಕತೆಯ ಬಗ್ಗೆ ಇದ್ದ ತಳಕು ಬಳಕು ಹೋಗಿ ಈಗ ಅದು ಉಳಿಯಬಲ್ಲದೆ ಎಂಬ ಸಂಶಯ ಮೂಡುತ್ತಿದೆ. ಕೈಗಾರಿಕಾ ಕ್ರಾಂತಿಯ ನಂತರ ಈಗ ಮೊಟ್ಟ ಮೊದಲಬಾರಿಗೆ ಅತ್ಯುನ್ನತ ತಂತ್ರಜ್ಞಾನ ವಿಲ್ಲದಯೇ ಅಭಿವೃದ್ಧಿ ಸಾಧ್ಯವೆಂಬ ಯೋಚನೆ ನಡೆದಿದೆ ಎಂಬುದಾಗಿ ನಂದಿನಿ ಜೋಶಿ ಹೇಳುತ್ತಾರೆ. ಇಷ್ಟೆಲ್ಲ ಭೂಗ್ರಹಣ ಮತ್ತು ಅಭಿವೃದ್ಧಿ ನಂತರವೂ ಭಾರತದಲ್ಲಿರುವ ಕಡುಬಡವರು ದಿನವೊಂದಕ್ಕೆ ೧೭ ರೂಪಾಯಿಗಳನ್ನು ಮಾತ್ರ ಖರ್ಚು ಮಾಡುತ್ತಾರೆ ಮತ್ತು ನಗರಗಳಲ್ಲಿ ದಿನವೊಂದಕ್ಕೆ ೨೩ ರೂಪಾಯಿಯಂದು ರಾಷ್ಟ್ರೀಯ ಸ್ಯಾಪಲ್ ಸರ್ವೇ ಕಛೇರಿ ಬಿಡುಗಡೆ ಮಾಡಿದ ಇತ್ತೀಚಿನ ತನ್ನ ವರದಿಯಲ್ಲಿ ತಿಳಿಸಿದೆ. ಆದ್ದರಿಂದ ಸರ್ಕಾರದಿಂದ ಮತ್ತು ಇತರ ಸಂಘಸಂಸ್ಥೆಗಳಿಂದ ಆಗುತ್ತಿರುವ ಭೂಗ್ರಹಣದ ಬಗ್ಗೆ ಜನತೆ ಎಚ್ಚೆತ್ತುಕೊಳ್ಳಬೇಕು. ಮತ್ತು ಸಾಧ್ಯವಾದಡೆಯಲೆಲ್ಲ ಭೂಗ್ರಹಣ ವಿರುದ್ಧ ವಿರೋಧದ ಧ್ವನಿ ಎತ್ತಬೇಕು. ಇದರ ಅರ್ಥ ಅಭಿವೃದ್ಧಿ ಬೇಡವೆಂದಲ್ಲ. ಆ ಅಭಿವೃದ್ಧಿ ಅಥವಾ ವಿಕಾಸ ವಿನಾಶವಿಲ್ಲದೇ ಮಾಡಬೇಕೆಂಬುದೆ ಈ ಮಾತಿನ ಅರ್ಥ. ಸರ್ಕಾರಗಳು ಗ್ರಾಮಗಳನ್ನು ಉಚ್ಚಾಟಿಸುವ ಕ್ರಮವನ್ನು ಕೈಬಿಡಬೇಕು. ಗ್ರಾಮಗಳ ಭೂಮಿ ಗ್ರಾಮಸ್ಥರ ಒಡತನದಲ್ಲಿಯೇ ಇದ್ದು ವ್ಯವಸಾಯ ಭರಾಟೆಯಿಂದ ಸಾಗುವಂತೆ ಮಾಡಬೇಕು. ಆಗ ದೇಶ ಸಮೃದ್ಧಗೊಳ್ಳವುದು. ಜನತೆ ಸಂತೃಪ್ತಿಯಿಂದ ಇರುವುದು, ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಪದಾರ್ಥ ದೊರೆಯುವುದು ಮತ್ತು ಸರ್ಕಾರವೇ ಕೈಗೊಂಡಿರುವ ಆಹಾರ ಭದ್ರತಾ ಯೋಜನೆ ಯಶಸ್ವಿಯಾಗಿ ನಡೆಯುವುದು. ಇನ್ನು ನಗರೀಕರಣದ ಅರ್ಥಶಾಸ್ತ್ರ ಸಾಕು, ಬದಲಿಗೆ ಗ್ರಾಮಾಭಿವೃದ್ಧಿ, ಕೃಷಿ ಅಭಿವೃದ್ಧಿ ಮತ್ತು ಗ್ರಾಮರಾಜ್ಯದತ್ತ ಹೋಗುವ ಗ್ರಾಮ ಅರ್ಥಶಾಸ್ತ್ರವನ್ನು ಜಾರಿಗೆ ತರಬೇಕು.

* * *

ಸಫಲತೆಯ ಮೂಲಮಂತ್ರ

– 'ಆರ್ಯರತ್ನ' ಮಹಾಶಯ ಧರ್ಮಪಾಲ

(ಮಹಾಶಯರು ಈಗ ೯೦ರ ಹರೆಯದವರು. ಇಂದಿಗೂ ತರುಣರಂತೆ ನಿರಂತರ ಕ್ರಿಯಾಶೀಲರಾಗಿರುವುದಲ್ಲದೆ ತಮ್ಮ ಅನುಭವದ ರಸಪಾಕದಲ್ಲಿ ಸಫಲತೆಯ ಮೂಲಮಂತ್ರವನ್ನು ಪಠಿಸುತ್ತಿದ್ದಾರೆ. ಅವರ ಮಾತುಗಳಲ್ಲೇ ಆಲಿಸಿರಿ.)

ಸಫಲತೆಯ ಸಾಧನೆಯು ಕರ್ಮಕ್ಷೇತ್ರಕ್ಕಿಂತಲೂ ಮೊದಲು ಈ ಶರೀರದಿಂದ ಪ್ರಾರಂಭವಾಗುತ್ತದೆ. ಶರೀರವೇ ಸಫಲತೆಯ ಪ್ರಾಪ್ತಿಗೆ ಆಧಾರಭೂತ ಸಾಧನವಾಗಿದೆ. ಅಸ್ವಸ್ಥ ವ್ಯಕ್ತಿಯು ಎಂದಿಗೂ ಸಫಲತೆಗಾಗಿ ಸಾರ್ಥಕ ಪ್ರಯತ್ನ ಮಾಡುವುದರಲ್ಲಿ ಸಮರ್ಥನಾಗಲಾರ. ಇಷ್ಟೇ ಅಲ್ಲದೆ, ಈ ಪ್ರಪಂಚದಲ್ಲಿ ಸ್ವಸ್ಥದೇಹ ಹಾಗೂ ಹರ್ಷಿತ ಮನಸ್ಸಿನ ವ್ಯಕ್ತಿಯೇ ತನ್ನ ಗುರುತನ್ನು ದಾಖಲಿಸಿದ್ದಾನೆ. ಅಸ್ವಸ್ಥ ವ್ಯಕ್ಕಿಯ ಸಮಸ್ತ ಶಕ್ತಿಯೂ ದೈನಿಕ ಚರ್ಯೆಗಳನ್ನು ಪೂರ್ಣಗೊಳಿಸುವುದರಲ್ಲಿಯೇ ಸೀಮಿತವಾಗಿ ಬಿಡುತ್ತದೆ. ಹೆಚ್ಚಿನ ಜನರು ತಮ್ಮ ದುರ್ಗುಣಗಳಿಂದಲೇ ಸಫಲತೆಗೆ ಆಧಾರಭೂತವಾದ ಶರೀರವನ್ನು ಜರ್ಜರಗೊಳಿಸಿಕೊಳ್ಳುತ್ತಾರೆ. ಇಂತಹ ಶರೀರವೆಂಬ ಸಾಧನವು ತನ್ನ ಗುರಿಯತ್ತ ಸಾಗುವುದಿರಲಿ, ಅದರತ್ತ ಒಂದು ಹೆಜ್ಜೆ ಇಡಲೂ ನಿರಾಕರಿಸುತ್ತದೆ.

ಏಕೈಕ ಸುಂದರ ಸ್ವಾಸ್ಥ್ಯವು ಅಸಂಖ್ಯ ವರದಾನಗಳನ್ನು ಪ್ರದಾನ ಮಾಡಿ ನಮ್ಮ ಸರ್ವಾಂಗೀಣ ವಿಕಾಸದಲ್ಲಿ ಸಹಾಯಕವಾಗುತ್ತದೆ. ನನ್ನ ಈ ವರೆಗಿನ ಅನುಭವಗಳ ಆಧಾರದ ಮೇಲೆ ಸ್ವಾಸ್ಥ್ಯ ಹಾಗೂ ಸಫಲತೆಗಳ ಪಾರಸ್ಪರಿಕ ಸಂಬಂಧಗಳ ಬಗೆಗೆ ಹೇಳಬೇಕೆಂದರೆ, ಆರೋಗ್ಯಪೂರ್ಣ ಶರೀರವೇ ನಮ್ಮೆಲ್ಲ ಸಂಘರ್ಷಗಳಲ್ಲಿ ಜೊತೆ ನೀಡಿ ನಮ್ಮ ಯಶಸ್ಸನ್ನು ರೂಪಿಸುತ್ತದೆ.

ಶರೀರ ಆರೋಗ್ಯದಿಂದ ಕೂಡಿದ್ದರೆ ವ್ಯಕ್ತಿಯಲ್ಲಿ ಉತ್ಸಾಹ ಹಾಗೂ ನಿರಂತರ ಕಾರ್ಯಗೈಯುವ ಸಾಮರ್ಥ್ಯವು ಸಹಜವಾಗಿಯೇ ಹೆಚ್ಚಾಗಿರುತ್ತದೆ. ಕಾರ್ಯದ ಬಗೆಗೆ ಈ ನಿರಂತರತೆಯೇ ವ್ಯಕ್ತಿಯನ್ನು ಮುನ್ನಡೆಸಲು ಸಹಾಯಕವಾಗುತ್ತದೆ. ಇಡೀ ಒಂದು ದಿನ ಅವನನ್ನು ಸಫಲತೆಯ ಗುರಿಯೆಡೆಗೆ ಕೊಂಡೊಯ್ಯುತ್ತದೆ. ಸ್ವಸ್ಥ ಶರೀರದಿಂದಲೇ ವ್ಯಕ್ತಿಯು ಜೀವನದ ಸಮೃದ್ಧಿಗಳ ವೃದ್ಧಿಯನ್ನು ಮಾಡಬಲ್ಲನು.

ಸಫಲತೆಯನ್ನು ಸುನಿಶ್ಚಿತಗೊಳಿಸುವ ಈ ಉತ್ತಮ ಸ್ವಾಸ್ಥ್ಯದ ಬಗೆಗೆ ನಾವು ನಮ್ಮ ಗೌರವಶಾಲೀ ಅತೀತದ ಬಗೆಗೆ ದೃಷ್ಟಿ ಹರಿಸಿದರೆ, ಈ ಲಕ್ಷ್ಯವನ್ನು ಬಹಳ ಸುಲಭವಾಗಿ ಹೊಂದಬಹುದು. ಯೋಗ, ಆಯುರ್ವೇದ ಮೊದಲಾದ ಪಾರಂಪರಿಕ ಚಿಕಿತ್ಸಾ ಪದ್ಧತಿಗಳ ವಿಷಯವಾಗಿ ನಮ್ಮ ಪೂರ್ವಜರು ನಮ್ಮನ್ನು ಎಷ್ಟು ಸಮದ್ಧಗೊಳಿಸಿದ್ದಾರೆಂದರೆ ಇಂದು ಜಗತ್ತಿನ ಇತರ ದೇಶಗಳೂ ಈ ಸಮೃದ್ಧಿಯ ಸಂಪರ್ಕದಲ್ಲಿರಲು ಕಾತುರವಾಗಿವೆ.

ಆಧುನಿಕ ಚಿಕಿತ್ಸಾ ಪದ್ಧತಿಗಳ ಅಸೀಮ ಉನ್ನತಿಯ ಹೊರತಾಗಿಯೂ ಇಂದು ಸಮಸ್ತ ವಿಶ್ವಕ್ಕೆ ಭಾರತದ ಪಾರಂಪರಿಕ ಚಿಕಿತ್ಸಾ ಪದ್ಧತಿಗಳಲ್ಲಿಯೇ ಆರೋಗ್ಯದ ವಾಸ್ತವಿಕ ಕಿರಣವು ಕಂಡು ಬರುತ್ತಿದೆ. ಆಧುನಿಕ ಪದ್ಧತಿ ಆರೋಗ್ಯವನ್ನು ಕಮ್ಮಿಯಾಗಿ, ದುಷ್ಪ್ರಭಾವವನ್ನು ಅಧಿಕವಾಗಿಯೂ ಉಂಟು ಮಾಡುವಂತಿರುವುದನ್ನು ಎಲ್ಲರೂ ಗಮನಿಸಿಯೇ ಇದ್ದಾರೆ.

ಅದೇ ಭಾರತದ ಪಾರಂಪರಿಕ ಪದ್ಧತಿ ದುಷ್ಪ್ರಭಾವದಿಂದ ಯೋಜನಗಳಷ್ಟು ದೂರವಿದೆ. ಅಲ್ಲದೆ, ಈ ಪಾರಂಪರಿಕ ಚಿಕಿತ್ಸಾ ಪದ್ಧತಿಗಳು ಬಹಳ ಸರಳ ಸಿದ್ಧಾಂತಗಳೇ ಹೊಂದಿದ್ದು ಎಲ್ಲರಿಗೂ ಅನುಸರಿಸಲು ಯೋಗ್ಯವಾಗಿವೆ. ಇವುಗಳ ಪ್ರಯೋಗದಿಂದ ಶರೀರ ಸದಾ ಸ್ವಸ್ಥವಾಗಿರುವುದಲ್ಲದೆ ಮನಸ್ಸು ಪ್ರಫುಲ್ಲಿತವಾಗಿರುತ್ತದೆ. ಮಾನವ ಜೀವನ ಈಶನಿಂದ ಪ್ರದತ್ತವಾದ ಅನುಪಮ ಕೊಡುಗೆಯಾಗಿದ್ದು ಇದನ್ನು ಸೂಕ್ತ ರೀತಿಯಲ್ಲಿ ನಡೆಸಿಕೊಂಡರೆ ಮನೋಭೀಷ್ಟಗಳನ್ನು ಪೂರೈಸಿಕೊಳ್ಳಬಹುದು. ಆದುದರಿಂದ ನಮ್ಮ ಶರೀರವನ್ನು ನಿರೋಗಿಯಾಗಿರಿಸಿ ಕೊಳ್ಳುವುದಕ್ಕಾಗಿ ಪ್ರಯತ್ನಶೀಲರಾಗಿರಬೇಕು. ಆರೋಗ್ಯವನ್ನು ಚೆನ್ನಾಗಿರಿಸಿಕೊಳ್ಳಲು ಧನ-ಸಂಪತ್ತುಗಳು ಬೇಕು ಎಂಬುದಾಗಿ ಬಹಳಷ್ಟು ಮಂದಿ ಹೇಳುವುದನ್ನು ಕೇಳುತ್ತೇವೆ. ಆದರೆ ಹೀಗೆ ತಿಳಿಯುವುದು ಪೂರ್ಣ ತಪ್ಪು. ಸ್ವಾಸ್ಥ್ಯವನ್ನು ಹಿತಕಾರೀ ಆಹಾರ-ವಿಹಾರಗಳಿಂದ ಉತ್ತಮವಾಗಿರಿಸಿಕೊಳ್ಳಬಹುದೇ ಹೊರತು ಧನದಿಂದಲ್ಲ. ಧನದಿಂದ ಸ್ವಾಸ್ಥ್ಯಲಾಭವಾಗುವುದಾದರೆ ಧನಿಕರೆಲ್ಲ ಆರೋಗ್ಯವಂತರಾಗಿರಬೇಕಿತ್ತು. ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಲು ಮೊದಲ ಸ್ಥಾನ ಆಹಾರ. ಸಾದಾ ಹಾಗೂ ಪೋಷಕ ತತ್ವಗಳಿಂದ ಕೂಡಿದ ಆಹಾರದಿಂದಲೇ ನಿರೋಗಿಯಾಗಬಲ್ಲ. ನಾವು ನಮ್ಮ ಆಹಾರ ಪದ್ಧತಿಯಲ್ಲಿ ಅನುಕೂಲಕ್ಕೆ ಬದಲಾವಣೆ ಮಾಡಿಕೊಂಡರೆ ನಮ್ಮ ಅನೇಕ ಸಮಸ್ಯೆಗಳು ಕೆಲವೇ ದಿನಗಳಲ್ಲಿ ಯಾವುದೇ ಔಷಧಿಗಳಿಲ್ಲದೆಯೇ ದೂರವಾಗುವುವು. ಶರೀರವು ಸ್ವಸ್ಥವೂ ಸಬಲವೂ ಆಗುವುದು. ಒಂದು ರೀತಿಯಲ್ಲಿ ಆಹಾರವೇ ನಮ್ಮ ಜೀವನದ ಆಧಾರ. ಇದರ ಸಂಬಂಧ ನಮ್ಮ ತನು-ಮನ-ಧನಗಳೊಂದಿಗೆ ಇದೆ.

ಆಹಾರದ ವಿಷಯದಲ್ಲಿ ಬಹಳ ಮಹತ್ವದ ವಿಷಯವೆಂದರೆ ಅದು ಸುಲಭವಾಗಿ ಜೀರ್ಣವಾಗುವಂತಿರಬೇಕು. ಆಗಲೇ ಅದು ಶರೀರಕ್ಕೆ ಪೋಷಕ ತತ್ವಗಳನ್ನು ಒದಗಿಸುತ್ತದೆ. ಪೌಷ್ಟಿಕ ಆಹಾರವನ್ನು ಹೆಚ್ಚು ಪ್ರಮಾಣದಲ್ಲಿ ತೆಗೆದುಕೊಳ್ಳುವುದರಿಂದ ಶರೀರ ಬಲಿಷ್ಠವಾಗುವುದೆಂದು ಬಹಳಷ್ಟು ಜನರು ತಿಳಿಯುತ್ತಾರೆ. ಹಾಲು, ತುಪ್ಪ, ಹಣ್ಣು ಇತ್ಯಾದಿಗಳನ್ನು ಅವಶ್ಯಕತೆಗಿಂತ ಹೆಚ್ಚಾಗಿ ಸೇವಿಸಿದರೆ ಅದು ಹಾನಿಯನ್ನುಂಟು ಮಾಡುತ್ತದೆ. ಅದರ ಬದಲು ಮಿತವಾಗಿ, ಗುಣವತ್ತತೆಯನ್ನು ಲಕ್ಷ್ಯದಲ್ಲಿರಿಸಿ ಸೇವಿಸಿದ ಪದಾರ್ಥಗಳು ಆರೋಗ್ಯ, ಬಲ, ದೀರ್ಘಾಯುಷ್ಯ, ಹರ್ಷ ಇವುಗಳನ್ನು ಕೊಡುತ್ತವೆ. ಇಂದು ಜನರು ಅಸಮತೋಲನ ಆಹಾರದ ಅಭ್ಯಾಸಿಗಳಾಗಿದ್ದಾರೆ. ಆದುದರಿಂದ ಅವರ ಆರೋಗ್ಯ ದಯನೀಯ ಸ್ಥಿತಿಯಲ್ಲಿದೆ. ಆದರೆ ನಾವು ನಮ್ಮ ಜೀವನದಲ್ಲಿ ಸ್ವಲ್ಪ ಸುಧಾರಣೆ ಮಾಡಿಕೊಂಡಿದ್ದಾದರೆ, ನಮ್ಮ ದಿನಚರ್ಯೆಯನ್ನು ಉತ್ತಮ ಪಡಿಸಿಕೊಂಡಿದ್ದಾದರೆ ನಾವು ಸ್ವಾಸ್ಥ್ಯದ ಒಡೆಯರಾಗುತ್ತೇವೆ.

ನಾವು ಶುದ್ಧ ಆಹಾರವನ್ನು ಸೇವಿಸಿದರೆ ನಮ್ಮ ಮನಸ್ಸು ಶುದ್ಧವಿಚಾರಗಳದಾಗುತ್ತದೆ. ನಮ್ಮ ಸ್ಮರಣಶಕ್ತಿಯೂ ಹೆಚ್ಚುತ್ತದೆ. ಆಹಾರ-ಪಾನೀಯಗಳೊಂದಿಗೆ ಸಂಬಂಧಿಸಿದ ಕೆಲವು ಅಭ್ಯಾಸಗಳು ಆರೋಗ್ಯದ ಮೇಲೆ ಅಪಾರವಾದ ಪರಿಣಾಮವನ್ನು ಮಾಡುತ್ತವೆ. ಚೆನ್ನಾಗಿ ಜಗಿದು ಆಹಾರವನ್ನು ನುಂಗುವುದು ಶಾಂತಚಿತ್ತರಾಗಿ ನಿಧಾನವಾಗಿ ಊಟ ಮಾಡುವುದು, ನಿಶ್ಚಿತ ಸಮಯದಲ್ಲಿಯೇ ಹಸಿವೆಗಿಂತ ಒಂದು ತುತ್ತು ಕಡಿಮೆ ಆಹಾರವನ್ನೇ ಸೇವಿಸುವುದು-ಇವುಗಳು ಆಹಾರದ ಬಗೆಗೆ ನಾವು ಅಳವಡಿಸಿಕೊಳ್ಳಬೇಕಾದ ನಿಯಮಗಳು. ಇವುಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡಾಗ ನಮ್ಮ ಆರೋಗ್ಯದ ಮಟ್ಟ ಚೆನ್ನಾಗಿರುವುದಲ್ಲದೆ ನಮ್ಮನ್ನು ಅದು ಸಫಲತೆಯತ್ತ ಕೊಂಡೊಯ್ಯಲಿದೆ.

(ಸಾಭಾರ-ವೇದತರಂಗ)

ದಲಿತಪ್ರಶ್ನೆ ಮತ್ತು ಮಹಾತ್ಮಾ ಗಾಂಧೀ

- ರಾಕೇಶ್ ಸಕ್ಸೇನಾ

ಭಾರತದಲ್ಲಿ ದಲಿತ ಶಬ್ದ ಮತ್ತು ಅದರ ಚಾಲನೆ ಇಂಗ್ಲೀಷ ರಾಜ್ಯ ಸ್ಥಾಪನೆಯ ನಂತರವಾಯಿತು. ಭಾರತದಿಂದ ವಿದೇಶಗಳಿಗೆ ಹೋಗಿ ವ್ಯಾಸಂಗ ಮಾಡುತ್ತಿರುವ ಯುವಕರ ಬೌಧಿಕ ಪ್ರತಿಭೆಯಲ್ಲಿ ಸ್ವಾತಂತ್ರ್ಯ, ಸಮತೆ ಬಂಧುತ್ವ ಮತ್ತು ರಾಷ್ಟ್ರವಾದದ ಸಂಕಲ್ಪಗಳು ಆತ್ಮಸತ್ ಆಗುತ್ತಿದ್ದವು, ಭಾರತಕ್ಕೆ ಬಂದು ಈ ಯುವಕರು ತಮ್ಮ ದೇಶ ಮತ್ತು ಸಮಾಜಕ್ಕೆ ತಮ್ಮ ಸಂಕಲ್ಪಗಳ ಅನುರೂಪವಾಗಿ ಆಕಾರ ಕೊಡಬಯಸುತ್ತಿದ್ದರು. ಅದೇ ರೀತಿಯಲ್ಲಿ ಡಾ॥ ಅಂಬೇಡ್ಕರ್ ಅಮೇರಿಕಾದಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು ಭಾರತಕ್ಕೆ ಹಿಂದಿರುಗಿದರು ಆಗ ಮಹಾರಾಷ್ಟ್ರದಲ್ಲಿ ಮಹಾದೇವ ಗೋವಿಂದ ರಾನಡೆ ಮತ್ತು ಜ್ಯೋತಿಬಾಪುಲೆ ಜನ ಜಾಗೃತಿ ಆಂದೋಲನ ನಡೆಸುತ್ತಿದ್ದರು. ಮತ್ತು ಇನ್ನು ಕೆಲ ಸಮಾಜ ಸುಧಾರಕರಿದ್ದರು. ಡಾ. ಅಂಬೇಡ್ಕರ ಮಹಾರಾಷ್ಟ್ರದಲ್ಲಿದ್ದ ಪೇಶವಾಯಿ ರೀತಿನೀತಿಗಳ ವಿರುದ್ಧ ಹಾಗೂ ವ್ಯವಸ್ಥೆಗಳ ವಿರುದ್ಧ ಒಂದು ವೈಚಾರಿಕ ವ್ಯವಸ್ಥಿತ ಸಂಘರ್ಷ ಪ್ರಾರಂಭಿಸಿದರು. ಈ ಸಂಘರ್ಷದ ಅವಧಿಯಲ್ಲಿಯೇ ಡಾ.ಅಂಬೇಡ್ಕರ್‌ರವರು 'ದಲಿತ' ಶಬ್ದ ಪ್ರಯೋಗ ಮಾಡಿದರು. ಯಾರು ಭಾರತದ ಸಾಮಾಜಿಕ ವ್ಯವಸ್ಥೆಯ ಚೌಕಟ್ಟಿನಲ್ಲಿ ತಮ್ಮ ಸ್ಥಾನ ಹಾಗೂ ನಿರ್ಧಾರಿತ ಹಿನ್ನಲೆಯ ಕಾರಣದಿಂದಾಗಿ ಸ್ವಾತಂತ್ರ್ಯ ಮತ್ತು ಸಮಾನತೆಯ ಮೌಲ್ಯಗಳನ್ನು ಅನುಭವಿಸುವಲ್ಲಿ ಅಸಮರ್ಥರಾಗಿದ್ದರೋ ಆ ಸಮೂಹವನ್ನು ಉದ್ದೇಶಿಸಿ ದಲಿತ ಎಂಬ ಶಬ್ದದ ಪ್ರಯೋಗ ಮಾಡಿದರು. ಈ ಶಬ್ದದಲ್ಲಿ ಶೂದ್ರವರ್ಣದ ಅಂಗವಾಗಿರುವಂತೆ ಜಾತಿಗಳು, ವರ್ಣವ್ಯವಸ್ಥೆಯ ಹೊರಗಿನ ಜಾತಿಗಳು ಮತ್ತು ಸ್ತ್ರೀಯರು ಒಳಗೊಂಡಿದ್ದರು. ಆದರೆ ಈ ಶಬ್ದ ಸಮಾಜದಲ್ಲಿ ಯಾರನ್ನು ಅಸ್ಪೃಶ್ಯರೆಂದು ತಿಳಿಯಲಾಗುತಿತ್ತೊ ಅವರನ್ನು ಸೂಚಿಸುವ ಸಂಕೇತ ಈ ಶಬ್ದವಾಯಿತು. ಮಹಾರಾಷ್ಟ್ರದ ಮಹರ್ ಮತ್ತು ಉತ್ತರ ಭಾರತದ ಚಮ್ಮಾರ ಹಾಗೂ ಭಂಗಿ ಇತ್ಯಾದಿ ಜಾತಿಗಳಿಗೂ ಕೂಡ ದಲಿತ ಶಬ್ದವನ್ನು ಪ್ರಯೋಗಿಸುವ ರೂಢಿಯಾಯಿತು.

ಅಂಬೇಡ್ಕರರ ಪ್ರಯತ್ನಗಳು ನಡೆಯುತ್ತಿದ್ದ ಕಾಲದಲ್ಲಿ ಮಹಾತ್ಮ ಗಾಂಧೀ ದೇಶದ ರಾಜಕೀಯ ಕ್ಷಿತಿಜದ ಮೇಲೆ ನಾಯಕರಾಗಿ ರೂಪಗೊಳ್ಳುತ್ತಿದ್ದರು. ಉತ್ತರ ಭಾರತದಲ್ಲಿ ಆರ್ಯ ಸಮಾಜದ ಕಾರ್ಯಕ್ರಮಗಳಲ್ಲಿ ಯಾವ ಜಾತಿಗಳನ್ನು ಅಂಬೇಡ್ಕರರು ದಲಿತರೆಂದು ಕರೆಯುತ್ತಿದ್ದರೊ ಆ ಜಾತಿಗಳ ಜನರಿಗೆ ಜನಿವಾರ ಹಾಕಿ, ಸಂಸ್ಕೃತ ಕಲಿಸಿ, ಯಜ್ಞ ಕರ್ತರನ್ನಾಗಿ ಮಾಡಿ ಅವರ ಸಾಮಾಜಿಕ ಸ್ಥಾನವನ್ನು ಮಾರ್ಪಡಿಸುತಿತ್ತು. ಅದೇ ಉತ್ತರ ಭಾರತದಲ್ಲಿ ಮಹಾತ್ಮ ಗಾಂಧೀ ಆ ಜಾತಿಗಳನ್ನು ಹರಿಜನವೆಂದು ಕರೆದರು. ಅವರ ಬಳಿ ಹೋಗಿ ಇರುವುದು ಮತ್ತು ತಮ್ಮ ಆಶ್ರಮದಲ್ಲಿ ಎಲ್ಲಿ ಸರ್ವಣೀಯ ಕಾರ್ಯಗಳಲ್ಲಿ ಭಂಗಿ ಕಾರ್ಯಗಳನ್ನು ಕೂಡ ಸೇರಿಸಿಕೊಳ್ಳುವುದು ಇತ್ಯಾದಿ ಮಾಡುತ್ತಿದ್ದರು. ಇದು ಗಾಂಧೀಯ ಮಾರ್ಗವಾಗಿತ್ತು. ದಲಿತ ಪ್ರಶ್ನೆ ಒಂದು ಜನಾಂಗೀಯ ಪ್ರಶ್ನೆ ಆಗಲೆಂದು ಇಂಗ್ಲೀಷರು ಪ್ರಯತ್ನಿಸಿದರು. ಕೊನೆಗೆ ಒಂದು ಸ್ವತಂತ್ರ

ರಾಷ್ಟ್ರ ಬೇಡಿಕೆಯತ್ತ ಹೋಗುವಂತೆ ಮಾಡುವ ಉದ್ದೇಶ ಅವರದಾಗಿತ್ತು. ಬ್ರಿಟಿಷ್ ಆಡಳಿತದ ಕಾರ್ಯಯೋಜನೆಯಲ್ಲಿ ಮುಸ್ಲಮಾನರು ನಂತರ ದಲಿತರ ಸಮಸ್ಯೆಯನ್ನು ಎತ್ತಿಕೊಳ್ಳುವುದು ಒಂದಾಗಿತ್ತು. ಆದ್ದರಿಂದ ಪ್ರತ್ಯೇಕ ಮತದಾರರ ವ್ಯವಸ್ಥೆಯನ್ನು ಮಾಡಿ ಮುಸ್ಲಿಂ ಲೀಗ್‌ನ ಪ್ರಯತ್ನ ಹಾಗೂ ಪ್ರತ್ಯೇಕ ರಾಷ್ಟ್ರದ ಬೇಡಿಕೆಯ ನೀತಿಯನ್ನು ದಲಿತರ ಮೂಲಕ ಪರೀಕ್ಷಿಸಲು ಇಂಗ್ಲೀಷರು ಬಯಸುತ್ತಿದ್ದರು. ಡಾ॥ ಅಂಬೇಡ್ಕರ್ ತಮ್ಮ ದಲಿತ ಸಮಾಜಕ್ಕೆ ಮುಕ್ತಿ ಮಾರ್ಗವನ್ನು ಹುಡುಕುವ ನಿಟ್ಟಿನತ್ತ ಪ್ರತ್ಯೇಕ ಆಯ್ಕೆಯ ತಮ್ಮ ಅನುಕೂಲದ ಅಳತೆ ಗೋಲನ್ನಾಗಿ ಇಟ್ಟುಕೊಂಡಿದ್ದರು. ಆದರೆ ಮಹಾತ್ಮ ಗಾಂಧೀ ಓರ್ವ ರಾಷ್ಟ್ರವಾದಿ ಚಿಂತಕರ ರೂಪದಲ್ಲಿ ದೇಶದ ವಿಭಜನೆಯ ಇಂಗ್ಲೀಷರ ಈ ಕುತಂತ್ರವನ್ನು ಅರಿತು ಕೊಂಡಿದ್ದರು. ಆದ್ದರಿಂದ ಆಮರಣ ಉಪವಾಸ ಮಾಡಿ ಈ ರಾಷ್ಟ್ರ ವಿಭಜನೆಯನ್ನು ತಡೆಯುವ ಪ್ರಯತ್ನವನ್ನು ಮಾಡಿದ್ದರು. ಡಾ॥ ಅಂಬೇಡ್ಕರ್ ಗಾಂಧೀಯವರೊಂದಿಗೆ ಮಾತುಕತೆ ಮಾಡಿದಾಗ ಅವರು ಕೂಡ ಈ ಮಾತನ್ನು ಅರ್ಥಮಾಡಿಕೊಂಡರು ಮತ್ತು ಪೂನಾ ಒಪ್ಪಂದದ ರೂಪದಲ್ಲಿ ಭಾರತೀಯ ಸಮಸ್ಯೆಗೆ ಭಾರತೀಯ ಪರಿಹಾರವನ್ನು ಕಂಡು ಹಿಡಿಯಲಾಯಿತು. ಅಂದರೆ ಕಾನೂನು ರಚನೆಯಲ್ಲಿ ನಿಶ್ಚಿತವಾದ ಸಹಭಾಗಿತ್ವವಿದ್ದರೂ ಆಯ್ಕೆಯ ಘಟಕ ಇಡೀ ಸಮಾಜ. ಕಾಲಾಂತರದಲ್ಲಿ ಮೀಸಲಾತಿಯ ಕಲ್ಪನೆ ಇದೇ ಆಧಾರದ ಮೇಲೆ ಹುಟ್ಟಿಕೊಂಡಿತ್ತು. ಈ ಬಗ್ಗೆ ಡಾ॥ಅಂಬೇಡ್ಕರ್ ಮತ್ತು ಮಹಾತ್ಮಗಾಂಧೀಯವರಿಗೂ ಒಪ್ಪಿಗೆಯಿತ್ತು. ಇಬ್ಬರೂ ಅಂಬೇಡ್ಕರ್ ಮತ್ತು ಮಹಾತ್ಮಗಾಂಧೀ ಭಾರತ ಒಂದು ರಾಷ್ಟ್ರವೆಂಬ ದೃಷ್ಟಿಕೋನವನ್ನು ಹೊಂದಿದ್ದರು. ಡಾ॥ ಅಂಬೇಡ್ಕರ್ ಮತ್ತು ಗಾಂಧೀಜಿಯವರ ವಿಚಾರಗಳ ಈ ಸಂಗಮ ಅಂತತಃ ಭಾರತ ವಿಭಜನೆಯಂತಹ ಬೇರೆ ತಪ್ಪು ಆಗದಂತೆ ತಡೆಯಲು ಸಮರ್ಥವಾಯಿತು. ಈ ಕಾರಣದಿಂದಲೇ ಭಾರತದ ಸ್ವಾತಂತ್ರ್ಯದ ಉಷಃಕಾಲದಲ್ಲಿ ಅಂಬೇಡ್ಕರರು ಮುಸಲ್ಮಾನ ಅಥವಾ ಕ್ರಿಶ್ಚಿಯನ್ ಆಗದೆ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಸಂವಿಧಾನ ಸಭೆಯ ಡ್ರಾಫ್ಟಿಂಗ್ ಕಮಿಟಿಯ ಛೇರ್ಮನ್ ಆಗಲುಒಪ್ಪಿಕೊಂಡರು. ಮೀಸಲಾತಿಯ ಮಾಧ್ಯಮದ ಮೂಲಕ ಭಾರತ ದೇಶ ಒಂದಾಗಿ ಉಳಿಯುವ ಮಾರ್ಗವನ್ನು ಸುಗಮಗೊಳಿಸಿದರು.

ಗಾಂಧೀಯವರು ಸ್ವರಾಜ್ಯ ಪ್ರಾಪ್ತಿಗಾಗಿ ತಮ್ಮ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಕೋಮು ಸೌಹಾರ್ದತೆ (ಹಿಂದು-ಮುಸಲ್ಮಾನ ಏಕತೆ)ಯ ನಂತರ ಎರಡನೇ ಸ್ಥಾನವನ್ನು ಅಸ್ಪೃಶ್ಯತೆಯ ನಿವಾರಣೆಗೆ ಕೊಟ್ಟರು. ಈ ಸಂಬಂಧವಾಗಿ ತಮ್ಮ ಆಶಯದ ಸಾರವನ್ನು ಅವರ ಹೇಳಿಕೆಯ ಈ ಕೆಳಗಿನ ಅಂಶದಿಂದ ತಿಳಿದುಕೊಳ್ಳಬಹುದ್ದಾಗಿದೆ. "ಹರಿಜನ ಸಹೋದರ ಸಹೋದರಿಯರನ್ನು ಬೇರೆಲ್ಲ ಹಿಂದುಗಳು ತಮ್ಮಿಂದ ದೂರ ಇಡುತ್ತಾರೆ ಮತ್ತು ಈ ಕಾರಣದಿಂದಾಗಿ ಹರಿಜನರಿಗೆ ಯಾವ ಪ್ರಕಾರದ ಭಯಾನಕ ಮತ್ತು ರಾಕ್ಷಸಿ ವ್ಯವಹಾರಗಳನ್ನು ಎದುರಿಸಬೇಕಾಗುತ್ತದೋ ಅದಕ್ಕೆ ಸಮಾನವಾದ ಉದಾಹರಣೆ ಪ್ರಪಂಚದಲ್ಲಿ ಎಲ್ಲಿ ಕೂಡ ಹುಡುಕಿದರೂ ದೊರೆಯುವುದಿಲ್ಲವೆಂಬ" ಮಾತನ್ನು ಯಾರು ತಾನೇ ನಿರಾಕರಿಸಬಲ್ಲರು? ಅಸ್ಪೃಶ್ಯತೆಯ ನಿವಾರಣೆ ಕೆಲಸ ಎಷ್ಟೊಂದು ಕಷ್ಟಕರವಾಗಿದೆ ಎಂಬುದನ್ನು ನಾನು ನನ್ನ ಅನುಭವದಿಂದ ಬಲ್ಲೆ, ಆದರೆ ಸ್ವರಾಜ್ಯದ ಕಟ್ಟಡವನ್ನು ಕಟ್ಟುವ ಯಾವ ಕೆಲಸವನ್ನು ನಾನು ಕೈಗೆತ್ತಿ ಕೊಂಡಿದ್ದೇನೆಯೋ ಆ ಕೆಲಸದ ಒಂದು ಭಾಗವಾಗಿ ಈ ಕಾರ್ಯವಿದೆ.

ಗಾಂಧೀಯವರು ದಲಿತ ಪ್ರಶ್ನೆಯನ್ನು ತಮ್ಮ ಸ್ವರಾಜ್ಯದ ಸಂಘರ್ಷದ ಒಂದು ಮಹತ್ವಪೂರ್ಣ ಭಾಗವೆಂದು ತಿಳಿದು ಕಾಂಗ್ರೆಸ್ ಕಾರ್ಯಕರ್ತರು ಇದನ್ನು ಸಾಮಾನ್ಯ ಕೆಲಸವೆಂದು ಭಾವಿಸದೆ ಹಿಂದು ಧರ್ಮದ ಅನಿವಾರ್ಯ ಕೆಲಸವೆಂದು ತಿಳಿಯಬೇಕು. ಮತ್ತು ಪ್ರತಿಯೋರ್ವ ಹಿಂದುವಿನ ಮನಸ್ಸಿನಲ್ಲಿ ಮತ್ತು ಸಂಸ್ಕಾರದಲ್ಲಿ ಅಸ್ಪೃಶ್ಯತೆಯ ನಿವಾರಣೆಯ ಕಾರ್ಯವನ್ನು ಸೇರಿಸಿಕೊಳ್ಳಬೇಕು. ಎಂದು ಅವರು ನಿರಂತರವಾಗಿ ಪ್ರಯತ್ನಿಸಿದರು. ಈ ಸಂಬಂಧದಲ್ಲಿ ಗಾಂಧೀಯವರು ಹೀಗೆ ಬರೆದಿದ್ದಾರೆ. "ಇಂದಿನ ಈ ಸಮಯದಲ್ಲಿ ಹಿಂದೂ ಧರ್ಮಕ್ಕೆ ಅಂಟಿಕೊಂಡಿರುವ ಅಸ್ಪೃಶ್ಯತೆ ಶಾಪವನ್ನು ಹಾಗೂ ಕಳಂಕವನ್ನು ತೊಡೆದು ಹಾಕುವ ಅವಶ್ಯಕತೆಯ ಬಗ್ಗೆ ವಿವರವಾಗಿ ಬರೆಯುವ ಅಗತ್ಯವಿಲ್ಲ. ಅಸ್ಪೃಶ್ಯತೆ ನಿವಾರಣೆಯತ್ತ ಕಾಂಗ್ರೆಸಿಗರು ಬಹಳಷ್ಟು ಕೆಲಸವನ್ನೇನೊ ಮಾಡಿರುವುದು ನಿಜ. ಆದರೆ ಹೆಚ್ಚಿನ ಸಂಖ್ಯೆಯ ಕಾಂಗ್ರೆಸಿಗರು ಅಸ್ಪೃಶ್ಯತೆಯ ನಿವಾರಣೆಯನ್ನು ಹಿಂದೂ ಧರ್ಮದ ಕಳಂಕವೆಂದು ತಿಳಿಯುವುದರ ಬದಲು ಅಂದೊಂದು ಹಿಂದು ಧರ್ಮದ ಅಗತ್ಯವಾದ ವಸ್ತುವೆಂದು ತಿಳಿದಿದ್ದಾರೆಂಬುದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. "ಒಂದು ವೇಳೆ ಕಾಂಗ್ರೆಸಿಗರು ಅಸ್ಪೃಶ್ಯತೆ ನಿವಾರಣೆಯಲ್ಲಿಯೇ ತಮ್ಮ ಜೀವನದ ಸಾರ್ಥಕತೆಯಿದೆ ಎಂದು ತಿಳಿದು ಆ ಕೆಲಸವನ್ನು ಕೈಗೆತ್ತಿಕೊಂಡರೆ ಸನಾತನಿ ಎಂದು ಹೇಳಿಕೊಳ್ಳುವ ತಮ್ಮ ಧರ್ಮ ಬಂಧುಗಳ ಮೇಲೆ ಇದುವರೆಗೆ ಆಗಿರುವ ಎರಡರಷ್ಟು ಪ್ರಭಾವನ್ನುಂಟುಮಾಡಿ ಅವರ ಹೃದಯ ಪರಿವರ್ತನೆ ಮಾಡಬಲ್ಲರು."

ಕಬೀರ ಪರಂಪರೆಯ ಸಂತ ನರಸಿಂಹ ಮೇಹತ ತಮ್ಮ ಭಜನೆಗಳಲ್ಲಿ ಅಸ್ಪೃಶ್ಯರನ್ನು 'ಹರಿಜನರೆಂದು' ಸಂಬೋಧಿಸಿದ್ದಾರೆ. ಅದನ್ನು ಅಸ್ಪೃಶ್ಯರು ಕೂಡ ಸರಿಯಾದ ಶಬ್ದವೆಂದು ಒಪ್ಪುತ್ತಿದ್ದರು. ಆದ್ದರಿಂದ ಗಾಂಧೀಜಿಯವರು ದಲಿತರ ಬಗ್ಗೆ ಹರಿಜನ ಶಬ್ದದ ಪ್ರಯೋಗ ಮಾಡಿದರು. ಇಂಗ್ಲೀಷರು ಭಾರತಕ್ಕೆ ಬರುವ ಮೊದಲೇ ಸಂತ ಪರಂಪರೆ ಭಾರತೀಯ ಸಮಾಜದ ಅಭಿಶಾಪವಾಗಿರುವ ಜಾತಿಪದ್ಧತಿಯ ವಿರುದ್ಧ ತನ್ನಯುದ್ಧ ಹೂಡಿ ಗೆದಿದ್ದರು. ಇದರ ಒಂದು ಅನಿವಾರ್ಯ ಅಭಿವ್ಯಕ್ತಿಯ ರೂಪದಲ್ಲಿ ರೈದಾಸ್ (ಚಮ್ಮಾರ)ನನ್ನೆ ಓರ್ವ ಸಂತನ ರೂಪದಲ್ಲಿ ಕಾಣುವುದು. ಕ್ಷತ್ರಿಯಳಾಗಿದ್ದ ಮೀರಾ ರೈದಾಸನನ್ನು ತನ್ನ ಗುರುವೆಂದು ಸ್ವೀಕರಿಸುವುದು ಅವರನ್ನು ಭೇಟಿ ಮಾಡಲು ಹೋಗುವುದು ಮತ್ತು ಅವರ ಪಾದಕ್ಕೆ ನಮಸ್ಕರಿಸುವುದು ರೈದಾಸರ ದೇವಸ್ಥಾನಗಳ ನಿರ್ಮಾಣಮಾಡುವುದು ಇತ್ಯಾದಿಗಳ ರೂಪದಲ್ಲಿ ನೋಡಬಹುದಾಗಿದೆ. ಸಿಖ್ ಧರ್ಮಕೂಡ ತನ್ನಷ್ಟಕ್ಕೆ ಇದೇ ಪ್ರಕಾರದ ಒಂದು ಅಭಿವ್ಯಕ್ತಿಯಾಗಿದೆ. ಮಹಾರಾಷ್ಟ್ರದಲ್ಲಿ ಗುರುರಾಮದಾಸರ ಶಿಷ್ಯ ಶಿವಾಜಿ ಸೇನೆ ಬಂಡಾಯದ ಮೂಲಕ ಸಂತರ ಹೋರಟಾಕ್ಕೆ ರಾಜಕೀಯ ಅಭಿವ್ಯಕ್ತಿಕೊಟ್ಟಿದ್ದರು. ಶಿವಾಜಿ ಸ್ವರೂಪದಲ್ಲಿ ಉತ್ಕರ್ಷವನ್ನು ಪಡೆದಿದ್ದ ಗುನಬಿಗಳನ್ನು ಮರಾಠರನ್ನಾಗಿ ಮಾಡಿ ಅವರ ನೇತೃತ್ವವನ್ನು ಕಿತ್ತುಕೊಂಡರು ಮತ್ತು ಸಮಾಜದಲ್ಲಿ ಬ್ರಾಹ್ಮಣವಾದದ ಪುನರ್‌ಸ್ಥಾಪನೆಯ ಪ್ರತಿಕ್ರಿಯಾವಾದಿ ಪ್ರಯತ್ನ ಮಾಡಲಾಯಿತು. ಅದರ ಪರಿಣಾಮವಾಗಿ ಜ್ಯೋತಿಬಾಫುಲೆ ಮತ್ತು ಅಂಬೇಡ್ಕರಂತವರು ಎದ್ದುನಿಂತರು. ಅವರ ವಿಚಾರಗಳಲ್ಲಿ ಸರ್ವಣೀಯರ ಬಗ್ಗೆ ಆಕ್ರೋಶದ ಪ್ರತಿಧ್ವನಿಯಿದೆ. ಆದರೆ ಮಹಾತ್ಮಗಾಂಧೀ ಸಂತರ ಪರಂಪರೆಯನ್ನು ಅನುಸರಿಸುತ್ತಾ ದಲಿತ ಪ್ರಶ್ನೆಯನ್ನು

ಬಗೆಹರಿಸುವ ಮಾರ್ಗದಲ್ಲಿ ನಡೆಯುತ್ತಾರೆ.

ಗಾಂಧೀ ವಿಚಾರವನ್ನು ತಿಳಿಯುವುದಕ್ಕಾಗಿ ಯಾವ ಪರಿಸ್ಥಿತಿಯಲ್ಲಿ ದಲಿತ ಪ್ರಶ್ನೆಯನ್ನು ಬಗೆಹರಿಸಲು ತೊಡಗಿದರು ಮತ್ತು ಎಷ್ಟೊಂದು ಧೃಡತೆಯೊಂದಿಗೆ ತಮ್ಮ ವಿಚಾರಗಳನ್ನು ಆಚರಣೆಗೆ ತರಲು ಪ್ರಯತ್ನಿಸಿದರು ಎಂಬುದನ್ನು ತಿಳಿಯುವುದು ಅವಶ್ಯಕವಾಗಿದೆ.

ಉಪ್ಪಿನ ಸತ್ಯಾಗ್ರಹ ಇಳಿಮುಖವಾದ ಕಾಲವಾಗಿತ್ತು ಗಾಂಧೀಜಿಯವರನ್ನು ದುಂಡುಮೇಜಿನ ಸಮ್ಮೇಳನಕ್ಕಾಗಿ ಇಂಗ್ಲೆಂಡ್‌ಗೆ ಬರಹೇಳಲಾಗಿತ್ತು. ಅಲ್ಲಿ ಅಲ್ಪಸಂಖ್ಯಾಂತರ ಪ್ರಶ್ನೆಬಗ್ಗೆ ಮಾತನಾಡುತ್ತಾ ಇಂಗ್ಲೀಷ್ ಮನುಷ್ಯ ಮ್ಯಾಕ್ ಡೊನಾಲ್ಡ್ ದಲಿತ ಜಾತಿಗಳನ್ನು ಕೂಡ ಅಲ್ಪಸಂಖ್ಯಾತರೆಂದು ಹೇಳಿ ಅವರಿಗಾಗಿ ಪ್ರತೇಕ ನಿರ್ವಾಚನ ಕ್ಷೇತ್ರ ಇರಬೇಕೆಂದು ಯೋಜನೆ ಮಂಡಿಸಿದ. ಮುಸಲ್ಮಾನರ ಪ್ರಶ್ನೆಯಿಂದಾಗಿ ಪ್ರತ್ಯೇಕ ನಿರ್ವಾಚನದ ಪರಿಣಾಮವನ್ನು ಗಾಂಧೀಜಿ ನೋಡಿದ್ದರು. ಮತ್ತು ಓರ್ವ ರಾಷ್ಟ್ರಭಕ್ತನಾಗಿ ಅವರು ಭಾರತೀಯ ಸಮಾಜದಲ್ಲಿ ಬೇರೆ ಪ್ರಕಾರದ ಕಂದಕಗಳನ್ನು ನಿರ್ಮಿಸುವುದನ್ನು ಸ್ವೀಕರಿಸಲು ಸಾಧ್ಯವಿರಲಿಲ್ಲ. ಆದ್ದರಿಂದ ಗಾಂಧೀಜಿ ಅದನ್ನು ವಿರೋಧಿಸಿದರು ಈ ಸಂಬಂಧವಾಗಿ ಲೇಖಕರಾದ ಹರಿಭಾವು ಉಪಾಧ್ಯಾಯ ಹೀಗೆ ಬರೆದಿದ್ದಾರೆ. "೧೭ ನವಂಬರ್‌ರಂದು ಮ್ಯಾಕ್ ಡೊನಾಲ್ಡ್ ಅಲ್ಪಸಂಖ್ಯಾತರಿಗೆ ಉಪಯೋಗವಾಗುವ ನಿರ್ಣಯಕ್ಕೆ ವಿಧಿವತ್ತಾಗಿ ಒಪ್ಪಿಗೆಯನ್ನು ಕೊಟ್ಟರು. ಇದರಲ್ಲಿ ದಲಿತ ಜಾತಿಗಳಿಗೂ ಕೂಡ ಪ್ರತ್ಯೇಕ ನಿರ್ವಾಚನ ಕ್ಷೇತ್ರದ ಬೇಡಿಕೆ ಇತ್ತು. ಹುಲ್ಲಿನಡಿಯಲ್ಲಿ ಅವಿತುಕೊಂಡಿದ್ದ ಹಾವನ್ನು ಗಾಂಧೀಜಿ ನೋಡಿದಿರು ಮತ್ತು ತಕ್ಷಣ ತಮ್ಮ ಕಾಲಿನಡಿಯಲ್ಲಿ ಒತ್ತಿ ಹೇಳಿದರು– ದಲಿತಜಾತಿಯವರಿಗೆ ಪ್ರತ್ಯೇಕ ನಿರ್ವಾಚನ ಕ್ಷೇತ್ರದ ಬೇಡಿಕೆ ನನ್ನ ಮಟ್ಟಿಗೆ ಅತ್ಯಂತ ಅಧಿಕ ನಿಷ್ಠುರವಾದ ಪ್ರಹಾರವಾಗಿದೆ. ಇದರ ಅರ್ಥ ಶಾಶ್ವತವಾಗಿ ಬೇರ್ಪಡುವುದು."

ಗಾಂಧೀಜಿಯವರ ಈ ಹೇಳಿಕೆಯಲ್ಲಿ ಭವಿಷ್ಯವನ್ನು ಅರಿತುಕೊಂಡಿರುವ ದೃಷ್ಟಿ ಅಡಗಿದೆ. ಅವರ ದೂರ ದೃಷ್ಟಿಯ ಸತ್ಯತೆ ಸಿದ್ಧವೂ ಆಯಿತು. ಇಂಗ್ಲೀಷರು ಹೋರಟು ಹೋಗುವಾಗ ದೇಶದ ಇನ್ನೊಂದು ವಿಭಜನೆ ಅಸ್ಪೃಶ್ಯಸ್ಥಾನದ ಹೆಸರಿನಲ್ಲಿ ಮಾಡುವ ಯೋಜನೆಯನ್ನು ಪ್ರಸ್ತುತ ಮಾಡುತ್ತಾರೆ. ಅಂಬೇಡ್ಕರವರು ಇದನ್ನು ವಿರೋಧಿಸಿ ಭಾರತ ವಿಭಜನೆಯಾಗುವುದನ್ನು ತಡೆಯುತ್ತಾರೆ. ಮುಂದೆ ಭವಿಷ್ಯದಲ್ಲಿ ಪಾಕಿಸ್ತಾನದ ಪುನರ್ ವಿಭಜನೆಯಾದಾಗ ರಾಷ್ಟ್ರವು ಧರ್ಮ ಮತ್ತು ಜಾತಿ ಹೆಸರಿನಲ್ಲಿ ರಚಿತವಾಗದೆ ಭೌಗೋಳಿಕ ಗಡಿಯ ಅಂತರ್‌ಗತವಾಗಿಯೇ ನಿರ್ಮಾಣವಾಗುತ್ತದೆ. ಭಾರತದಲ್ಲಿ ರಾಜ್ಯಗಳ ಆಕಾಂಕ್ಷೆಗಳ ಈಡೇರಿಕೆಯನ್ನು ಮೀಸಲಾತಿ ಅಥವಾ ಖಚಿತವಾದ ಪಾಲುಗಾರಿಗಕೆಯ ಸಿದ್ಧಾಂತದ ಪ್ರಕಾರ ಮಾಡಲಾಗಿದೆ ಎಂಬುದು ಭಾರತ ದೇಶದ ವೈಶಿಷ್ಠ. ಗಾಂಧೀಜಿಯವರು ದಲಿತರ ಪರಿಸ್ಥಿತಿ ಬಗ್ಗೆ ಇಂಗ್ಲೀಷರನ್ನು ಕೂಡಾ ಜವಾಬ್ದಾರರನ್ನಾಗಿ ಮಾಡುತ್ತಾರೆ ಮತ್ತು ಸ್ವಾತಂತ್ರ್ಯದ ನಂತರ ಸರ್ಕಾರದಲ್ಲಿ ಅವರಿಗಾಗಿ ಮೀಸಲಾತಿಯ ದೃಷ್ಟಿಯನ್ನು ಇಟ್ಟುಕೊಳ್ಳುತ್ತಾರೆ. ಅವರು ಹೀಗೆ ಬರೆಯುತ್ತಾರೆ. "ಇಂಗ್ಲೀಷರು ತಮ್ಮ ವೈಜ್ಞಾನಿಕ ರೀತಿ–ನೀತಿಯಿಂದ ದಲಿತರನ್ನು ಹಾಗೂ ಪತಿತರನ್ನು ಯಾವ ಪ್ರಕಾರ ಭಯಂಕರವಾದ ಕಣ–ಕಣದಲ್ಲಿ ಸಿಕ್ಕಿಹಾಕಿಸಿದ್ದಾರೆ ಅದರಿಂದ ಹೊರಬರಲು ಭಾರತ ನಿರಂತರವಾಗಿ ವರ್ಷಾನುಗಟ್ಟಲೆ ಕಾನೂನುಗಳನ್ನು

ಮಾಡುತ್ತಲೇ ಇರಬೇಕಾಗುತ್ತದೆ. ಒಂದು ವೇಳೆ ಅವರನ್ನು ಆ ಸಂಕೋಲೆಯಿಂದ ಹೊರತೆಗೆದು ರಾಷ್ಟ್ರೀಯ ಸರ್ಕಾರ ತನ್ನ ಮನೆಯನ್ನು ವ್ಯವಸ್ಥಿತವಾಗಿ ಇಡಲು ಬಯಸುವುದಾದರೆ ಮೊಟ್ಟಮೊದಲು ಯಾವ ಭಾರದಿಂದ ಅವರು ಅಡಿಯಲ್ಲಿ ಸಿಕ್ಕಿಹಾಕಿಕೊಂಡು ನರಳುತ್ತಿದ್ದಾರೋ ಆ ಎಲ್ಲ ಭಾರಗಳನ್ನು ದೂರಮಾಡಬೇಕಾಗುವುದು.” ಇಂಗ್ಲೆಂಡ್ ಪ್ರಧಾನ ಮಂತ್ರಿ ರಮೆಂಜ್ ಮ್ಯಾಕ್ ಡೊನಾಲ್ಡ್ ದಲಿತರಿಗಾಗಿ ಪ್ರತ್ಯೇಕವಾದ ನಿರ್ವಾಚನಾ ಕ್ಷೇತ್ರಬೇಕೆಂಬ ನಿರ್ಣಯದಿಂದ ಹಿಂತೆಗೆಯದಿದ್ದಾಗ ಗಾಂಧೀಜಿ ಭಾರತಕ್ಕೆ ಬಂದು ೨೦ ಸೆಪ್ಟಂಬರ್ ೧೯೩೨ರಿಂದ ಆಮರಣ ಉಪವಾಸದ ಘೋಷಣೆ ಮಾಡಿದರು. ಈ ಘೋಷಣೆ ಪರಿಣಾಮವಾಗಿ ದಲಿತನಾಯಕರಾಗಿದ್ದ ಶ್ರೀರಾಜಾ ಗಾಂಧೀಜಿಯವರ ಸಮರ್ಥಕರಾದರು ಮತ್ತು ದೇಶದಲ್ಲಿರುವ ದೇವಸ್ಥಾನಗಳ ಬಾಗಿಲುಗಳು ಹರಿಜನರಿಗಾಗಿ ತೆರೆಯಲಾರಂಭಿಸಿದವು ಮತ್ತು ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆಯ ಕೆಲಸವನ್ನು ರಾಜಾರವರು ಸ್ವತಃ ಕೈಗೆತ್ತಿಕೊಂಡರು. ೨೦ ಸೆಪ್ಟಂಬರ್ ೧೯೩೨ರಂದು ಇಡೀ ದೇಶದಲ್ಲಿ ಪ್ರಾರ್ಥನೆಮಾಡಲಾಯಿತು. ಉಪವಾಸದ ೫ನೇ ದಿನ ಪಂಡಿತ ಮದನ ಮೋಹನ್ ಮಾಲವಿಯಾ ನಾಯಕರೆಲ್ಲರ ಒಂದು ಸಮ್ಮೇಳನ ಏರ್ಪಡಿಸಿದರು. ಅದರಲ್ಲಿ ಸರ್ವಣೀಯ ಮುಖಂಡರೊಂದಿಗೆ ಅಂಬೇಡ್ಕರ್ ಹಾಗೂ ಎಲ್ಲ ದಲಿತ ಮುಖಂಡರು ಭಾಗವಹಿಸಿದರು. ಈ ಸಭೆಯಲ್ಲಿ ಎಲ್ಲರೂ ಸೇರಿ ಒಂದು ಯೋಜನೆ ರೂಪಿಸಿದರು. ಅದರ ಪ್ರಕಾರ ದಲಿತ ಜಾತಿಗಳು ಪ್ರತ್ಯೇಕ ನಿರ್ವಾಚನ ಕ್ಷೇತ್ರಗಳಿಂದಲೇ ಸಂತೋಷಗೊಂಡರು. ಸರ್ವಣ ಹಿಂದೂಗಳು ಬ್ರಿಟಿಷ್ ಪ್ರಧಾನ ಮಂತ್ರಿ ಪ್ರತ್ಯೇಕ ನಿರ್ವಾಚನೆ ಕ್ಷೇತ್ರಗಳಿಂದ ಎಷ್ಟೊಂದು ಸೀಟುಗಳನ್ನು ದಲಿತರಿಗೆ ಕೂಡ ಬಯಸಿದ್ದರೂ ಅದರ ಎರಡರಷ್ಟು ಸೇವೆಗಳನ್ನು ದಲಿತರಿಗೆ ಸಂಯುಕ್ತ ನಿರ್ವಾಚನ ಕ್ಷೇತ್ರದಲ್ಲಿ ಮೀಸಲಾಗಿಡುವುದು ಎಂಬುದನ್ನು, ಸ್ವೀಕರಿಸಿದರು. ಈ ನಿರ್ಣಯವನ್ನು ಬ್ರಿಟಿಷ್ ಮಂತ್ರಿಮಂಡಲ ಕೂಡ ಸ್ವೀಕರಿಸಿತು. ೧೯೩೨ ಸೆಪ್ಟಂಬರ್ ೨೬ ಸಂಜೆ ೫ ಗಂಟೆಗೆ ಶ್ರೀ ರವಿಂದ್ರನಾಥ ಠಾಕೂರರ ಉಪಸ್ಥಿತಿಯಲ್ಲಿ ಧಾರ್ಮಿಕ ಭಜನೆ ಮತ್ತು ಪ್ರಾರ್ಥನೆಯ ನಂತರ ಗಾಂಧೀಜಿಯವರು ಉಪವಾಸ ನಿಲ್ಲಿಸಿದರು.

ಇಷ್ಟಕ್ಕೆ ಗಾಂಧೀಜಿ ನಿಲ್ಲಲಿಲ್ಲ. ಅವರು ಹರಿಜನ ಪತ್ರಿಕೆಯ ಪ್ರಕಟಣೆ ಪ್ರಾರಂಭಿಸಿದರು ಮತ್ತು ಹರಿಜನ ಆಂದೋಲನ ನಿರಂತರವಾಗಿ ಮುಂದುವರಿಸಲು ೧೯೩೨ ಮೇ ೮ರಂದು ಪುನಃ ಆತ್ಮಶುದ್ಧಿಗಾಗಿ ೨೧ ದಿನದ ಉಪವಾಸ ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಅವರು ಹೀಗೆ ಬರೆಯುತ್ತಾರೆ.–” ಈ ಉಪವಾಸ ತಮ್ಮ ಮತ್ತು ತಮ್ಮ ಜೊತೆಗಾರರರ ಆತ್ಮ ಶುದ್ಧಿಗಾಗಿ ಹೃದಯ ಪೂರ್ವಕವಾಗಿ ಮಾಡಿದ ಪ್ರಾರ್ಥನೆ. ಇದರಿಂದಾಗಿ ತಾವು ಹರಿಜನ ಕಾರ್ಯವನ್ನು ಹೆಚ್ಚು ಜಾಗರೂಕತೆಯಿಂದ ಮತ್ತು ಎಚ್ಚರಿಕೆಯಿಂದ ಮಾಡಲು ಸಾಧ್ಯವಾಗುವುದು. ಭಾರತದ ಮತ್ತು ಜಗತ್ತಿನ ಇತರ ದೇಶಗಳ ಮಂತ್ರಿಗಳಲ್ಲಿ ವಿನಂತಿಸುವುದೇನೆಂದರೆ ಅವರು ನನ್ನೊಂದಿಗೆ ಪ್ರಾರ್ಥನೆ ಮಾಡಿ ಈ ಅಗ್ನಿಪರೀಕ್ಷೆಯಲ್ಲಿ ನಾನು ಸಹ ಕುಶಲವಾಗಿ ಪಾರಾಗುವಂತೆ ಪ್ರಾರ್ಥನೆ ಮಾಡಲಿ ನಾನು ಸಾಯಲಿ ಅಥವಾ ಬದುಕಲಿ ಯಾವ ಉದ್ದೇಶದಿಂದ ನಾನೀ ಉಪವಾಸವನ್ನು ಕೈಗೊಂಡಿದ್ದೇನೆಯೋ ಅದು ಪೂರ್ಣವಾಗಲಿ. ನಾನು ನನ್ನ ಸನಾತನಿ ಸಹೋದರರಲ್ಲಿ ಅನುರೋಧ ಮಾಡುವುದೇನೆಂದರೆ ಈ ಉಪವಾಸದ ಪರಿಣಾಮ ನನ್ನ ಮೇಲೆ ಏನೇ ಆಗಲಿ ಕನಿಷ್ಠ ಸತ್ಯದ ಮೇಲೆ ಮುಚ್ಚಿರುವ ಹಿರಣ್ಮಯ ಮುಸುಕು

ತೆಗೆಯಲ್ಪಡಲಿ".

ಗಾಂಧೀಜಿಯವರ ಈ ಉಪವಾಸದ ಪ್ರಭಾವ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಮತ್ತು ದೇಶದ ಮೇಲೆ ಉಂಟಾಯಿತು. ಭಯಪಟ್ಟ ಸರಕಾರ ಹರಿಜನ ಪತ್ರಿಕೆಯ ಪ್ರಕಟಣೆಯ ಮೇಲೆ ನಿರ್ಬಂಧ ಹೇರಿತ್ತು. ಅದಕ್ಕಾಗಿ ಗಾಂಧೀಜಿಯವರು ಪುನಃ ಉಪವಾಸ ಮಾಡಬೇಕಾಯಿತು. ಇದರಿಂದಾಗಿ ಅವರ ದೇಹ ಸ್ಥಿತಿ ಕೆಟ್ಟ ನಂತರ ಸರಕಾರ ಅವರನ್ನು ಬಂಧಿಸಿತು ಮತ್ತು ೧೩ ದಿನಗಳ ನಂತರ ಯಾವ ಷರತ್ತಿಲ್ಲದೆ ಅವರನ್ನು ಬಿಟ್ಟಿತು. ಇದಾದ ನಂತರ ಗಾಂಧೀಜಿಯವರ ಪ್ರೇರಣೆಯಿಂದ ಮಾಲ್ವಿಯಾಜಿಯವರ ಅಧ್ಯಕ್ಷತೆಯಲ್ಲಿ ಮುಂಬೈನಲ್ಲಿ ಒಂದು ವಿಶಾಲ ಸಾರ್ವಜನಿಕ ಸಭೆ ನಡೆಯಿತು. ಅಸ್ಪೃಶ್ಯತೆಯನ್ನು ದೂರ ಮಾಡುವುದಕ್ಕಾಗಿ ಒಂದು ಅಖಿಲ ಭಾರತ ಅಸ್ಪೃಶ್ಯತಾ ವಿರೋಧಿ ಸಂಘಟನೆಯನ್ನು ರಚಿಸಲಾಯಿತು. ಶ್ರೀ ಘನಶ್ಯಾಮದಾಸ ಬಿರ್ಲಾ ಅದರ ಅಧ್ಯಕ್ಷರಾದರು ಮತ್ತು ಶ್ರೀ ಅಮೃತಲಾಲ್ ಠಕ್ಕರ್ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು ಈ ಸಂಘಟನೆಯು ನಂತರ "ಹರಿಜನ ಸೇವಕ ಸಂಘದ" ರೂಪದಲ್ಲಿ ಕೆಲಸಮಾಡಲು ಪ್ರಾರಂಭಿಸಿತು.

ತಮ್ಮ ಜೀವನದ ಕಾಲದಲ್ಲಿ ತಮ್ಮ ಉದ್ದೇಶಗಳನ್ನು ಚರಿತ್ರಾರ್ಥ ಮಾಡುವುದಕ್ಕಾಗಿ ಗಾಂಧೀ ಶೈಲಿಯ ಅನುರೂಪದಂತೆ ಗಾಂಧೀಜಿ ಓರ್ವ ಹರಿಜನ ಬಾಲಕಿಯನ್ನು ದತ್ತು ತೆಗೆದುಕೊಂಡರು ಮತ್ತು ಒಂದು ಹರಿಜನ ಪರಿವಾರವನ್ನು ತಮ್ಮ ಆಶ್ರಮದಲ್ಲಿ ಇರುವಂತೆ ಮಾಡಿದರು. ಇದರ ಜೊತೆಗೆ ಸಮಾಜದಲ್ಲಿ ಯಾವ ಸೌಕರ್ಯಗಳು ಹರಿಜನರಿಗೆ ಇಲ್ಲವೊ ಅವುಗಳ ಲಾಭವನ್ನು ಸ್ವಯಂ ಕೂಡಾ ತೆಗೆದುಕೊಳ್ಳವುದಿಲ್ಲ. ಮತ್ತು ತಮ್ಮ ಅನುಯಾಯಿಗಳು ಕೂಡಾ ತೆಗೆದುಕೊಳ್ಳುವುದಿಲ್ಲ. ಉದಾಹರಣೆಗಾಗಿ:- ಯಾವ ದೇವಸ್ಥಾನಗಳಲ್ಲಿ ಹರಿಜನರ ಪ್ರವೇಶಕ್ಕೆ ನಿಷೇಧ ವಿದೆಯೋ ಅವುಗಳ ಉಪಯೋಗವನ್ನು ಅವರು ಮಾಡಿಕೊಳ್ಳುವುದಿಲ್ಲ. ೧೯೩೩ರಲ್ಲಿಯೇ ಹರಿಜನ ಕಾರ್ಯ ನಿಮಿತ್ತ ಹತ್ತು ತಿಂಗಳು ಭಾರತದ ಪ್ರತಿಯೊಂದು ರಾಜ್ಯದ ಪ್ರವಾಸ ಮಾಡಿದರು ಈ ಪ್ರವಾಸದ ಕಾಲದಲ್ಲಿ ೮ಲಕ್ಷ ರೂಪಾಯಿಗಳ ಸಂಗ್ರಹವಾಯಿತು ಮತ್ತು ೧೯೩೪ ಜೂನ್ ೨೫ರಂದು ಪುಣೆಯಲ್ಲಿ ಅವರ ಕಾರ್ ಮೇಲೆ ಬಾಂಬ್‌ನ್ನು ಎಸೆಯಲಾಯಿತು. ಗಾಂಧೀಜಿ ಸ್ವಲ್ಪದರಲ್ಲಿಯೇ ಪಾರಾದರು. ಈ ಘಟನೆಯಲ್ಲಿ ಅವರ ಮರಣವಾಗಬಹುದಿತ್ತು. ಹರಿಜನ ಉದ್ದೇಶಕ್ಕಾಗಿ ಗಾಂಧೀಜಿ ಮಾಡಿದ ಕಾರ್ಯಗಳ ಬಗ್ಗೆ ಎಂಥ ಪ್ರತಿಕ್ರಿಯೆ ಇತ್ತೆಂಬುದು ಇದರಿಂದ ಗೊತ್ತಾಗುತ್ತದೆ. ಆದರೂ ಕೂಡಾ ಗಾಂಧೀಜಿ ತಮ್ಮ ಜೀವನ ವೀಡಿ ತಮ್ಮ ವಿಚಾರದ ಮೇಲೆ ಧೃಡವಾಗಿ ನಿಂತರು. ೧೯೩೪ರಲ್ಲಿ ಕಾಂಗ್ರೆಸ್‌ನ್ನು ಬಿಡುವ ವೇಳೆ ಅಸ್ಪೃಶ್ಯತೆಯ ನಿವಾರಣೆಗೆ ಸರ್ವಾಧಿಕ ಮಹತ್ವ ಪೂರ್ಣ ಸ್ಥಾನಕೊಟ್ಟರು. ಅವರು ತಮ್ಮ ಜೀವನದ ಕೊನೆಯವರೆಗೆ ರಚನಾತ್ಮಕ ಕಾರ್ಯಗಳನ್ನು ತಮ್ಮ ದಿನನಿತ್ಯ ಜೀವನದ ಭಾಗವನ್ನಾಗಿರಿಸಿ ಕೊಂಡಿದ್ದರೆಂಬುದು ನಮಗೆ ಗೊತ್ತಿದೆ. ಆದ್ದರಿಂದ ಅವರು ಹೆಚ್ಚಾಗಿ ಹರಿಜನರ ಮನೆಯಲ್ಲಿಯೇ ಇರುವುದನ್ನು ಇಷ್ಟಪಡುತ್ತಿದ್ದರು. ಈ ಪ್ರಕಾರ ಗಾಂಧೀಜಿಯವರ ಜೀವನ ಅವರ ವಿಚಾರಗಳ ಜೀವನವಾಗಿದೆ. ಒಂದು ಸಲ ಅಹಮದಬಾದ್‌ನಲ್ಲಿ ದಲಿತವರ್ಗ ಸಮ್ಮೇಳನದಲ್ಲಿ ಅವರು ಹೇಳಿದರು -"ನನಗೆ ಎರಡು ದೊಡ್ಡ ಬಯಕೆಗಳಿವೆ ಆ ಕಾರಣಕ್ಕಾಗಿ ನಾನು ಜೀವಂತವಾಗಿದ್ದೆನೆ. ಮೊದಲನೆಯದು ಅಸ್ಪೃಶ್ಯರ ಮುಕ್ತಿ ಮತ್ತು ಎರಡನೆಯದು

ಗೋವಿನ ರಕ್ಷಣೆ. ಈ ಎರಡು ಇಚ್ಛೆಗಳು ಎಂದು ಪೂರ್ಣವಾಗುವವೂ ಆಗಲೇ ಸ್ವ-ರಾಜ್ಯ ದೊರೆಯುವುದು ಮತ್ತು ಅಸ್ಪೃಶ್ಯರ ಮುಕ್ತಿಯಲ್ಲಿಯೇ ನನ್ನ ಮೋಕ್ಷವು ಕೂಡ ಅಡಗಿದೆ.

ಈ ಅಸ್ಪೃಶ್ಯರ ಮುಕ್ತಿಯ ಪ್ರಶ್ನೆ ಕೇವಲ ಅಸ್ಪೃಶ್ಯತೆಯ ನಿವಾರಣೆ ಅಲ್ಲ. ಇದು ದೇಶದಲ್ಲಿ ಸಮಾನತೆಯನ್ನು ಸ್ಥಾಪಿಸುವ ಒಂದು ಕನಸಾಗಿದೆ. ಒಂದು ಸಲ ಇಂಗ್ಲೆಂಡಿನಲ್ಲಿ ಮಾತನಾಡುತ್ತಾ ಅವರು ಹೀಗೆ ಹೇಳಿದರು.-" ಅಸ್ಪೃಶ್ಯರ ಸ್ಥಿತಿಯನ್ನು ಸ್ವಲ್ಪ ನೋಡಿ ಇಂದು ಅವರ ಸ್ಥಿತಿ ಹೇಗಿದೆ ಎಂಬುದನ್ನು ಇಂದು ಅವರ ಬಳಿ ಭೂಮಿಯಿಲ್ಲ ಅದು ಮೇಲ್ವರ್ಗದ್ದಾಗಿದೆ. ಸರಕಾರದ ಕೃಪೆಯ ಮೇಲೆ ಜೀವಿಸುತ್ತಿದ್ದಾರೆ. ಅವರನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಓಡಿಸಬಹುದಾಗಿದೆ. ಈ ಬಗ್ಗೆ ದೂರನ್ನು ಯಾರ ಬಳಿಯೂ ಹೇಳಲಾಗುವುದಿಲ್ಲ, ಮತ್ತು ಕಾನೂನು ಕೂಡಾ ಅವರಿಗೆ ಸಹಾಯ ಮಾಡುವುದಿಲ್ಲ ಆದ್ದರಿಂದ ಯಾವುದೇ ಪ್ರಕಾರದ ಸಮಾನತೆಯನ್ನು ತರುವುದಕ್ಕಾಗಿ ಮೊಟ್ಟ ಮೊದಲನೆಯ ಹೆಜ್ಜೆ ಅವರಿಗೆ ಎಲ್ಲಿಯಾದರೂ ಯಾವ ಮೌಲ್ಯವು ವಿಲ್ಲದೆ ಭೂಮಿಯನ್ನು ಕೂಡಬೇಕು. ಯಾರ ಬಳಿ ಹೆಚ್ಚುವರಿ ಭೂಮಿ ಇದೇಯೋ ಅವರಿಂದ ಪಡೆದು ಕೊಡಬೇಕಾಗುವುದು. ಈ ವಿಷಯದಲ್ಲಿ ಹಿಂದುಗಳು ಭಾಗಿಯಾಗಿರುವವರು, ಇಂಗ್ಲೀಷರು ಕೂಡಾ ಭಾಗಿಯಾಗುವವರು, ಈ ವಿಷಯದಲ್ಲಿ ಬೇಧ ಬಾವ ಇರುವುದಿಲ್ಲ ಈ ನಿಯಮವು ಎಲ್ಲರಿಗೂ ಅನ್ವಯಿಸುವುದು.

ಈ ಪ್ರಕಾರ ಮಹಾತ್ಮಗಾಂಧೀ ಮತ್ತು ಡಾ॥ ಅಂಬೇಡ್ಕರರ ಕನಸುಗಳಲ್ಲಿ ವ್ಯತ್ಯಾಸವಿರಲಿಲ್ಲ ಎಂಬುದು ನಮಗೆ ಸ್ಪಷ್ಟವಾಗಿ ಕಾಣುತ್ತದೆ. ಕನಸನ್ನು ನನಸನ್ನಾಗಿ ಮಾಡಲು ಬಿನ್ನತೆ ಖಂಡಿತ ಇತ್ತು. ಈ ಕಾರಣದಿಂದ ಇಂದಿನ ದಲಿತ ಚಿಂತಕರು ಇವರಿಬ್ಬರನ್ನು ಪರಸ್ಪರ ವಿರೋಧಿ ಸ್ಥಾನದಲ್ಲಿಡುತ್ತಾರೆ. ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಪ್ರಶ್ನೆ ಎತ್ತಿಕೊಂಡು ಬಹುಶಃ ದಲಿತ ಲೇಖಕರು ಹಳ್ಳಿಗಳಲ್ಲಿ ದಲಿತರನ್ನು ಒತ್ತಿಡಲಾಗುವುದು ಮತ್ತು ಇದೇ ಗಾಂಧೀಜಿಯವರ ಆದರ್ಶವಾಗಿದೆ ಎಂದು ಹೇಳುತ್ತಾರೆ. ಇದು ಒಂದು ಕಾಲ್ಪನಿಕ ಆರೋಪವಾಗಿದೆ. ಏಕೆಂದರೆ ಗಾಂಧೀಜಿ ತಮ್ಮ "ಗ್ರಾಮ ಸ್ವರಾಜ್ಯವವನ್ನು" ವಿವರಿಸುತ್ತಾ ಹೀಗೆ ಬರೆದಿದ್ದಾರೆ- "ಜನತಾ ಸ್ವರಾಜ್ಯದ ಅರ್ಥ ಪ್ರತ್ಯೇಕ ವ್ಯಕ್ತಿಯ ಸ್ವರಾಜ್ಯದಿಂದ ಉತ್ಪನ್ನವಾದ ಜನಸತ್ತಾತ್ಮಕ ರಾಜ್ಯ. ಇಂತಹ ರಾಜ್ಯ ಪ್ರತ್ಯೇಕ ವ್ಯಕ್ತಿಯ ನಾಗರಿಕತೆಯ ಯಾವ ಧರ್ಮ ವಿದೆಯೋ ಅದರ ಪಾಲನೆ ಮಾಡುವುದರಿಂದಲೆ ಉತ್ಪನ್ನವಾಗುತ್ತದೆ. ಇಲ್ಲಿ ಪ್ರತ್ಯೇಕ ವ್ಯಕ್ತಿಯೆಂದರೆ ದಲಿತರು ಕೂಡಾ ಒಳಗೊಳ್ಳುತಾನೆ." ಆದ್ದರಿಂದ ಗಾಂಧೀಜಿಯವರು ಸ್ವರಾಜ್ಯದ ಕಲ್ಪನೆ ಯಾವುದೇ ಸಾಮಾಜಿಕ ಶೋಷಣೆಯನ್ನು ಯತವತ್ತಾಗಿ ಹಿಡಿದಿರುವ ಕಲ್ಪನೆಯಲ್ಲ.

ಅಥವಾ ಹೇಳಬಹುದೇನೆಂದರೆ ಗಾಂಧೀ ವಿಚಾರ ಮತ್ತು ವ್ಯವಹಾರವನ್ನು ತಿಳಿಯದಿರುವ ಕಾರಣದಿಂದ ದಲಿತ ಚಿಂತಕರು ಅತಾರ್ಕಿಕ ಪ್ರಶ್ನೆಗಳನ್ನು ಎತ್ತುತ್ತಾರೆ. ಆದರೆ ಡಾ॥ ಅಂಬೇಡ್ಕರ್ ಮತ್ತು ಸಮಸ್ತ ದಲಿತ ಸಮಾಜ ಗಾಂಧಿಯನ್ನರಿತು ಅವರ ಜೊತೆ ರಾಷ್ಟ್ರೀಯ ಆಂದೋಲನದಲ್ಲಿ ಹೆಗಲುಕೊಟ್ಟಿದ್ದರು.

(ಸಾಭಾರ-ಸರ್ವೋದಯ ಜಗತ್ : ಅನು-ಸು.ಕಾ)

ಆಹಾರ ಸುಂದರ ಆಹಾರ!

– ಸತೀಶ್ ಕುಮಾರ್

ಮರಗಳಿಂದ ದೊರೆಯುವ ಆಹಾರ ಮತ್ತು ಸಾವಯವ ಆಹಾರ ಪರಿಸರತ್ಮಾಕವಾಗಿ ಅಗತ್ಯ.

ಸಣ್ಣ ಪುಟ್ಟ ಕ್ರಿಯೆಗಳ ಪರಿಣಾಮವೇ ದೊಡ್ಡ ಸಮಸ್ಯೆಗಳು. ಜಾಗತೀಕ ತಾಪಮಾನ ಮತ್ತು ಆಹಾರದ ಅಭದ್ರತೆ ಇವು ದೊಡ್ಡ ಸಮಸ್ಯೆಗಳೇನೊ ಹೌದು. ನಾವು ದಿನನಿತ್ಯ ಮಾಡುವ ಸಣ್ಣ ಪುಟ್ಟ ಕ್ರಿಯೆಗಳ ಪರಿಣಾಮವೇ ಅವು.

ಇದಕ್ಕೆ ವ್ಯತಿರಿಕ್ತವಾಗಿ ದೊಡ್ಡ ಪರಿಹಾರಗಳ ಬೇರು ಕೂಡ ಚಿಕ್ಕ ಚಿಕ್ಕ ಕ್ರಿಯೆಗಳಲ್ಲಿ ಇರುತ್ತದೆ. ನಾವು ವ್ಯಾಪಾರಮಾಡತ್ತಾ, ಓಡಾಡುತ್ತಾ, ತಿನ್ನುತ್ತಾ ಮತ್ತು ಕುಡಿಯುತ್ತಾ, ಕೆಲಸ ಮಾಡುತ್ತಾ ನಾವು ಜೀವನ ನಡೆಸುತ್ತೇವೆ. ಆಗ ಭೂಮಿಯ ಮೇಲಿನ ಜೀವ ಜಗತ್ತಿನ ಸಮಗ್ರತೆಯನ್ನು ಅಲಕ್ಷಿಸುತ್ತೇವೆ. ನಮ್ಮ ಭೂ ಗ್ರಹದ ಮೇಲಿನ ನಾಜೂಕಾಗಿರುವ ಸಮರಸತೆಯ ಸಮತೋಲನವನ್ನು ಅಸ್ಥಿರಗೊಳಿಸುತ್ತೇವೆ. ಇದಕ್ಕೆ ಬದಲಾಗಿ ನಾವು ದೈನಂದಿನ ಕ್ರಿಯೆಗಳನ್ನು ಜಾಗೂರುಕತೆಯಿಂದಲೂ ಗಮನದಿಂದಲೂ ಮನಸ್ಸಿನಿಂದಲೂ ಮಾಡಿದಲ್ಲಿ ನಾವು ನಮ್ಮ ಇಡೀ ಪರಿಸರ ಸಂರಚನೆಯ ಆರೋಗ್ಯಕ್ಕೆ ಕಾಣಿಕೆ ಸಲ್ಲಿಸುತ್ತೇವೆ.

ನಮ್ಮ ಕಾಲದಲ್ಲಿರುವ ಬಹುದೊಡ್ಡ ಸವಾಲುಗಳನ್ನು ಎದುರಿಸಿದಾಗ ನಾವು ನಿರಾಶಗೊಳ್ಳುವುದು, ಹತಾಶಗೊಳ್ಳವುದು ಮತ್ತು ದುರ್ಬಲಗೊಳ್ಳುವುದು ಸಹಜವೇ ಆಗಿದೆ. "ಹವಾಮಾನ ವೈರುಧ್ಯ, ಕೊಳ್ಳಬಾಕತನ ಹಸಿವು ಮತ್ತು ಸಾಮಾಜಿಕ ಅನ್ಯಾಯ ಮುಂತಾದವುಗಳನ್ನು ಎದುರಿಸಲು ನಾವೇನು ಮಾಡಬೇಕು?"

ಸಮಸ್ಯೆ ಎಷ್ಟೊಂದು ಗೋಜಲಾಗಿದೆಯೋ ಉತ್ತರ ಅಷ್ಟೇ ಸುಲಭವಾಗಿದೆ ಎಂದು ಇ.ಎಫ್.ಶುಮಾಕರ್ ಹೇಳಿದ್ದಾರೆ. ನಮ್ಮಲ್ಲಿಯ ಪ್ರತಿಯೊಬ್ಬರೂ ನಮ್ಮ ಮನೆಯನ್ನು ಕ್ರಮಬದ್ಧವಾಗಿ ಇಡಬಹುದಾಗಿದೆ. ನಮ್ಮ ಮನೆಯನ್ನು ಕ್ರಮಬದ್ಧವಾಗಿ ಇಡುವ ಕೆಲಸ, ನಮ್ಮ ಡೈನಿಂಗ್ ಟೇಬಲ್, ನಮ್ಮ ಅಡುಗೆ ಮನೆ, ನಮ್ಮ ತೋಟ ಮತ್ತು ನಮ್ಮ ಆಹಾರ ಖರೀದಿಯಿಂದ ಪ್ರಾರಂಭವಾಗುತ್ತದೆ. ಮಾತುಗಳಲ್ಲಿ ನಮ್ಮ ಆಹಾರ.

ಜೀವ ಸಂಕುಲದ ಸಮಗ್ರತೆ, ಸಧೃಢತೆ ಮತ್ತು ಸೌಂದರ್ಯವನ್ನು ಕಾಪಾಡಲು ಇಡಬೇಕಾದ ಮೊದಲ ಹೆಜ್ಜೆ ಒಳ್ಳೆಯ ತಾಜಾ, ಸ್ಥಳೀಯ, ಸಾವಯವ ಮತ್ತು ರುಚಿಕರವಾದ ಆಹಾರವನ್ನು ಪ್ರತಿನಿತ್ಯ, ಪ್ರತಿವಾರ, ಪ್ರತಿತಿಂಗಳು ಮತ್ತು ಪ್ರತಿವರ್ಷ ಸೇವಿಸುವುದಾಗಿದೆ. ಇದನ್ನು ಸಾಧಿಸಬೇಕಾದರೆ ನಾವು ಆಹಾರ ಬೆಳವಣಿಗೆಯ ಇಡೀ ಪ್ರಕ್ರಿಯೆ ಬಗ್ಗೆ, ವಿತರಣೆ ಬಗ್ಗೆ, ಮತ್ತು ಆಹಾರವನ್ನು ಸೇವಿಸುವುದರ ಬಗ್ಗೆ ಗಮನ ಕೊಡಲು ಪ್ರಾರಂಭಿಸಬೇಕು. ನಾವು ಎಷ್ಟೇ ವ್ಯಸ್ತವಾಗಿರಬಹುದು ಒಂದು ವೇಳೆ ತೋಟಗಾರಿಕೆಯನ್ನು ಮಾಡಲು ಅಡಿಗೆ ಮಾಡಲು, ಮತ್ತು

ನಮ್ಮ ಕುಟುಂಬದ ಸದಸ್ಯರೊಂದಿಗೆ ಮತ್ತು ಅತಿಥಿಗಳೊಂದಿಗೆ ಊಟಮಾಡಲು ಸಮಯವಿಲ್ಲವೆಂದರೆ ಬದುಕುವುದಕ್ಕೆ, ಈ ಗ್ರಹದ ಸೌಂದರ್ಯವನ್ನು ಉಳಿಸುವುದಕ್ಕೆ ಸಮಯವಿಲ್ಲವೆಂದಾಗುತ್ತದೆ. ನಾವು ದಿನಾಲೂ ತಿನ್ನುತ್ತೇವೆ, ಆದರೆ ನಮ್ಮ ಆಹಾರ ಹೇಗೆ ಬೆಳೆಸಲ್ಪಡುತ್ತದೆ ಎಂಬುದರ ಬಗ್ಗೆ ಮತ್ತು ಅದು ಎಲ್ಲಿಂದ ಬರುತ್ತದೆ ಎಂಬುದರ ಬಗ್ಗೆ ಕಿಂಚಿತ್ತೂ ಗೊತ್ತಿರುವುದಿಲ್ಲ. ನಮ್ಮಂಥವರು ಯಾರು ತರಾತುರಿಯಲ್ಲಿ ಇರುತ್ತೇವೆಯೋ ಯಾರು ರೈಲ್ವೆ ಸ್ಟೇಷನ್‌ನಲ್ಲಿರುವ ಸೂಪರ್ ಮಾರ್ಕಟ್‌ನಲ್ಲಿ ಅಥವಾ ರೈಲಿನಲ್ಲಿ ಸಿದ್ಧವಾಗಿರುವ ಆಹಾರವನ್ನು ಖರೀದಿಸುತ್ತೇವೆಯೋ ಅಂತಹ ನಮಗೆ ಆಹಾರವೆಂಬುದು ಶರೀರಕ್ಕೆ ಹಾಕಿದ ಊರುವಲೆ ಹೊರತು ಇನ್ನೇನಲ್ಲ. ಆದರೆ ಯಾರು ಪರಿಸರಾತ್ಮಕವಾದ ಮನಸನ್ನು ಉಳ್ಳವರಾಗಿರುತ್ತಾರೊ ಮತ್ತು ಆಧ್ಯಾತ್ಮಿಕವಾಗಿ ಜಾಗೃತರಾಗಿರುತ್ತಾರೊ ಅಂತಹವರಿಗೆ ಆಹಾರವು ಪವಿತ್ರವಷ್ಟೇಯಲ್ಲ ಆತ್ಮವನ್ನು ಮತ್ತು ನಮ್ಮ ಸಮಾಜವನ್ನು ಕಾಪಾಡುವಂತದಾಗಿದೆ.

ಉಪನಿಷತ್‌ಗಳ ರಚನಾಕಾರರ ಪ್ರಕಾರ ಆಹಾರ ಇರುವುದರಿಂದಲೇ ಜೀವನ. ಆದ್ದರಿಂದ ಅನ್ನವನ್ನು ತುಚ್ಚೀಕರಿಸುವುದಾಗಲೀ ಅಥವಾ ಅದರ ಬಗ್ಗೆ ಅಸಡ್ಡೆ ತೋರಿಸುವುದಾಗಲಿ ಸಲ್ಲದು. ಆಹಾರ ಎಲ್ಲ ಜೀವಿಗಳ ಶರೀರ, ಮನಸ್ಸು, ಚೇತನ ಮತ್ತು ಆತ್ಮಕ್ಕೆ ಬೇಕಾಗುವ ಪ್ರಾಥಮಿಕ ಅಗತ್ಯ. ದೇವರಿಗಿಂತ ಮೊದಲು ಊಟ ಎಂದು ಸಂತ ಕಬೀರ್ ಹೇಳಿದ್ದಾನೆ.

ದೈಹಿಕ ಬಲವಷ್ಟೇಯಲ್ಲ ಮನೋಬಲಕೂಡ ಆಹಾರವನ್ನುಅವಲಂಬಿಸಿವೆ ಎಂಬುದನ್ನು ತೋರಿಸುವುದಕ್ಕಾಗಿ ತತ್ವಜ್ಞಾನಿಯಾದ ಉದ್ಧಾಲಕ ವೇದಗಳ ವಿಷಯದಲ್ಲಿ ಪಂಡಿತನೂ ತನ್ನ ಮನೋಬಲದ ಸಾಮರ್ಥ್ಯದ ಬಗ್ಗೆ ತುಂಬಾ ಅಭಿಮಾನವನ್ನು ಉಳ್ಳವನೂ ಆದ ತನ್ನ ಮಗ ಶ್ವೇತಕೇತುಗೆ ಹದಿನೈದು ದಿನ ಉಪವಾಸವಿರಲು ಹೇಳಿದ. ಹದಿನೈದು ದಿನಗಳ ನಂತರ ಶ್ವೇತಕೇತುಗೆ ವೇದಗಳನ್ನು ಕಂಠೋಕ್ತವಾಗಿ ಹೇಳಬೇಕೆಂದು ಕೇಳಲಾಯಿತು. ಆದರೆ ಅವನಿಗೆ ಸಾಧ್ಯವಾಗಲಿಲ್ಲ ಅವನ ಮಾನಸಿಕ ಶಕ್ತಿ ಮತ್ತು ಜ್ಞಾಪಕ ಶಕ್ತಿ ನಿರ್ಬಲವೂ, ಕುಂಠಿತವೂ ಆಗಿದ್ದವು ನಂತರ ಅವನಿಗೆ ಆಹಾರ ಕೊಡಲಾಯಿತು ತದನಂತರ ಅವನ ಮನೋಬಲ ಸಾಕಷ್ಟು ಹಿಂದಿರುಗಿ ವೇದಗಳನ್ನು ಪಠಿಸಲು ಸಾಧ್ಯವಾಯಿತು.

ದೈಹಿಕ ಹಾಗೂ ಆಧ್ಯಾತ್ಮಿಕ ಪೋಷಣೆಗಾಗಿ ಆಹಾರದ ಅತ್ಯಗತ್ಯತೆಯ ವಿಷಯವನ್ನು ಈ ಕಥೆ ತೋರಿಸುತ್ತದೆ. ನಾವು ನಮ್ಮ ವ್ಯವಹಾರ ರಾಜಕಾರಣ, ವಿಜ್ಞಾನ, ತಂತ್ರಜ್ಞಾನ ಮತ್ತು ಇನ್ನೆಲ್ಲವನ್ನು ಮಾಡುವುದಕ್ಕೆ ಮೊದಲು ನಾವು ನಮ್ಮ ಆಹಾರಪದ್ಧತಿಗಳನ್ನು ಸರಿಪಡಿಸಬೇಕಾದದ್ದು ಅಗತ್ಯ. ಆರೋಗ್ಯಕರವಾದ ಸ್ವಾಭಾವಿಕವಾದ ಭೂಮಿಯನ್ನು ಹಾಳುಗೆಡುವದೆ ಬೆಳದಂಥ ಆಹಾರವನ್ನು ಆಯ್ಕೆ ಮಾಡಿಕೊಳ್ಳುವುದರ ಮೂಲಕ ನಮ್ಮ ಕೆಲಸವನ್ನು ಪ್ರಾರಂಭಿಸಬೇಕು.

ಜನಸಂಖ್ಯಾ ಸ್ಫೋಟದಿಂದ ಮತ್ತು ಹವಮಾನ ವೈಪರೀತ್ಯದ ಅಪಾಯದ ಕಾರಣದಿಂದ ಶಾಖಾಹಾರ ಪರಿಸರಾತ್ಮಕವಾಗಿ ಅವಶ್ಯ. ನಾವು ಮರಗಳ ಮೂಲಕವೂ ಬಹಳಷ್ಟು ಪ್ರಮಾಣದ ಆಹಾರವನ್ನು ಪಡೆಯಬಹುದಾಗಿದೆ. ನಾವು ಉಪಯೋಗಿಸುವ ಎಣ್ಣೆ ಹಣ್ಣು ಕಾಯಿ ಮತ್ತು ಔಷಧ ಮುಂತಾದವುಗಳನ್ನು

ನಿರಂತರ ಬೆಳೆಗಳಾದ ಮರಗಳಿಂದ ಪಡೆಯಬೇಕು ತನ್ಮೂಲಕ ಭೂಮಿಯ ಮೇಲೆ ನಮ್ಮಿಂದಾಗುವ ಪರಿಣಾಮವನ್ನು ಕಡಿಮೆಮಾಡಬಹುದು ಅದೇ ಹೊತ್ತಿಗೆ ಮಣ್ಣು ಹಾಗೂ ಮರಗಳಲ್ಲಿಯ ಇಂಗಾಲದ ಹೊಂದಾಣಿಕೆಯನ್ನು ಹೆಚ್ಚಿಸಬಹುದಾಗಿದೆ. ಮರಗಳು ನಮ್ಮ ಕೊನೆಯ ದಿನಗಳ ದೇವದೂತರಂತೆ ಆಹಾರ ಭದ್ರತೆ, ಜಲಭದ್ರತೆ ಮತ್ತು ಹವಮಾನ ಭದ್ರತೆ ಇವೆಲ್ಲವನ್ನು ಮರಗಳು ಖಚಿತವಾಗಿ ದಯಪಾಲಿಸುತ್ತವೆ. ಮರಗಳೇ ನಮ್ಮ ನಿಜವಾದ ಆಹಾರ ವಿಮೆ.

ಕೆಲವೊಂದು ಸಲ ಅದನ್ನು ಸರಿಯಾಗಿ ಮಾಡುತ್ತೇವೆ ಆದರೆ ಹೆಚ್ಚು ಸಲ ತಪ್ಪಾದ ಅಂಚನ್ನು ಹಿಡಿಯುತ್ತೇವೆ. ತತ್‌ಪರಿಣಾಮವಾಗಿ ಜೀವಸಂಕುಲದ ಸಮಗ್ರತೆಯ ಭದ್ರತೆಯ ಮತ್ತು ಸೌಂದರ್ಯದ ನಾಶಕ್ಕೆ ಕಾರಣರಾಗುತ್ತೇವೆ.

(ಸಾಭಾರ-ರಿಸರ್ಜನ್ಸ್ ಆಂಡ್ ಎಕಾಲಾಜಿಸ್ಟ್ : ಅನು-ಸು.ಕೌ)

ಸನ್ಮಾನ್ಯರಿಂದ...

ಮೇ ತಿಂಗಳ ಜನಪದ ನಿಲಯದ ಅಂತರಂಗ ೧೧೨ ರಲ್ಲಿ ಚಿ॥ಸೌ॥ ಗಿರಿಜಮ್ಮನವರಿಗೆ ನೀವು ವ್ಯಕ್ತಪಡಿಸಿದ ಗೌರವಾಂಜಲಿಯನ್ನು ನೋಡಿ ಮನಸ್ಸು ತುಂಬಿ ಬಂದಿತು. ಕೆಲವೇ ಕುಟುಂಬಗಳನ್ನು ಬಿಟ್ಟರೆ ಈವತ್ತಿಗೂ ಹೆಚ್ಚಿನ ಸುಶಿಕ್ಷಿತರು ಸಹ ಹೆಂಡತಿಯಿರುವುದು ತಮ್ಮ ಸುಖ-ಸೌಲಭ್ಯಕ್ಕೇ, ಕುಟುಂಬದ ಎಣೆಯಿರದ ಜವಾಬ್ದಾರಿಗಳನ್ನು ಹೊರುವುದಕ್ಕೆ ಎಂದೇ ಭಾವಿಸುತ್ತಾರೆ. ಹಾಗೆಯೇ ಕೈಲಾಗದ ಹೆಂಡತಿಯನ್ನು ಮಗುವಿನಂತೆ ಕೊನೆಯದಿನಗಳಲ್ಲಿ-ಹಾಸಿಗೆ ಹಿಡಿದಾಗಿನಿಂದ ದೀರ್ಘಾವಧಿಯ ಕಾಲ, ನೀವು ಸಮೂದಿಸಿದ ರೀತಿಯಲ್ಲೇ ಆರೈಕೆಮಾಡಿದ ಮಹಾನುಭಾವರನ್ನೂ ನೋಡಿದ್ದೇನೆ. ಆದರೆ ಇಂಥವರೆಲ್ಲ ವಿರಳರು! ಹೀಗಾಗಿ ಅಂಥವರ ಬಗ್ಗೆ ಅರಿಯುವದೇ ದೊಡ್ಡಸ್ತಿಕೆ. ಏಕೆಂದರೆ ಅಖಂಡ ಸೇವಾರತರು ಪ್ರಸಿದ್ಧಿಗಾಗಿ, ಧನಕನಕಾದಿಗಳಿಗೆ ಬಗ್ಗಿ ನಡಿಯುವುದಿರಲಿ ಪ್ರಚಾರಕ್ಕಾಗಿ ಹಪಹಪಿಸುವುದಂತೂ ದೂರವೇ ಉಳಿಯಿತು. ಎಲೆಮರೆಯ ಕಾಯಾಗಿ ಬಾಳಿಬದುಕಿ ನಶಿಸಿ ಹೋಗುವವರೇ ಹೆಚ್ಚುಜನ. ನಿಮ್ಮ ಲೇಖನದಿಂದ ಒಬ್ಬರಂತೆ ಇನ್ನೊಬ್ಬರು ಇದ್ದ ಅಪರೂಪದ ಜೋಡಿಯ ಬಗ್ಗೆ ತಿಳಿದು ಸಂತಸಪಟ್ಟೆ. ನೀವು ಈಗ ಆರೋಗ್ಯದಿಂದ ಇರುವುದು ನೆಮ್ಮದಿ ನೀಡಿದೆ. ಇದರೊಂದಿಗೆ ತಮ್ಮ ಟ್ರಸ್ಟ್ ಚಟುವಟಿಕೆಗಳಿಗಾಗಿ ೧೦೦೦೦/-ರೂಗಳನ್ನು ಕಳಿಸುತ್ತಿದ್ದೇನೆ.

ಖಾದಿಯ ಬಗ್ಗೆ ತಮ್ಮ ವಿಚಾರಗಳು ತುಂಬ ಸಹಕಾರಿ. ಈ ಬಾರಿಯ ಅಭೂತಪೂರ್ವ ಸೆಕೆಯನ್ನು ಬೆಂಗಳೂರಿನಲ್ಲಿ ಅನುಭವಿಸಬೇಕಾಗಿ ಬಂತು. ಈ ಸಂದರ್ಭದಲ್ಲಿ ನನಗೆ ಹಿತವಾದ ಉಡುಪು ಆದದ್ದು ಹಿಂದೆಂದೊ ಹೊಲಿಸಿ, ಟ್ರಂಕ್ ಮೂಲೆಗೆ ತುರುಕಿದ ಖಾದಿ ಬಟ್ಟೆಯ ರವಿಕೆಗಳು, ಟವೆಲ್‌ಗಳು, ಹೊದಿಕೆಗಳು. ಅವುಗಳಂತಹ ಚೆಲುವಿನ ದೈನಂದಿನ ಉಪಯೋಗದ ಸಾಮಾನುಗಳು ಇನ್ನಿಲ್ಲ! ಒಗೆದಷ್ಟು ತೆಳ್ಳಗಾಗಿ, ಕೈವಸ್ತ್ರವಾಗಿ, ಉಪಯುಕ್ತವಾಗುತ್ತವೆ.

– **ಜ್ಯೋತ್ಸ್ನಾ ಕಾಮತ್**, ಬೆಂಗಳೂರು

ಜೀವವೈವಿಧ್ಯದ ಪಶ್ಚಿಮಘಟ್ಟ ಅಪಾಯದ ಅಂಚಿನಲ್ಲಿ.

(ಪ್ರಕೃತಿಯ ತೊಟ್ಟಿಲಾದ ಪಶ್ಚಿಮ ಘಟ್ಟವು ಅಪಾಯದ ಸುಳಿಗೆ ಸಿಕ್ಕಿದೆ. ತತ್ಸಂಬಂಧವಾಗಿ ಇತ್ತೀಚಿಗೆ ಪ್ರಕಟವಾದ ಮೂರು ಲೇಖನಗಳ ಸಂಗ್ರಹ ಪರಿಸರವಾದಿಗಳ ಸೌಕರ್ಯಕ್ಕಾಗಿ ಇಲ್ಲಿ ಪ್ರಕಟಗೊಂಡಿದೆ- ಸಂ)

ವಿವಾದದ ಮತ್ತೊಂದು ಸುತ್ತಿಗೆ ಪಶ್ಚಿಮಘಟ್ಟ

ಇಬ್ಬರೂ ಜಾಗತಿಕ ಖ್ಯಾತಿಯ ವಿಜ್ಞಾನಿಗಳು; ಇಬ್ಬರೂ ಬೆಂಗಳೂರಿನಲ್ಲಿಯೇ ತಮ್ಮ ವೈಜ್ಞಾನಿಕ ಮೇರುಗಿರಿಯನ್ನು ಮುಟ್ಟಿದವರು: ಇಬ್ಬರೂ ಪದ್ಮಪ್ರಶಸ್ತಿ ವಿಜೇತರು. ಒಬ್ಬರು ಹಿಂದಿನ ಪ್ರಧಾನ ಮಂತ್ರಿಯವರ ಸಲಹಾ ಸಮಿತಿಯಲ್ಲಿದ್ದರೆ ಇನ್ನೊಬ್ಬರು ಯೋಜನಾ ಆಯೋಗದ ಈಗಿನ ಸದಸ್ಯರು. ಒಬ್ಬರು ಪಶ್ಚಿಮ ಘಟ್ಟಸಾಲಿನ ಮೇಲ್ತುದಿಯಿಂದ ಬಂದರೆ ಇನ್ನೊಬ್ಬರು ಕೇರಳದ ತುದಿಯಿಂದ ಬಂದವರು. ಇವರಿಬ್ಬರೂ ಈಗ ಪಶ್ಚಿಮ ಘಟ್ಟ ಕುರಿತ ಹೊಸ ವಿವಾದದಲ್ಲಿ ಎರಡು ಧ್ರುವಗಳಾಗಿ ನಿಂತಿದ್ದಾರೆ. ಒಬ್ಬರು ತುಳಿತಕ್ಕೊಳಗಾದ ನಿಸರ್ಗದ ಪರವಾಗಿ, ಬೇರುಮಟ್ಟದ ಪರವಾಗಿ ನಿಂತು ವಾದಿಸಿದರೆ ಇನ್ನೊಬ್ಬರು ಅಭಿವೃದ್ಧಿಯ ಪರವಾಗಿ, ದೊಡ್ಡ ಯೋಜನೆಗಳ ಪರವಾಗಿ, ಸರ್ಕಾರದ ವಕ್ತಾರರಾಗಿ ವಾದ ಮಂಡಿಸಿದ್ದಾರೆ; ಮಾಧ್ಯಮಗಳಲ್ಲಿ ಚರ್ಚೆಯ ವಸ್ತುವಾಗಿದ್ದಾರೆ. ಒಬ್ಬರು ಪರಿಸರ ತಜ್ಞ ಪ್ರೊ ಮಾಧವ ಗಾಡ್ಗೀಳ್, ಇನ್ನೊಬ್ಬರು ಅಂತರಿಕ್ಷ ತಜ್ಞ ಡಾ. ಕಸ್ತೂರಿರಂಗನ್.

ಈ ಇಬ್ಬರ ನಡುವಣ ವಿವಾದದ ವಿವರ ಹೀಗಿದೆ: ಮಾಧವ ಗಾಡ್ಗೀಳ್ ಅವರನ್ನು 'ಪಶ್ಚಿಮಘಟ್ಟಗಳ ಜೀವಜಾಲ ತಜ್ಞರ ಸಮಿತಿ' ಯ ಅಧ್ಯಕ್ಷರನ್ನಾಗಿ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ ೨೦೧೦ರಲ್ಲಿ ನಿಯೋಜಿಸಿತ್ತು. ಈ ಭೂಭಾಗದ ಸೂಕ್ಷ್ಮ ಜೀವಪರಿಸರವನ್ನೂ ರಕ್ಷಿಸಬೇಕು; ಜನರ ಬದುಕಿನ ಗುಣಮಟ್ಟವನ್ನೂ ಎತ್ತರಿಸಬೇಕು. ಪರಸ್ಪರ ವಿರುದ್ಧವೇ ಎನ್ನಬಹುದಾದ 'ಅಭಿವೃದ್ಧಿ ಮತ್ತು ಪರಿಸರದ ಜಟಿಲ ಪ್ರಶ್ನೆಗೆ ಪರಿಹಾರ ತೋರಿಸಿ' ಎಂದು ಕೇಳಿ ಸಚಿವ ಜೈರಾಮ್ ರಮೇಶ್ ಅಂದು ಗಾಡ್ಗೀಳ್ ಸಮಿತಿಯನ್ನು ಕೋರಿದ್ದರು. ಹದಿಮೂರು ತಜ್ಞರ ಈ ಸಮಿತಿ ಯಲ್ಲಿ ಸರ್ಕಾರಿ ಅಧಿಕಾರಿಗಳು, ಪರಿಸರ ತಜ್ಞರು ಹಾಗೂ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳೂ ಇದ್ದರು – ಆರು ರಾಜ್ಯಗಳಲ್ಲಿ ಮೈಚಾಚಿಕೊಂಡಿರುವ ಪಶ್ಚಿಮ ಘಟ್ಟ ಸರಮಾಲೆಯ ಬದುಕು ಭವಿಷ್ಯದ ಕುರಿತು ಎರಡು ವರ್ಷಗಳ ಕಾಲ ಅಧ್ಯಯನ ನಡೆಸಿ, ಸ್ಥಳೀಯರೊಂದಿಗೆ ಚರ್ಚಿಸಿ, ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯಕ್ಕೆ ವರದಿ ಸಲ್ಲಿಸಿತು. ಅದರಲ್ಲಿ, 'ಸಮಿತಿಯ ತೀರ್ಮಾನಗಳು ಅಖೈರೇನಲ್ಲ; ಅದನ್ನು ಎಲ್ಲ ಆರು ರಾಜ್ಯಭಾಷೆಗಳಿಗೆ ಅನುವಾದಿಸಿ, ಭಾಗೀದಾರರ ಜೊತೆ ಚರ್ಚೆ ನಡೆಸಿ

ನಂತರ ಸರ್ಕಾರವೇ ತನ್ನ ತೀರ್ಮಾನ ಪ್ರಕಟಿಸಬಹುದು' ಎಂದಿತ್ತು.

ವರದಿ ಸಿದ್ಧವಾಗುವಷ್ಟರಲ್ಲಿ ಕೇಂದ್ರ ಪರಿಸರ ಸಚಿವರೇ ಬದಲಾಗಿದ್ದರು. ಜೈರಾಮ್ ರಮೇಶ್ ಬದಲಿಗೆ ಜಯಂತಿ ನಟರಾಜನ್ ಬಂದಿದ್ದರು. ವರದಿ ಸಲ್ಲಿಕೆಯಾದದ್ದೇ ತಡ, ಸರ್ಕಾರ ಅವಸರದಲ್ಲಿ ಅದನ್ನು ಬಿಸಿಕೆಂಡದಂತೆ ಮುಚ್ಚಿಟ್ಟಿತು. ವರದಿಯನ್ನು ಬಹಿರಂಗಪಡಿಸಬೇಕೆಂದು ಕೇರಳದ ವ್ಯಕ್ತಿಯೊಬ್ಬರು ಕೇಂದ್ರ ಮಾಹಿತಿ ಆಯೋಗಕ್ಕೆ ಪ್ರಶ್ನೆ ಕೇಳಿದರು. ಏಕೆ ಬಿಡುಗಡೆ ಆಗುತ್ತಿಲ್ಲವೆಂದು ಆಯೋಗ ಪರಿಸರ ಸಚಿವಾಲಯವನ್ನು ಕೇಳಿತು. ವರದಿ ಬಹಿರಂಗವಾದರೆ ರಾಜ್ಯಗಳ 'ವೈಜ್ಞಾನಿಕ ಮತ್ತು ಆರ್ಥಿಕ ವಲಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು' ಎಂದೇನೋ ಅಸ್ಪಷ್ಟ ಉತ್ತರ ಬಂತು. ಮಾಹಿತಿ ಆಯುಕ್ತರಿಗೆ ತೃಪ್ತಿಯಾಗಲಿಲ್ಲ. 'ವರದಿಯನ್ನು ಸರ್ಕಾರ ಒಪ್ಪುತ್ತದೊ ಬಿಡುತ್ತದೊ ಬೇರೆ ಮಾತು. ಆದರೆ ವಿಜ್ಞಾನಿಗಳು ಏನು ಹೇಳಿದ್ದಾರೆ ಎಂಬುದು ಜನರಿಗೆ ಗೊತ್ತಾಗಬೇಕು. ಅದನ್ನು ೨೦೧೨ ಮೇ ೧೦ರೊಳಗೆ ಬಹಿರಂಗಗೊಳಿಸಿ' ಎಂದು ಮಾಹಿತಿ ಆಯೋಗ ಸರ್ಕಾರಕ್ಕೆ ಆದೇಶ ನೀಡಿತು.

ಆಗಲೂ ಸರ್ಕಾರ ಜಪ್ಪೆನ್ನಲಿಲ್ಲ. ತಾನು ಬಚ್ಚಿಟ್ಟಿದ್ದೇ ಸರಿ ಎಂದು ವಾದಿಸಿ ಮಾಹಿತಿ ಆಯುಕ್ತರ ಆಜ್ಞೆಯ ವಿರುದ್ಧ ನ್ಯಾಯಾಲಯಕ್ಕೆ ದೂರಿತು. ಅಲ್ಲೂ ಜಯ ಸಿಗದೆ, ಕೊನೆಗೂ ಗಾಡ್ಗೀಳ್ ಸಮಿತಿಯ ವರದಿಯನ್ನು ಪ್ರಕಟಿಸಲೇಬೇಕಾಯಿತು. ಆ ವೇಳೆಗಾಗಲೇ ವರದಿಯನ್ನು ಮೂಲೆಗೊತ್ತಲು ಸರ್ಕಾರ ನಿರ್ಧರಿಸಿತ್ತು. ವರದಿಯ ಮೌಲ್ಯಮಾಪನ ಮಾಡಿ ಬದಲೀ ಶಿಫಾರಸುಗಳನ್ನು ನೀಡುವಂತೆ ಕಸ್ತೂರಿ ರಂಗನ್ ನೇತೃತ್ವದಲ್ಲಿ ಇನ್ನೊಂದು ಉನ್ನತ ಮಟ್ಟದ ಕಾರ್ಯತಂಡವನ್ನು ನೇಮಕ ಮಾಡಿತ್ತು. ಕಸ್ತೂರಿರಂಗನ್ ಕಾರ್ಯತಂಡ ಚುರುಕಾಗಿ ಕೆಲಸ ಮಾಡಿ ಕಳೆದ ತಿಂಗಳು ತನ್ನ ತಿದ್ದುಪಡಿ ತೀರ್ಮಾನವನ್ನು ಸಲ್ಲಿಸಿದೆ. ಜಯಂತಿ ನಟರಾಜನ್ ಮಾಧ್ಯಮಗೋಷ್ಠಿ ಕರೆದು ವಿಜೃಂಭಣೆಯಿಂದ ವರದಿಯನ್ನು ಬಿಡುಗಡೆ ಮಾಡಿದ್ದಾರೆ.

ಪಶ್ಚಿಮಘಟ್ಟಗಳ ಭವಿಷ್ಯ ಹೇಗಿರಬೇಕು ಎಂಬುದರ ಬಗ್ಗೆ ಈ ಎರಡು ವರದಿಗಳೂ ವಿವಾದದ ಕಿಚ್ಚನ್ನೆಬ್ಬಿಸಿವೆ. ಯುನೆಸ್ಕೊ ಮಾನ್ಯತೆಯ ವಿಶ್ವಪರಂಪರೆಯ ಪಟ್ಟಿಯ ವಿವಾದ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿದ್ದರೆ ಈಗಿನ ವಿವಾದ ಕೇರಳ, ಗೋವಾ ಹಾಗೂ ಮಹಾರಾಷ್ಟ್ರಕ್ಕೂ ವಿಸ್ತರಿಸಿದೆ. ಗಾಡ್ಗೀಳ್ ವರದಿಯ ಬಗ್ಗೆ ಕೇರಳ ಸ್ಪಷ್ಟವಾಗಿ ತನ್ನ ಅಸಮ್ಮತಿ ಸೂಚಿಸಿದೆ. ಆದರೆ ವಿಜ್ಞಾನ ಪ್ರಚಾರಕ್ಕೆಂದೇ ಮೀಸಲಾದ ಕೇರಳ ಶಾಸ್ತ್ರಸಾಹಿತ್ಯ ಪರಿಷತ್ತು ಕಸ್ತೂರಿರಂಗನ್ ಕಾರ್ಯತಂಡದ ವರದಿಯನ್ನು ಕೈಬಿಡುವಂತೆ ಒತ್ತಾಯಿಸಿದೆ. 'ಈ ವರದಿ ಅಂಗೀಕೃತವಾದರೆ ಪಶ್ಚಿಮಘಟ್ಟಗಳ ೧೭,೬೪೫ ಚದರ ಕಿ.ಮೀ ಪ್ರದೇಶಕ್ಕೆ ರಕ್ಷಣೆ ಇಲ್ಲದಂತಾಗುತ್ತದೆ' ಎಂದು ಅದು ಹೇಳಿದೆ.

ಅಂತೂ ಇಂದಿನ 'ವಿಶ್ವ ಜೀವಿವೈವಿಧ್ಯ ದಿನ'ದ (ಮೇ ೨೨) ಸಂದರ್ಭದಲ್ಲಿ ಈ ವಿವಾದ ಪಶ್ಚಿಮ ಘಟ್ಟಗಳ ಜೀವಿವೈವಿಧ್ಯದ ಮೇಲೆ ದೂರಗಾಮಿ ಪರಿಣಾಮ ಬೀರಲಿದೆ ಎನ್ನಬಹುದು. ಇದು ಗಾಡ್ಗೀಳ್ ವರ್ಸಸ್ ಕಸ್ತೂರಿ ರಂಗನ್ ತಿಕ್ಕಾಟ ಎನ್ನುವುದಕ್ಕಿಂತ ಜನಸಾಮಾನ್ಯ ವರ್ಸಸ್ ಅಧಿಕಾರಶಾಹಿಯ ಜಟಾಪಟಿ ಎಂತಲೇ ಹೇಳಬೇಕು. ಈ ಇಬ್ಬರು ವಿಜ್ಞಾನಿಗಳ ನಡುವೆ ಪಾತಾಳ – ಆಕಾಶಗಳ ವ್ಯತ್ಯಾಸವಿದೆ.

ಹಾರ್ವರ್ಡ್ ವಿವಿಯಲ್ಲಿ ಗಣಿತೀಯ ಜೀವಜಾಲ ವಿಷಯದ ಮೇಲೆ ಡಾಕ್ಟರೇಟ್ ಪಡೆದ ಗಾಡ್ಗಿಳ್ ಸ್ವಇಚ್ಛೆಯಿಂದ ಪಶ್ಚಿಮಘಟ್ಟಗಳ ಅಧ್ಯಯನಕ್ಕೆಂದೇ ಮರಳಿ ಬಂದು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ತಜ್ಞರ ತಂಡ ಕಟ್ಟಿ ಬೆಳೆಸಿದವರು.

ಕಾಡುಮೇಡು ಅಲೆಯುತ್ತ ಜನ ಮತ್ತು ವನ್ಯಜೀವಿಗಳ ನಡುವಣ ಸಂಬಂಧಗಳನ್ನು ದಾಖಲಿಸಿದವರು. ಕಸ್ತೂರಿ ರಂಗನ್ ಮುಂಬೈಯಲ್ಲಿ ಖಗೋಳ ವಿಜ್ಞಾನ ಓದಿ, ಅಹ್ಮದಾಬಾದ್‌ನಲ್ಲಿ ತಾರಾಲೋಕದ ತಜ್ಞರೆನಿಸಿ, ಇಸ್ರೊ ಬಾಹ್ಯಾಂತರಿಕ್ಷ ಸಂಸ್ಥೆಯನ್ನು ಸೇರಿ ಮೇಲೇರುತ್ತ ಭಾರತದ ಅಭಿವೃದ್ಧಿಯ ಕನಸಿಗೆ ರೆಕ್ಕೆಪುಕ್ಕ ಜೋಡಿಸುತ್ತ 'ಚಂದ್ರಯಾನ'ದ ರೂವಾರಿ ಎನಿಸಿದವರು. ಗಾಡ್ಗಿಳರು ಪಶ್ಚಿಮ ಘಟ್ಟಗಳನ್ನು ಪೃಥ್ವಿಯ ಅದ್ಭುತ ವನ್ಯಕೋಶ ಎಂದು ಪರಿಗಣಿಸಿ, ಅದು ಹೇಗೆ ದಕ್ಷಿಣ ಭಾರತ ಜೀವಾಳವಾಗಿದೆ ಎಂಬುದನ್ನು ಜಗತ್ತಿಗೆ ತೋರಿಸುತ್ತ ಬಂದರೆ, ಕಸ್ತೂರಿರಂಗನ್ ಭಾರತವನ್ನು ಮುಂದಿನ ಶತಮಾನದತ್ತ ಮುನ್ನಡೆಸಲು ಹೊರಟವರು. ಕಬ್ಬಿಣ, ಮ್ಯಾಂಗನೀಸ್ ಗಣಿಗಳು ಹಾಗೂ ವಿಷ ಕಾರುವ ಕಾರ್ಖಾನೆಗಳು ಪಶ್ಚಿಮ ಘಟ್ಟದಂಥ ಸೂಕ್ಷ್ಮ ಪ್ರದೇಶಗಳಲ್ಲಿ ಇರಲೇಬಾರದು ಎಂಬ ಧೋರಣೆ ಗಾಡ್ಗಿಳರದಾದರೆ, ಅಭಿವೃದ್ಧಿಯ ಮೆಟ್ಟಿಲುಗಳ ಮೇಲೆ ರಾಷ್ಟ್ರವನ್ನು ಮೇಲೆತ್ತುವುದಾದರೆ ಗಣಿ-ಕಾರ್ಖಾನೆಗಳಂಥ ಬುನಾದಿ ಬೇಕೆನ್ನುವವರು ಕಸ್ತೂರಿರಂಗನ್.

ಏನಿತ್ತು ಇವರ ವರದಿಗಳಲ್ಲಿ? ಗಾಡ್ಗಿಳ್ ಸಮಿತಿ ಪಶ್ಚಿಮ ಘಟ್ಟಗಳ ಒಟ್ಟೂ ೧೪೨ ತಾಲ್ಲೂಕುಗಳನ್ನು ಪರಿಸರ ಸೂಕ್ಷ್ಮತೆಯ ಆಧಾರದ ಮೇಲೆ ಮೂರು ಪ್ರಾಂತಗಳನ್ನಾಗಿ ವಿಂಗಡಿಸಿತ್ತು. ದಟ್ಟ ವನ್ಯಜೀವಿಗಳಿರುವ ತಾಣಗಳನ್ನು 'ಸೂಕ್ಷ್ಮ ಪ್ರಾಂತ೧' , ಕೃಷಿ-ಗೋಮಾಳ, ಬೆಟ್ಟಗಳ ತಾಣಗಳನ್ನು 'ಸೂ.ಪ್ರಾ.೨', ಮತ್ತು ತೀರ ಜನಬಳಕೆ ಇರುವ ಪೇಟೆಪಟ್ಟಣಗಳ ತಾಣಗಳನ್ನು 'ಸೂ.ಪ್ರಾ.೩' ಎಂತಲೂ ಹೆಸರಿಸಿತ್ತು. ಯಾವ ಪ್ರಾಂತದಲ್ಲಿ ಏನೇನು ಚಟುವಟಿಕೆ ಇರಬೇಕು, ಇರಬಾರದು ಎಂದು ಮಾರ್ಗಸೂಚನೆ ಕೊಟ್ಟಿತ್ತು. ಪಂಚಾಯ್ತಿ ಮಟ್ಟದ ಜನಾಭಿಪ್ರಾಯ ಕೇಳಿಯೇ ಅಭಿವೃದ್ಧಿಯ ರೂಪುರೇಷೆ ಸಿದ್ಧವಾಗಬೇಕು; ಸ್ಥಳೀಯರನ್ನು ಕಡೆಗಣಿಸಿ ಕೇವಲ ಉದ್ಯಮಗಳ ಹಿತಾಸಕ್ತಿಯ ಯಾವುದೇ ಚಟುವಟಿಕೆ ಕೂಡದು ಎಂದಿತ್ತು. ಸೂ.ಪ್ರಾ.೧ ಮತ್ತು ೨ರಲ್ಲಿ ಗಣಿಗಾರಿಕೆ ನಿಲ್ಲಿಸಬೇಕು, ಗುಂಡ್ಯದಂಥ ಬೃಹತ್ ವಿದ್ಯುತ್ ಯೋಜನೆಗಳಿಗೆ, ಪ್ರವಾಸೋದ್ಯಮಕ್ಕೆ ಅವಕಾಶ ಇರಕೂಡದು ಎಂದಿತ್ತು. ಹಳೇ ಅಣೆಕಟ್ಟುಗಳನ್ನು ಕಳಚಿ ಹಾಕಬೇಕೆಂದೂ ಎಲ್ಲ ಆರು ರಾಜ್ಯಗಳಿಗೆ ಸೇರಿದ ಪಶ್ಚಿಮ ಘಟ್ಟಗಳ ಸಮಗ್ರ ನಿರ್ವಹಣೆಗೆಂದೇ ಒಂದು ಪ್ರತ್ಯೇಕ ಪ್ರಾಧಿಕಾರವನ್ನು ರಚಿಸಬೇಕೆಂದೂ ಸೂಚಿಸಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಸ್ಥಳೀಯ ಜನರು ಈ ವರದಿಯನ್ನು ಓದಿ ಚರ್ಚಿಸಲು ಸಾಧ್ಯವಾಗುವಂತೆ ಎಲ್ಲ ಆರೂ ಭಾಷೆಗಳಿಗೆ ತರ್ಜುಮೆ ಮಾಡಿಸಬೇಕು ಎಂದಿತ್ತು.

ಸಹಜವಾಗಿಯೇ ಉದ್ಯಮಿಗಳಿಗೆ, ಗುತ್ತಿಗೆದಾರರಿಗೆ, ಗೋವಾದ ಗಣಿದೊರೆಗಳಿಗೆ ಹಾಗೂ ವಿದೇಶೀ ನೇರ ಹೂಡಿಕೆದಾರರಿಗೆ ಈ ವರದಿ ಬೇಡವಾಗಿತ್ತು (ದೇಶದ ಶೇಕಡಾ ೫೦ರಷ್ಟು ವಿದೇಶೀ ಹೂಡಿಕೆದಾರರ ಬಂಡವಾಳ ಪಶ್ಚಿಮಘಟ್ಟ ಪ್ರದೇಶದಲ್ಲೇ ಬಿದ್ದಿದೆ ಎಂದು ಗಾಡ್ಗಿಳ್ ಹೇಳುತ್ತಾರೆ). ಕೆಲವು ರಾಜ್ಯ ಸರ್ಕಾರಗಳೂ

ಆಕ್ಷೇಪಿಸಿದವು. 'ನೈಸರ್ಗಿಕ ಸಂಪತ್ತನ್ನು ಬಳಸಿಕೊಳ್ಳುವ ತಮ್ಮ ಶಾಸನಬದ್ಧ ಹಕ್ಕುಗಳಿಗೆ ಈ ವರದಿ ಮಿತಿ ಹಾಕುತ್ತಿದೆ' ಎಂದವು. ಆದರೆ ಗಾಡ್ಗೀಳ್ ಹೇಳುವ ಪ್ರಕಾರ, 'ಅಂಥದ್ದೇನೂ ಆಗುವುದಿಲ್ಲ. ಬೇರುಮೂಲದ ಪ್ರಜಾಪ್ರಭುತ್ವಕ್ಕೆ ಹಾಗೂ ಸ್ಥಳೀಯರ ಆಶಯಗಳಿಗೆ ತಕ್ಕಂತೆ ಅಭಿವೃದ್ಧಿಯ ಸೂತ್ರಗಳನ್ನು ರೂಪಿಸಲು ಅವಕಾಶ ನೀಡಲಾಗಿದೆ ವಿನಾ ಹೊರಗಿನವರ ಇಷ್ಟದಂತೆ ನೈಸರ್ಗಿಕ ಸಂಪತ್ತಿನ ಬಳಕೆ ಮಾಡುವಂತಿಲ್ಲ' ಎಂದು ಅವರು ಹೇಳುತ್ತಾರೆ. ಅಂತೂ ಹೊರಗಿನ ದೊರೆಗಳಿಗೆ ಈ ವರದಿ ಇಷ್ಟವಾಗಲಿಲ್ಲ.

ಆಗ ರಂಗಪ್ರವೇಶ ಮಾಡಿದ್ದೇ ೧೦ ಸದಸ್ಯರ ಕಸ್ತೂರಿ ರಂಗನ್ ಕಾರ್ಯತಂಡ. ಅದು ಸ್ಥಳೀಯ ನಿವಾಸಿಗಳನ್ನು ಉಪೇಕ್ಷಿಸಿತು. ಗಾಡ್ಗೀಳ್ ಸಮಿತಿಯ 'ಸೂಪ್ರ' ಸೂತ್ರಗಳನ್ನು ಉಪೇಕ್ಷಿಸಿತು. ಉಪಗ್ರಹ ನಕ್ಷೆಯನ್ನು ಎದುರಿಗೆ ಇಟ್ಟುಕೊಂಡು, ಯೋಜನಾ ತಂತ್ರಜ್ಞರ, ರಾಜಕಾರಣಿಗಳ ಹಾಗೂ ಉದ್ಯಮಪತಿಗಳ ಸಲಹೆ ಪಡೆದು ಹೊಸ ಶಿಫಾರಸುಗಳನ್ನು ಮುಂದಿಟ್ಟಿತು. ಈಗಾಗಲೇ ಸಂರಕ್ಷಿತವೆಂದು ಘೋಷಿತವಾದ ವನ್ಯಧಾಮ, ಅಭಯಾರಣ್ಯಗಳಂಥ ಅತಿಸೂಕ್ಷ್ಮ ಪ್ರದೇಶಗಳಿಗೆ ಇನ್ನೂ ಬಿಗಿಯಾದ ಕಾವಲು ಹಾಕಬೇಕೆಂದು ಹೇಳಿತು. ಅದನ್ನು ಬಿಟ್ಟರೆ ಇನ್ನುಳಿದ ಭಾಗದಲ್ಲಿ ಅಭಿವೃದ್ಧಿ ಯೋಜನೆಗಳು ಬರಬಹುದು ಎಂದು ಶಿಫಾರಸು ಮಾಡಿತು.

ಸಹಜವಾಗಿಯೇ ಗಾಡ್ಗೀಳ್ ಸಮಿತಿಯ ಸದಸ್ಯರಿಗೆ ಹಾಗೂ ಬೆಂಬಲಿಗರಿಗೆ ಈ ಶಿಫಾರಸಿನಿಂದ ಆಘಾತವಾಗಿದೆ. ಅವರ ಪ್ರಕಾರ ಸ್ಥಳೀಯ ಜನರ ಸಹಕಾರದಿಂದಲೇ ಅಪರೂಪದ ವನ್ಯ ಪ್ರಾಣಿ ಪಕ್ಷಿಗಳ ಸಂಕುಲವನ್ನು ಉಳಿಸಿಕೊಳ್ಳಲು ಸಾಧ್ಯವಾದೀತೆ ವಿನಾ ಬಂದೂಕು ಹೊತ್ತ ಸಿಪಾಯಿ ಕಾರ್ಯಾಚರಣೆಯಿಂದ ಅಲ್ಲ. ಜಗತ್ತಿನ ೧೪ ಅತಿ ಶ್ರೇಷ್ಠ ಜೀವವೈವಿಧ್ಯದ ತಾಣಗಳಲ್ಲಿ ಒಂದೆಂಬ ಖ್ಯಾತಿ ಪಡೆದ ಈ ಪ್ರದೇಶ ಈಗಾಗಲೇ ನಾನಾ ಬಗೆಯ ಬೆಳವಣಿಗೆಗೆ ಸಿಕ್ಕು ಛಿದ್ರಗೊಂಡಿದೆ. ಇತ್ತ ರಸ್ತೆ, ಅತ್ತ ರೈಲು; ಇತ್ತ ಗಣಿ, ಅತ್ತ ವಿದ್ಯುತ್ ತಂತಿ; ಇತ್ತ ಜಲಾಶಯ, ಅತ್ತ ರೆಸಾರ್ಟ್; ಇತ್ತ ಕಳ್ಳಬೇಟೆ, ಅತ್ತ ಗಾಂಜಾಪಟ್ಟಿ... ಇವೆಲ್ಲವುಗಳ ಮಧ್ಯೆ ಅಭಯಾರಣ್ಯಗಳಂಥ 'ದ್ವೀಪ'ಗಳನ್ನು ಮಾತ್ರ ಉಳಿಸಿಕೊಳ್ಳೋಣ – ಉಳಿದವು ಏನಾದರಾಗಲಿ ಎಂದರೆ ಆದೀತೆ? ಸ್ಥಳೀಯ ಜನರ ಅಭಿಪ್ರಾಯವನ್ನೇ ಕೇಳದೆ ಬ್ರಿಟಿಷ್ ಅಧಿಕಾರಿಗಳು ತಮಗಿಷ್ಟ ಬಂದಲ್ಲಿ ತಮಗಿಷ್ಟ ಬಂದಷ್ಟು ಕಾಡುಗಳನ್ನು ಕಡಿದು ತೇಗದ ಗಿಡಗಳನ್ನು ನೆಟ್ಟು ಬೆಳೆಸುತ್ತಿದ್ದರು. ಪ್ರತಿಭಟನೆಗೆ ಬಂದವರನ್ನು ನಿರ್ದಯವಾಗಿ ತುಳಿಯುತ್ತಿದ್ದರು. ಕಸ್ತೂರಿರಂಗನ್ ಕಾರ್ಯತಂಡದ ಶಿಫಾರಸು ಜಾರಿಗೆ ಬಂದರೆ ಅದು ಬ್ರಿಟಿಷರ ಕಾಲದ ವಸಾಹತುಶಾಹಿ ಧೋರಣೆಗಿಂತ ಕ್ರೂರವಾದೀತು ಎನ್ನುತ್ತಾರೆ, ಪ್ರೊ ಗಾಡ್ಗೀಳ್.

ಹಾಗಿದ್ದರೆ ಘಟ್ಟ ಕಣಿವೆಗಳಲ್ಲಿ ಹಿಂದುಳಿದ ಜನರು ಹಿಂದೆಯೇ ಉಳಿಯಬೇಕೆ? ಅವರಿಗೆ ರಸ್ತೆ, ಟಿವಿ, ಗ್ಯಾಸ್ ಬೇಡವೆ? ಅವೆಲ್ಲ ಬೇಕು, ಜನರ ಆರ್ಥಿಕ ಸ್ಥಿತಿಯೂ ಉತ್ತಮವಾಗಬೇಕು, ಜೊತೆಗೆ ಜೀವವೈವಿಧ್ಯ ರಕ್ಷಣೆಯೂ ಆಗಬೇಕು –ಅಂಥ ಸವಾಲನ್ನು ವಿಜ್ಞಾನಿಗಳು ಕೈಗೆತ್ತಿಕೊಂಡರೆ ಪರಿಹಾರ ಸಿಕ್ಕೇ ಸಿಗುತ್ತದೆ. ಹಳ್ಳಿಗಳಿಗೆ ಭೇಟಿ ಕೊಟ್ಟು ಸೆಗಣಿ ಗಂಜಲ, ಬೊಂಬಿನ ಚೊಂಬಿನ ಪರಿಸರದಲ್ಲಿ ಓಡಾಡಬಲ್ಲ ವಿಜ್ಞಾನಿಗಳಿಗೆ ಸರ್ಕಾರ ಪ್ರೇರಣೆ ಪ್ರೋತ್ಸಾಹ ನೀಡಬೇಕಿತ್ತು. ಅದನ್ನು ಜಗತ್ತಿಗೇ ತೋರಿಸಬಹುದಿತ್ತು. ಆದರೆ ಹಾಗಾಗಲಿಲ್ಲ. ವನ್ಯಲೋಕವನ್ನು ಬದಿಗೊತ್ತಿ

ಚಂದ್ರಲೋಕವನ್ನು ತೋರಿಸಹೊರಟವರಿಗೇ ಮಣೆ ಹಾಕುವವರು ನಾವು.

– ನಾಗೇಶ ಹೆಗಡೆ

ಬ್ರಿಟಿಷರಿಗಿಂತ ಘನ ಬ್ರಿಟಿಷರಾಗುತ್ತಿದ್ದೇವೆಯೆ ನಾವು?

(ಡಾ.ಕಸ್ತೂರಿರಂಗನ್ ಅವರಿಗೆ ಪ್ರೊ.ಮಾಧವ ಗಾಡ್ಗೀಳ್ ಬರೆದ ಬಹಿರಂಗ ಪತ್ರ)

ಪ್ರಿಯ ಡಾ. ಕಸ್ತೂರಿರಂಗನ್,

ಪಶ್ಚಿಮಘಟ್ಟಗಳ ಅಧ್ಯಯನದ 'ಉನ್ನತ ಮಟ್ಟದ ಕಾರ್ಯತಂಡ'ದ ವರದಿಯನ್ನು ತಯಾರಿಸುವಲ್ಲಿ ನೀವೂ ಭಾಗಿಯಾಗಿದ್ದೀರಿ ಎಂದರೆ ನಂಬಲು ಸಾಧ್ಯವಾಗುತ್ತಿಲ್ಲ. ಆದರೆ ವಾಸ್ತವ ಅದೆಷ್ಟೋ ಬಾರಿ ನಾವು ಊಹಿಸಿದ್ದಕ್ಕಿಂತ ವಿಲಕ್ಷಣದ್ದಾಗಿರುತ್ತದೆ. ಅದನ್ನೇ ಹೇಳಿಲ್ಲವೆ ಜೆ.ಬಿ.ಎಸ್ ಹಾಲ್ಡೇನ್?

ನಾವು ಸಲ್ಲಿಸಿದ್ದ ವರದಿಯಲ್ಲಿ ಪಶ್ಚಿಮ ಘಟ್ಟಗಳನ್ನು ಮೂರು ಶ್ರೇಣಿಗಳನ್ನಾಗಿ ವಿಂಗಡಿಸಿದ್ದೆವು. ಪರಿಸರದ ದೃಷ್ಟಿಯಿಂದ ತೀರ ಸೂಕ್ಷ್ಮವಾದ ಪ್ರದೇಶಗಳನ್ನು ಸಂರಕ್ಷಿಸುವುದು ಹೇಗೆಂಬ ಬಗ್ಗೆ ಸ್ಥಳೀಯ ಹುಲ್ಲುಬೇರಿನ ಮಟ್ಟದ ಜನರೊಡನೆ ಸಮಾಲೋಚಿಸಿ ಹೆಜ್ಜೆ ಇಡೋಣವೆಂದು ನಾವು ಸಲಹೆ ಮಾಡಿದ್ದೆವು. ಈ ವಿಂಗಡನೆಯನ್ನು ನೀವು ತಳ್ಳಿ ಹಾಕಿದ್ದೀರಿ. ಅದರ ಬದಲಿಗೆ ಇಡೀ ಘಟ್ಟ ಪ್ರದೇಶದ ಮೂರನೆಯ ಒಂದು ಭಾಗ ಮಾತ್ರ ಸೂಕ್ಷ್ಮ ಪ್ರದೇಶವೆಂದು ಹೇಳಿ, ಇನ್ನುಳಿದ ಭಾಗವನ್ನು ಜನರ ಓಡಾಟವಿರುವ ಸ್ಥಳಗಳನ್ನೆಲ್ಲ 'ಸಾಂಸ್ಕೃತಿಕ ಭೂಚಿತ್ರಣ'ವೆಂದು ಹೆಸರಿಸಿ ಅದನ್ನೆಲ್ಲ ಅಭಿವೃದ್ಧಿಗೆ ಬಳಸಬಹುದೆಂದು ಶಿಫಾರಸು ಮಾಡಿದ್ದೀರಿ. ಅಭಿವೃದ್ಧಿ ಎಂದರೆ ಗೋವಾದಲ್ಲಿ ಕಂಡಂಥ ೩೫ ಸಾವಿರ ಕೋಟಿ ರೂಪಾಯಿಗಳ ಕಾನೂನುಬಾಹಿರ ಗಣಿ ಅಗೆತದ ಹಗರಣವೂ ಆಗಬಹುದು. ಅದರ ಪರಿಣಾಮ ಏನಾಗುತ್ತದೆ ಗೊತ್ತೆ? ಜೀವಜಾಲವೆಲ್ಲ ಧ್ವಂಸವಾಗಿ ಮರುಭೂಮಿಯಂತಾಗಿ ಅದರ ನಡುವೆ ಅಲ್ಲಲ್ಲಿ ಅಭಯಾರಣ್ಯಗಳ ಓಯಸಿಸ್ ಮಾತ್ರ ಕಾಣುತ್ತದೆ. ಅರಣ್ಯ ಪ್ರದೇಶಗಳು ಹೀಗೆ ಛಿದ್ರವಾಗುತ್ತಿದ್ದರೆ ಮರುಭೂಮಿಗಳು ಓಯಸಿಸ್‌ಗಳನ್ನೂ ನುಂಗಿಹಾಕುತ್ತವೆ ಎಂದು ನಾವು ಇಕಾಲಜಿ ಪಾಠಗಳಲ್ಲಿ ಓದಿದ್ದೆವು. ವನ್ಯಜೀವಿಗಳ ಆವಾಸಸ್ಥಾನಗಳು ಒಂದಕ್ಕೊಂದು ಜೋಡಿಸಿದಂತಿರಬೇಕಾದುದು ಮುಖ್ಯ. ಹಾಗೆಯೇ ವನ್ಯಜೀವಿಗಳ ದೀರ್ಘಾವಧಿ ಸಂರಕ್ಷಣೆಗೆ ಆಶಿಸುವುದಾದರೆ ಅವುಗಳೊಂದಿಗೆ ಮನುಷ್ಯರ ಮಿತ್ರಭಾವದ ಸಂಬಂಧವಿರಬೇಕಾದುದೂ ಅಷ್ಟೇ ಮುಖ್ಯ. ನಮ್ಮ ವರದಿಯಲ್ಲಿ ನಾವು ಇದನ್ನೇ ಒತ್ತಿ ಹೇಳಿದ್ದೆವು.

ಪಶ್ಚಿಮಘಟ್ಟಗಳಲ್ಲಿ ವನ್ಯ ಜೀವಿವೈವಿಧ್ಯಕ್ಕಿಂತ ಹೆಚ್ಚಾಗಿ ಜಲ ಜೀವಿವೈವಿಧ್ಯಕ್ಕೆ ಭಾರಿ ಕಂಟಕ ಬಂದೊದಗಿದೆ. ನದಿ ಜಲಾಶಯಗಳೆಲ್ಲ ನೀವು ಹೇಳುವ 'ಸಾಂಸ್ಕೃತಿಕ ಭೂಚಿತ್ರಣ'ದಲ್ಲೇ ಬರುತ್ತವೆ. ಬಹಳಷ್ಟು ಶ್ರಮಿಕರು ತಮ್ಮ ಬದುಕಿನ ಆಸರೆಗೆ ಹಾಗೂ ಊಟಕ್ಕೆ ಅಲ್ಲಿನ ಜಲಜೀವಿವೈವಿಧ್ಯವನ್ನೇ ನಂಬಿಕೊಂಡಿದ್ದಾರೆ. ಇವೆಲ್ಲ ಹೇಗೆ ಧ್ವಂಸವಾಗುತ್ತವೆಂದು ತೋರಿಸಲೆಂದೇ ನಾವು ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯಲ್ಲಿ ಸ್ಥಾಪಿಸಲಾದ ಲೋಟೆ ಕೆಮಿಕಲ್ ಉದ್ಯಮ ಸಂಕೀರ್ಣದ ಉದಾಹರಣೆಯನ್ನು ನಮ್ಮ

ವರದಿಯಲ್ಲಿ ಕೊಟ್ಟಿದ್ದೆವು. ಅಲ್ಲಿ ಜಲಮಾಲಿನ್ಯ ಮಟ್ಟ ಎಲ್ಲ ಕಾನೂನುಮಿತಿಗಳನ್ನು ಮೀರಿ ಹೆಚ್ಚಾಗಿದ್ದು, ಮೀನುಗಾರಿಕೆಯಿಂದ ಬದುಕುತ್ತಿದ್ದ ೨೦ ಸಾವಿರ ಜನರು ಕೆಲಸ ಕಳೆದುಕೊಂಡಿದ್ದಾರೆ. ಉದ್ಯಮ ಸಂಕೀರ್ಣದಲ್ಲಿ ೧೧ ಸಾವಿರ ಜನರು ಮಾತ್ರ ಉದ್ಯೋಗ ಪಡೆದಿದ್ದಾರೆ. ಹೀಗಿದ್ದರೂ ಅಲ್ಲಿನ ಸರ್ಕಾರ ಇನ್ನಷ್ಟು ಮತ್ತಷ್ಟು ಉದ್ಯಮಗಳನ್ನು ಅಲ್ಲಿಯೇ ನೆಲೆಗೊಳಿಸುವ ಹುನ್ನಾರ ನಡೆಸಿದೆ. ಯಾವ ಪ್ರದೇಶದಲ್ಲಿ ಎಷ್ಟು ಉದ್ಯಮಗಳಿರಬೇಕೆಂಬ ತನ್ನದೇ ಸೂತ್ರವನ್ನು ಅದುಮಿಟ್ಟು ಹೊಸ ಉದ್ಯಮಗಳಿಗೆ ಜಾಗ ಕಲ್ಪಿಸುತ್ತಿದೆ.

ಆರ್ಥಿಕ ನಿರ್ಧಾರ ಕೈಗೊಳ್ಳುವಲ್ಲಿ ಸ್ಥಳೀಯ ಜನರ ಪಾತ್ರ ಇರಬೇಕಿಲ್ಲವೆಂದು ಬರೆದು ನೀವೊಂದು ಆಘಾತಕಾರಿ ಧೋರಣೆಯನ್ನು ಪ್ರದರ್ಶಿಸಿದ್ದೀರಿ. ಪ್ರಜೆಗಳಿಗೆ ತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸುವ ಹಕ್ಕನ್ನು ಸಂವಿಧಾನವೇ ನೀಡಿದೆ. ಲೋಟೆ ಕಾರ್ಖಾನೆಗಳಿಂದ ಉಂಟಾದ ಮಾಲಿನ್ಯದ ನಿವಾರಣೆಗೆ ಸರ್ಕಾರ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಆದರೆ ೨೦೦೭–೦೯ರ ನಡುವಣ ೬೦೦ ದಿನಗಳಲ್ಲಿ ಜಲಮಾಲಿನ್ಯದ ವಿರುದ್ಧ ಸ್ಥಳೀಯ ಜನರು ೧೮೦ ದಿನ ನ್ಯಾಯಬದ್ಧ ಹಾಗೂ ಶಾಂತಿಯುತ ಪ್ರತಿಭಟನೆ ಮಾಡುತ್ತಿದ್ದಾಗ ಅದನ್ನು ಹತ್ತಿಕ್ಕಲೆಂದು ಸರ್ಕಾರ ಪೊಲೀಸ್ ಬಲವನ್ನು ಬಳಸಿಕೊಂಡಿತು.

ಭಾರತದ ಸಾಂಸ್ಕೃತಿಕ ಭೂಚಿತ್ರಣಗಳಲ್ಲೂ ಜೀವಿವೈವಿಧ್ಯದ ಅನೇಕ ಘಟಕಗಳ ಮಹತ್ವದ ಸಂಗತಿಗಳಿವೆ. ಪಶ್ಚಿಮ ಘಟ್ಟಗಳನ್ನು ಬಿಟ್ಟರೆ ಜಗತ್ತಿನ ಬೇರೆಲ್ಲೂ ಕಾಣಸಿಗದ ಸಿಂಗಳೀಕ (ಸಿಂಹಬಾಲದ ಕಪಿ)ಗಳ ಶೇಕಡಾ ೭೫ ಕುಟುಂಬಗಳು ಚಹತೋಟಗಳಲ್ಲೇ ವಾಸಿಸುತ್ತಿವೆ. ನಾನಿರುವ ಪುಣೆಯ ನಿವಾಸದ ಸುತ್ತ ಅಶ್ವತ್ಥ, ಆಲ, ಅತ್ತಿ, ಗೋಣಿ ವೃಕ್ಷಗಳಿವೆ. 'ಫೈಕಸ್' ಕುಟುಂಬಕ್ಕೆ ಸೇರಿದ ಇವು ಆಧುನಿಕ ಜೀವಜಾಲ ವಿಜ್ಞಾನದಲ್ಲಿ 'ಕೀಲಿಕಲ್ಲಿನ ಪ್ರಭೇದ' ಎಂತಲೇ ಮಹತ್ವ ಪಡೆದಿವೆ. ಏಕೆಂದರೆ ಇವನ್ನು ಬೀಳಿಸಿದರೆ ಈ ಮರಗಳನ್ನೇ ಆಧರಿಸಿದ ಅಸಂಖ್ಯ ಇತರ ಜೀವಿಗಳೂ ನಾಶವಾಗುತ್ತವೆ. ನಾನಿರುವ ಬಡಾವಣೆಯಲ್ಲಿ ಸಂಜೆಯ ವೇಳೆ ನವಿಲುಗಳ ಕೂಗನ್ನು ಕೇಳಬಹುದು; ಛಾವಣಿ ಏರಿದರೆ ಅವುಗಳ ನಾಟ್ಯವನ್ನೂ ನೋಡಬಹುದು. ನಿಸರ್ಗವನ್ನು ಗೌರವಿಸುವ ಭಾರತದ ಬಲವಾದ ಸಾಂಸ್ಕೃತಿಕ ಪರಂಪರೆಯಲ್ಲಿ ಬೆಳೆದು ಬಂದ ನಮ್ಮ ಜನಸಾಮಾನ್ಯರು ಇವನ್ನೆಲ್ಲ ಪೂಜ್ಯಭಾವದಿಂದ ಸಂರಕ್ಷಿಸುತ್ತಿರುವುದರಿಂದಲೇ ನಮ್ಮಲ್ಲಿ ದೇವರ ಕಾಡುಗಳು, ಆಲ–ಅಶ್ವತ್ಥ, ಕಪಿ ಮತ್ತು ನವಿಲುಗಳು ಇಂದಿಗೂ ಸುರಕ್ಷಿತವಾಗಿವೆ.

ಇವೆಲ್ಲವೂ ಹೋದರೆ ಹೋಗಲಿ ಎಂಬ ಧೋರಣೆ ಬೆಳೆಯುತ್ತಿದೆಯೇನೊ. ಬ್ರಿಟಿಷ್ ವಸಾಹತುಶಾಹಿಯ ಕಂಠೋಕ್ತ ದಲ್ಲಾಳಿ ಎನಿಸಿದ್ದ ಫ್ರಾನ್ಸಿಸ್ ಬುಕಾನನ್ ನನಗೆ ನೆನಪಾಗುತ್ತಾನೆ. ಈಸ್ಟ್ ಇಂಡಿಯಾ ಕಂಪೆನಿಗೆ ತನ್ನಹಕ್ಕಿನದಾಗಿರುವ ಗಿಡಮರಗಳು ಸಿಗದಂತಾಗಲೆಂಬ ಸಂಚಿನಲ್ಲೇ ಭಾರತೀಯರು 'ದೇವರ ಕಾಡು'ಗಳನ್ನು ಸೃಷ್ಟಿ ಮಾಡಿದ್ದಾರೆಂದು ೧೮೦೧ರಲ್ಲಿ ಆತ ಬರೆದಿದ್ದಾನೆ.

ನಾವೀಗ ಬ್ರಿಟಿಷರಿಗಿಂತ ಬಲವಾದ ಬ್ರಿಟಿಷರಾಗಿದ್ದೇವೆಂದು ನನಗೆ ಅನ್ನಿಸುತ್ತಿದೆ. ಭೂಮಂಡಲೀಕರಣಗೊಂಡ ಜಗತ್ತಿನ ಧನಿಕರು ಮತ್ತು ಶಕ್ತಿಶಾಲಿಗಳು ಕಾನೂನನ್ನು

ಗೌರವಿಸದ, ಉದ್ಯೋಗಗಳನ್ನು ಸೃಷ್ಟಿಸದ ತಮ್ಮ ಆರ್ಥಿಕ ಅಭಿವೃದ್ಧಿಯ ಧಾವಂತದಲ್ಲಿ ಮನಸೋಇಚ್ಛೆ ಇಲ್ಲಿನ ಭೂಮಿಯನ್ನೂ ನೀರನ್ನೂ ಹೀರಿ ಕೊಳಕೆಬ್ಬಿಸಬಂದಾಗ ಇಲ್ಲಿನ ಸಾಂಸ್ಕೃತಿಕ ಭೂಪ್ರದೇಶದಲ್ಲಿರುವ ಜನರ ನಿಸರ್ಗಪ್ರೀತಿಯ ಸಂಕೇತಗಳೆಲ್ಲ ಒಂದು ರೀತಿಯ ಸಂಚೆಂದೇ ಹೇಳಲುಹೊರಟಿದ್ದೇವೆ. ವಾಸ್ತವ ನಿಜಕ್ಕೂ ನಾವು ಊಹಿಸಿದ್ದಕ್ಕಿಂತ ವಿಲಕ್ಷಣದ್ದಾಗಿರುತ್ತದೆ!

ಇತಿ ನಿಮ್ಮ,

ಮಾಧವ ಗಾಡ್ಗೀಳ್

ವಿಶ್ವ ಪರಂಪರೆ ಮಾನ್ಯತೆ ವರವೋ, ಶಾಪವೋ?

– ಪ್ರೊ.ಕೆ.ಎಸ್.ನಾಗಪತಿ

ಎರಡನೇ ಮಹಾಯುದ್ಧದಿಂದ ಆದ ವಿನಾಶದ ಬಗ್ಗೆ ಜನರಲ್ಲಿ ಸಾಕಷ್ಟು ನೋವು ಹಾಗೂ ದು:ಖ ತುಂಬಿದ್ದವು. ಯಾವುದಾದರೂ ಒಂದು ವ್ಯವಸ್ಥೆಯನ್ನು ತಂದು ವಿಶ್ವ ಶ್ರೇಷ್ಠ ಮೌಲ್ಯಗಳನ್ನು ಹೊಂದಿದ್ದ ಸ್ಥಳಗಳನ್ನು ಕಾಪಾಡಬೇಕೆಂಬ ಹಂಬಲ ಹೆಚ್ಚಾಗಿತ್ತು.

ಇದಕ್ಕೋಸ್ಕರ ವಿಶ್ವದ ಹಲವು ರಾಷ್ಟ್ರದ ನಾಯಕರು ೧೯೬೫ರಲ್ಲಿ ವಾಂಗ್‌ಟನ್‌ನಲ್ಲಿ ಒಂದು ಸಭೆ ಸೇರಿದರು. ಈ ಸಭೆಯಲ್ಲಿ ಸಾಕಷ್ಟು ಚರ್ಚೆಯ ನಂತರ ವಿಶ್ವಶ್ರೇಷ್ಠ ಸ್ಥಳಗಳನ್ನು ಉಳಿಸುವ ದೃಷ್ಟಿಯಿಂದ ವಿಶ್ವಸ್ಥ ಮಂಡಳಿಯೊಂದನ್ನು ಸ್ಥಾಪಿಸಲು ನಿರ್ಧರಿಸಲಾಯಿತು.

ಇದರ ಮುಖ್ಯ ಉದ್ದೇಶ ಚಾರಿತ್ರಿಕ, ಸಾಂಸ್ಕೃತಿಕ ಅಥವಾ ಪ್ರಾಕೃತಿಕ ವಿಶ್ವೋತ್ಕೃಷ್ಟ ಸ್ಥಳಗಳನ್ನು ಸಂರಕ್ಷಿಸಿ, ಅವುಗಳನ್ನು ಮುಂದಿನ ತಲೆಮಾರಿಗೆ ಕೊಡುವುದಾಗಿರುತ್ತದೆ. ಇದರ ಪರಿಣಾಮವಾಗಿ ಯುನೆಸ್ಕೋ ೧೯೭೨ರಲ್ಲಿ ಪ್ಯಾರಿಸ್ಸಿನಲ್ಲಿ ವಿಶ್ವ ಪರಂಪರೆ ಸಮ್ಮೇಳನವನ್ನು ಏರ್ಪಡಿಸಿತ್ತು. ವಿಶ್ವದ ೧೭೦ ರಾಷ್ಟ್ರಗಳು ಇದರಲ್ಲಿ ಭಾಗವಹಿಸಿ, ೧೬-೧೧-೧೯೭೨ರಂದು ಒಂದು ಒಪ್ಪಂದಕ್ಕೆ ಸಹಿ ಹಾಕಿದವು. ಈ ಒಪ್ಪಂದದ ಒಟ್ಟು ಸಾರಾಂಶ ಎಂದರೆ :-

ವಿಶ್ವದಲ್ಲಿಯಾವುದೇ ದೇಶದಲ್ಲಿ ವಿಶ್ವಶ್ರೇಷ್ಠ ಸಾಂಸ್ಕೃತಿಕ ಅಥವಾ ಪ್ರಾಕೃತಿಕ ತಾಣ ಇದ್ದರೂ, ಅದನ್ನು ಸಂರಕ್ಷಿಸಿ, ಮುಂದಿನ ತಲೆಮಾರಿಗೆ ಕೊಡುವ ವ್ಯವಸ್ಥೆ ಆಗಬೇಕಿದೆ.

ಈ ಸ್ಥಳ ಯಾವುದೇ ದೇಶದಲ್ಲಿದ್ದರೂ, ಅದು ವಿಶ್ವ ಮಾನವ ಸಮುದಾಯಕ್ಕೆ ಸೇರಿದ್ದು.

ಆಯಾ ದೇಶದ ಸಾರ್ವಭೌಮತೆಗೆ ಧಕ್ಕೆ ಬರದಂತೆ, ಆ ಸ್ಥಳಗಳು ವಿಶ್ವಸಮುದಾಯದ ಸಂರಕ್ಷಣೆಯಲ್ಲಿರುತ್ತದೆ.

ಯುನೆಸ್ಕೋದ ಮಾರ್ಗದರ್ಶನದಂತೆ, ಆಯಾ ರಾಷ್ಟ್ರಗಳು, ಅದರ ಸಂಪೂರ್ಣ ರಕ್ಷಣೆಯ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು.

ಯುನೆಸ್ಕೋ ಕೇವಲ ಮಾರ್ಗದರ್ಶನ, ತಾಂತ್ರಿಕ ಸಲಹೆ ಹಾಗೂ

ಅವಶ್ಯವಿದ್ದಲ್ಲಿ ಆರ್ಥಿಕ ಸಹಾಯ ಕೊಡುತ್ತದೆಯೇ ವಿನಃ ಅದರ ನೇರ ಒಡೆತನವನ್ನು ತೆಗೆದುಕೊಳ್ಳುವುದಿಲ್ಲ.

ಆದ್ದರಿಂದ ವಿಶ್ವಪರಂಪರೆ ಪಟ್ಟಿಗೆ ಸೇರಿದ ತಾಣಗಳು ಆಯಾ ದೇಶದ ಒಡೆತನ ಹಾಗೂ ನಿಯಂತ್ರಣದಲ್ಲಿದ್ದು, ವಿಶ್ವಪರಂಪರೆಯ ಮಾರ್ಗಸೂಚಿಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಮಾತ್ರ ಆಯಾ ದೇಶಕ್ಕೆ ಇರುತ್ತದೆ.

ಪ್ರತಿ ರಾಷ್ಟ್ರವೂ ೨ ವರ್ಷಕ್ಕೊಮ್ಮೆ ಒಂದು ವರದಿಯನ್ನು ವಿಶ್ವಪರಂಪರೆ ಸಲಹಾ ಸಮಿತಿಗೆ ಕೊಡಬೇಕು. ಈ ವರದಿಯಲ್ಲಿ ಸಂರಕ್ಷಿಸಲ್ಪಟ್ಟ ತಾಣದ ಸದ್ಯದ ಪರಿಸ್ಥಿತಿ, ಸಂರಕ್ಷಿಸಲು ತೆಗೆದುಕೊಂಡ ಕ್ರಮಗಳು, ಇದ್ದ ಅಡಚಣೆ, ಹಾಗೂ ತೊಂದರೆಗಳನ್ನು ತಿಳಿಸಬೇಕು.

ಸದ್ಯ ೧೯೮ ರಾಷ್ಟ್ರಗಳ ಒಂದು ಪ್ರಾತಿನಿ ಧಿಕ ಸಲಹಾ ಸಮಿತಿ ಇರುವುದು. ಈ ಸಲಹಾ ಸಮಿತಿಯ ಅವಧಿ ೬ ವರ್ಷವಿದ್ದು, ವರ್ಷಕ್ಕೆ ಎರಡು ಸಾರಿ ಸಭೆ ಸೇರಿ, ಹಲವು ರಾಷ್ಟ್ರಗಳಿಂದ ವಿಶ್ವಪರಂಪರೆ ಪಟ್ಟಿಗೆ ಸೇರಿಸಲು ಒಂದು ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸುತ್ತದೆ. ಇದಕ್ಕೆ ತಾಂತ್ರಿಕ ಸಲಹೆ ಕೊಡಲು ೨ ಉಪ ಸಮಿತಿ ಇದೆ.

ಅಂತರ ರಾಷ್ಟ್ರೀಯ ಪ್ರಾಕೃತಿಕ ಸ್ಥಳಗಳ ಸಂರಕ್ಷಣಾ ಸಮಿತಿ.

ಅಂತರ ರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆ ಹಾಗೂ ಸ್ಮಾರಕಗಳ ಅಧ್ಯಯನ ಹಾಗೂ ಸಂರಕ್ಷಣೆ ಕೇಂದ್ರ.

ಪ್ರತಿ ರಾಷ್ಟ್ರಗಳಿಂದ ಪರಂಪರಾ ಪಟ್ಟಿಗೆ ಸೇರಿಸಲು ನೂರಾರು ಅರ್ಜಿಗಳು ಬರುತ್ತವೆ. ಅದರ ಆಧ್ಯಯನ ಮಾಡಿ, ತಾಂತ್ರಿಕ ಆಭಿಪ್ರಾಯ ಕೊಡಲು ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿದ ಸಾವಿರಾರು ತಂತ್ರಜ್ಞರು ಇದ್ದಾರೆ. ತಮ್ಮ ದೇಶದಲ್ಲಿರುವ ಪರಂಪರೆಯನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸುವುದು ಆ ದೇಶದ ಹೆಮ್ಮೆ ಹಾಗೂ ಹೆಗ್ಗಳಿಕೆ ,ಎಂದು ಭಾವಿಸುತ್ತವೆ. ೩೦-೭-೨೦೧೨ರಲ್ಲಿ ಈ ಕೆಳಕಂಡ ಪ್ರದೇಶದಲ್ಲಿ ವಿಶ್ವದ ಪಾರಂಪರಿಕ ತಾಣಗಳಿವೆ. (ಪಟ್ಟಿ ನೋಡಿ)

೨೪.೬.೨೦೧೨ ರಿಂದ ೬.೭.೨೦೧೨ರ ವರೆಗೆ ಸುಮಾರು ಎರಡು ವಾರಗಳ ಕಾಲ, ಸೇಂಟ್ ಪೀಟರ್ಸ್ ಬರ್ಗ್, ರಷ್ಯಾದಲ್ಲಿ ವಿಶ್ವ ಪರಂಪರೆ ಸಮಿತಿಯು ಸಭೆ ಸೇರಿ ೨೬ ತಾಣಗಳನ್ನು ವಿಶ್ವ ಪರಂಪರೆ ಪಟ್ಟಿಗೆ ಸೇರಿಸಲು ತೀರ್ಮಾನಿಸಲಾಯಿತು. ಇವುಗಳು ಈಗ ೧೫೭ ರಾಷ್ಟ್ರದಲ್ಲಿವೆ. ಇದರಲ್ಲಿ ಭಾರತದ ಪಶ್ಚಿಮ ಘಟ್ಟವನ್ನು ವಿಶ್ವ ಪರಂಪರೆಗೆ ಸೇರಿಸಲು ಭಾರತ ೨೦೦೬ರಲ್ಲಿಯೇ ಅರ್ಜಿ ಹಾಕಿತ್ತು. ಸುಮಾರು ಆರು ವರ್ಷಗಳ ಕಾಲ ಸತತ ವಿಚಾರ ವಿನಿಮಯದ ನಂತರ ಅಂತಿಮವಾಗಿ ಪಶ್ಚಿಮ ಘಟ್ಟವನ್ನು ವಿಶ್ವ ಪರಂಪರೆಗೆ ಸೇರಿಸಲಾಗಿದೆ. ವಿಶ್ವ ಪರಂಪರೆ ಸಲಹಾ ಸಮಿತಿಯು ಪಶ್ಚಿಮ ಘಟ್ಟದ ಬಗ್ಗೆ ತನ್ನ ಅಭಿಪ್ರಾಯವನ್ನು ಈ ರೀತಿ ಹೇಳಿದೆ.

ಹಿಮಾಲಯ ಪರ್ವತಕ್ಕಿಂತ ಪ್ರಾಚೀನವಾಗಿದ್ದು, ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿಗಳು, ಭೌತಿಕ ಹಾಗೂ ಜೈವಿಕ ಪ್ರಾಮುಖ್ಯತೆಯನ್ನು ಹೊಂದಿದ್ದು ಭೂಮಿಯ ಉಗಮದ ರೀತಿಯನ್ನು ಹೇಳುವ ವಿಶಿಷ್ಟ ಲಕ್ಷಣ ಹೊಂದಿದೆ. ಇದು ಅತ್ಯಂತ ದಟ್ಟ ಪರ್ವತ ಶ್ರೇಣಿಯ ಅರಣ್ಯ ಹೊಂದಿದ್ದು ಭಾರತದ ಮುಂಗಾರನ್ನು ನಿಯಂತ್ರಿಸುತ್ತದೆ.

ಈ ಸ್ಥಳ ಜೈವಿಕ ವೈವಿಧ್ಯತೆಯ ದಟ್ಟ ತಾಣವೂ ಹೌದು. ಪ್ರಾಕೃತಿಕ ವೈವಿಧ್ಯತೆಯಲ್ಲಿ ವಿಶ್ವದ ಹತ್ತು ಸ್ಥಳಗಳಲ್ಲಿ ಪಶ್ಚಿಮ ಘಟ್ಟವೂ ಒಂದು. ಅಪಾಯದ ಅಂಚಿನಲ್ಲಿರುವ ಸಾವಿರಾರು ಸಸ್ಯ ಹಾಗೂ ಪ್ರಾಣಿ ಸಂಕುಲಗಳಿಗೆ ಆಶ್ರಯ ಕೊಟ್ಟಿದೆ. ಇದನ್ನು ಸರಿಯಾಗಿ ಸಂರಕ್ಷಿಸದೆ ಹೋದಲ್ಲಿ ಇವು ನಶಿಸಿ ಹೋಗಿ ಮುಂದಿನ ಪೀಳಿಗೆಗೆ ಇಲ್ಲದಂತಾಗುತ್ತದೆ.

ಪಶ್ಚಿಮ ಘಟ್ಟಗಳು ೧೬೦೦ ಕಿ.ಮೀ. ವ್ಯಾಪ್ತಿಯಲ್ಲಿದ್ದು ಭಾರತದ ಆರು ರಾಜ್ಯಗಳಿಗೆ ಪಸರಿಸಿದೆ. ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಹಾಗೂ ತಮಿಳುನಾಡು. ಇದರ ಒಟ್ಟು ವಿಸ್ತೀರ್ಣ ೧,೬೦,೦೦೦ ಚ.ಕಿ.ಮೀ. ಇದ್ದು, ಕರ್ನಾಟಕದಲ್ಲಿ ಸುಮಾರು ೧,೦೦,೦೦೦ ಚ.ಕಿ.ಮೀ. ನಷ್ಟು ವ್ಯಾಪಿಸಿದೆ. ಒಟ್ಟು ವಿಶ್ವ ಪರಂಪರೆಗೆ ಸೇರಿದ ಸ್ಥಳ ಸುಮಾರು ೮,೦೦೦ ಚ,ಕಿ.ಮೀ. ಇದ್ದು ಒಟ್ಟು ಭಾಗದ ಶೇ. ೫ ಮಾತ್ರ ವ್ಯಾಪಿಸಿದೆ.

ಕರ್ನಾಟಕದಲ್ಲಿ ಇರುವ ಒಟ್ಟು ವಿಸ್ತಾರದಲ್ಲಿ ಕೇವಲ ೧೭೩೧ ಚ.ಕಿ.ಮೀ. ವ್ಯಾಪ್ತಿಯನ್ನು ಪರಂಪರೆ ಪಟ್ಟಿಗೆ ಸೇರಿಸಲಾಗಿದೆ. ಅಂದರೆ ಕರ್ನಾಟಕದಲ್ಲಿರುವ ಪಶ್ಚಿಮ ಘಟ್ಟದ ಒಟ್ಟು ವಿಸ್ತಾರದಲ್ಲಿ ಕೇವಲ ೧.೭೩% ಮಾತ್ರ ವಿಶ್ವ ಪರಂಪರೆ ಪಟ್ಟಿಗೆ ಸೇರಿಸಲಾಗಿದೆ.

ಈಗ ಘೋಷಣೆ ಮಾಡಿದ ಸ್ಥಳಗಳೆಲ್ಲವೂ ರಕ್ಷಿತ ಪ್ರದೇಶ, ವನ್ಯಧಾಮ ಅಥವಾ ಸಂರಕ್ಷಿತ ಅರಣ್ಯ ಪ್ರದೇಶವಾಗಿರುತ್ತವೆ. ಈ ಪ್ರದೇಶಗಳಿಗೆ ಈಗಾಗಲೇ ಭಾರತೀಯ ವನ್ಯಜೀವಿ ಸಂರಕ್ಷಣಾ ಕಾಯ್ದೆ ೧೯೭೨, ಹಾಗೂ ಭಾರತೀಯ ಸಂರಕ್ಷಿತ ಅರಣ್ಯ ಕಾಯ್ದೆ ೧೯೮೦ ಅನ್ವಯವಾಗುತ್ತದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆಯ ೩೩ ಕಲಂ ನಡಿ, ಮುಖ್ಯ ವನ್ಯಜೀವಿ ಸಂರಕ್ಷಣಾ ಅಧಿಕಾರಿಗೆ ಅವಶ್ಯವಿದ್ದಲ್ಲಿ ರಸ್ತೆ, ಸೇತುವೆ ಹಾಗೂ ಇನ್ನಿತರ ಕಾಮಗಾರಿಗಳನ್ನು ಮಾಡಲು ಅನುಮತಿ ಕೊಡುವ ಅಧಿಕಾರವನ್ನು ಕೊಡಲಾಗಿದೆ.

ಇದಲ್ಲದೆ, ಈಗಾಗಲೆ ದೇಶದ ಸರ್ವೋನ್ನತ ನ್ಯಾಯಾಲಯವು ಸಂರಕ್ಷಿತ ಅರಣ್ಯ ಪ್ರದೇಶವನ್ನು ಬೇರಾವುದೇ ಉದ್ದೇಶಕ್ಕೂ ಬಳಸಬಾರದೆಂದು ಆಜ್ಞೆ ಮಾಡಿದೆ. ಈ ಎಲ್ಲ ಕಾನೂನನ್ನು ಸಮಗ್ರವಾಗಿ ಅನುಷ್ಠಾನಕ್ಕೆ ತರುವ ಜವಾಬ್ದಾರಿ, ಆಯಾ ಸ್ಥಳೀಯ ಸರ್ಕಾರ ಹಾಗೂ ಜನರಿಗೆ ಇದೆ. ವಿಶೇಷವಾಗಿ ವನ್ಯ ಸಂಪತ್ತನ್ನು ಕಾಡುಗಳ್ಳರಿಂದ ರಕ್ಷಿಸುವಲ್ಲಿ ಸ್ಥಳೀಯರ ಪಾತ್ರ ಬಹು ಮುಖ್ಯವಾದದ್ದು. ಈಗಿರುವ ನಮ್ಮ ಕಾನೂನಿನ ಹೊರತಾಗಿ ಯುನೆಸ್ಕೊ ಯಾವುದೇ ಹೊಸ ಷರತ್ತನ್ನು ಹಾಕಿಲ್ಲ ಹಾಗೂ ಹಾಕುವುದೂ ಇಲ್ಲ.

ಈ ಪ್ರದೇಶದ ಹತ್ತಿರದಲ್ಲಿ ವಾಸವಾಗಿರುವ ಸ್ಥಳೀಯರು ಪ್ರಕೃತಿಯ ಜೊತೆ-ಗೆ ಒಂದಾಗಿ ಬದುಕಲು ಕಲಿತಿದ್ದಾರೆ ಸಾಧಾರಣವಾಗಿ ವಿಶ್ವಪರಂಪರೆಗೆ ಸೇರಿದ ನಂತರ ಆ ತಾಣವನ್ನು ನೋಡಿ ಆನಂದಿಸಲು ಪ್ರವಾಸಿಗರು ಹೆಚ್ಚಾಗಿ ಬರುತ್ತಾರೆ.

ಧಾರಣ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರವಾಸೋದ್ಯಮವನ್ನು ಬೆಳೆಸಬೇಕು. ಸ್ಥಳೀಯರ ಸಹಭಾಗಿತ್ವದಲ್ಲಿ ಪ್ರವಾಸೋದ್ಯಮವನ್ನು ಬೆಳೆಸಬೇಕು. ಸ್ಥಳೀಯರು ತಯಾರಿಸಿದ ಕರಕುಶಲ ವಸ್ತುಗಳು ಹಾಗೂ ಇನ್ನಿತರ ಪದಾರ್ಥಗಳಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಿದರೆ ಯಾವುದೇ ತೊಂದರೆ ಇಲ್ಲದಂತೆ ಸ್ಥಳೀಯರು

ಬದುಕಬಹುದು. ಈಗಾಗಲೇ ವಾಸವಾಗಿರುವ ಸ್ಥಳೀಯರನ್ನು ಒಕ್ಕಲೆಬ್ಬಿಸಿ ಎಂದು ವಿಶ್ವ ಪರಂಪರೆ ಒಡಂಬಡಿಕೆಯಲ್ಲಿ ಎಲ್ಲಿಯೂ ಹೇಳಿಲ್ಲ.

ವಿಶ್ವ ಪರಂಪರೆಗೆ ಸೇರಿಸಿದ ನಂತರ ಹಂಪಿಯಲ್ಲಿ ಪ್ರವಾಸೋದ್ಯಮ ಹೆಚ್ಚಾಗಿ, ದೇವಸ್ಥಾನದ ಎದುರು ಹಲವು ವಾಣಿಜ್ಯ ಕಟ್ಟಡಗಳು ಹಾಗೂ ಅಂಗಡಿ ಗುಡಿಕಟ್ಟಳೆಗಳು ಬಂದವು. ಹೊಸದಾಗಿ ಬಂದ ಈ ಕಟ್ಟಡವನ್ನು ತೆಗೆಸುವಂತೆ ಯುನೆಸ್ಕೊ ಹೇಳಿದೆ. ಇದನ್ನೇ ತಪ್ಪಾಗಿ ಅರ್ಥೈಸಿ ಹಾಲಿ ಇರುವ ಜನರನ್ನು ಒಕ್ಕಲೆಬ್ಬಿಸುತ್ತಾರೆ ಎಂದು ಹೇಳಲಾಗುತ್ತಿದೆ. ಇದು ತಪ್ಪು ಅಭಿಪ್ರಾಯ.

ವಿಶ್ವ ಪರಂಪರೆಗೆ ಸೇರಿಸಿದ ನಂತರವೂ ಒಂದು ವೇಳೆ ತೊಂದರೆಯಾಗುತ್ತದೆ ಎಂದು ಕಂಡು ಬಂದರೆ ಆ ತಾಣವನ್ನು ಪರಂಪರೆ ಪಟ್ಟಿಯಿಂದ ತೆಗೆದು ಹಾಕಬಹುದು.

೨೫ ವರ್ಷಗಳ ಹಿಂದೆ ಮೇಲೆ ಹೇಳಿದ ಪ್ರಾಕೃತಿಕ ಸ್ಥಾನಗಳನ್ನು ವಿಶ್ವ ಪರಂಪರೆಗೆ ಸೇರಿಸಲಾಗಿದ್ದರೂ ಅಲ್ಲಿಯ ಜನರಿಗೆ ಯಾವುದೆ ತೊಂದರೆ ಆದ ಬಗ್ಗೆ ವರದಿಯಾಗಿಲ್ಲ. ಆದ್ದರಿಂದ ಪಶ್ಚಿಮ ಘಟ್ಟ ವಿಶ್ವಪರಂಪರೆಗೆ ಸೇರಿರುವುದು ಒಂದು ರಾಷ್ಟ್ರೀಯ ಹೆಗ್ಗಳಿಕೆ ಹಾಗೂ ಹೆಮ್ಮೆಯ ವಿಷಯವಾಗಿದೆ.ಅಲ್ಲಿರುವ ಅತಿ ವಿರಳ ಹಾಗೂ ವೈವಿಧ್ಯಮಯವಾದ ಪ್ರಾಣಿ ಹಾಗೂ ಸಸ್ಯ ಸಂಕುಲವನ್ನು ಮುಂದಿನ ಪೀಳಿಗೆಗೆ ಕೊಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಇದರ ರಕ್ಷಣೆಯನ್ನು ಎಲ್ಲಾ ಸಂದರ್ಭದಲ್ಲಿಯೂ ಸ್ಥಳೀಯರೇ ಮಾಡಬೇಕೆ ವಿನಃ ಖಂಡಿತವಾಗಿಯೂ ಯುನೆಸ್ಕೊ ಮಾಡುವುದಿಲ್ಲ. ಅದು ಕೇವಲ ತಾಂತ್ರಿಕ ಸಲಹೆ, ಸೂಚನೆ ಹಾಗೂ ಮಾರ್ಗದರ್ಶಿ ಸೂತ್ರಗಳನ್ನು ಮಾತ್ರ ಕೊಡುತ್ತದೆ. (ಸಾಭಾರ–ಪ್ರಜಾವಾಣಿ)

ಸನ್ಮಾನ್ಯರಿಂದ...

ಈ ತಿಂಗಳ 'ಜನಪದ ವಿಚಾರ' ಈವರೆಗೆ ಬಂದಿಲ್ಲ. ಕಾರಣ ಎನೊ.? ಪತ್ರಿಕೆ ಸಿದ್ಧಪಡಿಸುವುದರಲ್ಲಿ ತಡವೊ.? ಪತ್ರಿಕೆ ಎಲ್ಲ ಗಾಂಧೀ ಸರ್ವೋದಯ ಕಾರ್ಯದಂತೆಯೇ, ಕುಗ್ಗುತ್ತಾ ಬಂದಿದೆಯೋ? ಪ್ರತಿ ತಿಂಗಳು ಜನಪದ ವಿಚಾರ ಸರ್ವೋದಯ ವಿಚಾರದ ಬೆಳಕು ತೋರುತಿತ್ತು. ಅದರ ಬಾರದಿರುವಿಕೆ ಎದ್ದು ಕಾಣುತ್ತದೆ. ನನಗಂತೂ ಬಿಕೋ ಎನ್ನಿಸುತ್ತದೆ. ಈಗ ಗಾಂಧೀ ವಿಚಾರ ಹಿಂದೆ ಬಿದ್ದಿದೆ. ದಿನವೂ ಗಾಂಧೀ ಪ್ರಸ್ತಾಪ ಎಲ್ಲಿಯಾದರೂ ಬರುತ್ತಿತ್ತು. ಸರ್ವೋದಯ ಕೆಲಸ ಮಾಡುತ್ತಿದ್ದೀರಿ ಅದೂ ಈಗ ನಿಂತು ಹೋಯಿತೆ ಎಂದು ಕಾಯಿಲೆ ಕೋಣೆಯಲ್ಲಿ ಕುಳಿತು ನಿಸ್ಸಾಹಯಕನಾಗಿ ಚಿಂತಿಸುತ್ತೇನೆ. ಗಾಂಧೀ ವಿರೋಧ ಹೆಚ್ಚುತ್ತಿದೆ. ಒಂದು ಕಡೆ ಕೋಮುವಾದದ ಬಿರುಸು. ಇನ್ನೊಂದು ಕಡೆ ಲೌಖಿಕ ಆಕಾಂಕ್ಷೆಯ ಬಿರುಸು ನಮಗೆ ತ್ಯಾಗದ ಮೇಲೆ ನಿಂತ ಗಾಂಧೀವಿಚಾರ ಸೇರದಾಗುತ್ತಿದೆ. ನಿಸ್ಸಾಹಯಕನಾಗಿ ನಾನು ನೋಡುತ್ತಾ ಕುಳಿತಿದ್ದೇನೆ. ನನ್ನ ಜೀವನ ಆಘಾತಕ್ಕೆ ಸಿಲುಕಿದೆ. ದೈಹಿಕವಾಗಿ ನಿರ್ಬಲತೆ. ಮಾನಸಿಕವಾಗಿ ಹತಾಶೆ. ಎಲ್ಲಿ ನೋಡಿದರೂ ಆಶಾ ಭಂಗವೆ. ಆವರಿಸಿದ ಕಾಯಿಲೆ ಮಾನಸಿಕವಾಗಿ ಇಷ್ಟು ಪ್ರಬಲ ಪರಿಣಾಮ ಬೀರುವುದೆಂದು ಕನಸಿನಲ್ಲೂ ಕಂಡಿರಲಿಲ್ಲ.

– ***ನೀಲತ್ತಹಳ್ಳಿ ಕಸ್ತೂರಿ,*** ಬೆಂಗಳೂರು

ಜನಪದ ನಿಲಯದ ಅಂತರಂಗದಲ್ಲಿ.. ೧೧೩

- ಸುರೇಂದ್ರ ಕೌಲಗಿ



ಮಹಾ ನಗರಗಳಲ್ಲಿ ಆಗಾಗ್ಗೆ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಆಗುತ್ತಿರುವುದನ್ನು ನೋಡಿದೆ. ಮತ್ತು ಪತ್ರಿಕೆಗಳಲ್ಲಿ ಓದಿದೆ. ಸಾಹಿತ್ಯ ಸಮ್ಮೇಳನಗಳಲ್ಲಿ ಕೂಡಾ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಸಾಮಾನ್ಯ ಸಂಗತಿಯಾದುದ್ದನ್ನು ತಿಳಿದಿದೆ. ಆದ್ದರಿಂದ ಮೇಲುಕೋಟೆಯಲ್ಲಿ ಅಂತಹ ಪುಸ್ತಕ ಪ್ರದರ್ಶನ ಮತ್ತು ಮಾರಾಟದ ಕಾರ್ಯಕ್ರಮವನ್ನು ಏಕೆ ಏರ್ಪಡಿಸಬಾರದು ಎಂಬ ವಿಚಾರ ತುಂಬ ಸಮಯದಿಂದ ಮನಸ್ಸನ್ನು ಕಾಡುತ್ತಿತ್ತು ಆದರೆ ಅಂತಹ ಕಾರ್ಯಕ್ರಮವನ್ನು ಮಾಡುವ ಧೈರ್ಯ ಬರುತ್ತಿರಲಿಲ್ಲ ಏಕೆಂದರೆ ಪುಸ್ತಕ ಪ್ರದರ್ಶನ ಮತ್ತು ಮಾರಾಟದಂತಹ ಸಾಹಿತ್ಯಕ ಕಾರ್ಯಕ್ರಮ ಯಶಸ್ಸು ಆಗಬೇಕಾದರೆ ಸುಶಿಕ್ಷಿತ ಜನರು ಮತ್ತು ಪುಸ್ತಕ ಪ್ರೇಮಿಗಳು ಅಪಾರ ಸಂಖ್ಯೆಯಲ್ಲಿ ಇರಬೇಕು ಮೇಲುಕೋಟೆ ಒಂದು ಚಿಕ್ಕ ಹೋಬಳಿ ಕೇಂದ್ರ ಸ್ಥಾನ ಸಂಪೂರ್ಣವಾಗಿ ಕೃಷಿ ಪ್ರಧಾನ ಹಿನ್ನಲೆಯುಳ್ಳ ಊರು. ಜನಸಂಖ್ಯೆಯು ಕಡಿಮೆ. ಅಕ್ಷರಸ್ಥರ ಸಂಖ್ಯೆ ಮತ್ತು ಪುಸ್ತಕ ಪ್ರೇಮಿಗಳ ಸಂಖ್ಯೆ ಇನ್ನು ಕಡಿಮೆ. ಊರಿನಲ್ಲಿ ಆಗ ಪ್ರೌಢಶಾಲೆಯೊಂದಲ್ಲದೆ ಇನ್ನಾವ ದೊಡ್ಡ ಮತ್ತು ವಿವಿಧ ಪ್ರಕಾರದ ಶೈಕ್ಷಣಿಕ ಸಂಸ್ಥೆಗಳು ಇರಲಿಲ್ಲ. ಇದದ್ದು ಕೇವಲ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಷ್ಟೆ ಸಂಸ್ಕೃತ ಪಾಠಶಾಲೆ ಏನೋ ಇದೇ ಆದರೆ ಅಲ್ಲಿಯ ಸಿಬ್ಬಂದಿ ಮತ್ತು ವಿಧ್ಯಾರ್ಥಿಗಳು ಸಂಸ್ಕೃತ ಪ್ರದಾನ ಚಟುವಣಿಕೆಗಳಲ್ಲಿ ಮಾತ್ರ ತೊಡಗಿದಂತಹವರು ಕನ್ನಡದ ಬಗ್ಗೆ ಅಂತಹ ಅಭಿಮಾನ ಹಾಗೂ ಆಸಕ್ತಿ ಅವರಲ್ಲಿ ಕಡಿಮೆ ಹೀಗಾಗಿ ಮೇಲುಕೋಟೆಯಂತಹ ಚಿಕ್ಕ ಊರಿನಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಾಡುವುದು ಒಂದು ಸಾಹಸವೆ, ಆದರೂ ಕೂಡಾ ಜನಪದ ಸೇವಾ ಟ್ರಸ್ಟಿನ ದೇಯೋದ್ದೇಶಗಳಿಗೆ ಅನುಗುಣವಾಗಿ ಅಂತಹ ಕಾರ್ಯಕ್ರಮಯೊಂದನ್ನು ಏರ್ಪಡಿಸುವುದು ಅಗತ್ಯವಾಗಿತ್ತು. ಆದರೆ ಈ ಕಾರ್ಯಕ್ರಮವನ್ನು ಯಾವ ಸಮಯದಲ್ಲಿ ಮಾಡಬೇಕೆಂಬ ಬಗ್ಗೆ ಆಲೋಚನೆ ಪ್ರಾರಂಭಿಸಲಾಯಿತು. ಪುಸ್ತಕಗಳ ಪ್ರದರ್ಶನಕ್ಕೆ ಬೇಕಾದ ಫರ್ನಿಚರ್ ಇತ್ಯಾದಿ ಟ್ರಸ್ಟಿನಲಿರಲಿಲ್ಲ ಅದನ್ನು ಹೊಂದಿಸುವ ಬಗೆ ಹೇಗೆ ಎಂಬ ಆಲೋಚನೆ ಸಹ ಬರುತ್ತಿತ್ತು. ಟ್ರಸ್ಟ್ ಪ್ರತಿವರ್ಷ ಮೊದಮೊದಲು ಸಣ್ಣ ಪ್ರಮಾಣದಲ್ಲಿ ಗಾಂಧೀಜಯಂತಿಯನ್ನು ಆಚರಿಸುತ್ತಿತ್ತು. ಆ ಸಂದರ್ಭದಲ್ಲಿ ಕರುಣಾಗೃಹದ ಮಕ್ಕಳಿಂದ ನೂಲುವ ಸ್ಪರ್ಧೆ ಮಾತ್ರ ಏರ್ಪಡಿಸಲಾಗುತ್ತಿತ್ತು ನಂತರ ಬಹುಮಾನ ವಿತರಣೆ ಹಾಗೂ ಓರ್ವ ಅತಿಥಿಯಿಂದ ಭಾಷಣ ಇಷ್ಟು ಮಾತ್ರ. ಗಾಂಧೀ ಜಯಂತಿಯ ಕಾರ್ಯಕ್ರಮಗಳಾಗಿದ್ದವು. ಪುಸ್ತಕಗಳ ಮಾರಾಟ ಮತ್ತು ಪ್ರದರ್ಶನವನ್ನು ಏರ್ಪಡಿಸುವ ಆಲೋಚನೆ ಬಂದಾಗ ಅದನ್ನು ಗಾಂಧೀ ಜಯಂತಿಯ ಕಾರ್ಯಕ್ರಮದೊಂದಿಗೆ ಜೋಡಿಸಬಹುದಲ್ಲವೆ ಎಂದು ಆಲೋಚಿಸಲಾಯಿತು. ಅಲ್ಲದೆ ಕರುಣಾಗೃಹದ ಮಕ್ಕಳ ಸುತ್ತ ಮುತ್ತಲಿನ ಹಿತ್ತಲಲ್ಲಿ ತರಕಾರಿಯನ್ನು ಬೆಳೆಯುತ್ತಿದ್ದರು. ಆದ್ದರಿಂದ ಗಾಂಧೀಜಯಂತಿಯ

ಸಂದರ್ಭದಲ್ಲಿ ತೋಟಗಾರಿಕಾ ಪ್ರದರ್ಶನವನ್ನು ಕೂಡಾ ಮಾಡಬೇಕೆಂಬ ಸಲಹೆ ಬಂತು ಅದರಂತೆ ಕರುಣಾಗೃಹದ ಮಕ್ಕಳು ಗಾಂಧೀಜಯಂತಿಯನ್ನು ಅಕ್ಟೋಬರ್ ೧–೨ ಮತ್ತು ೩ಈ ಮೂರು ದಿನ ಆಚರಿಸಬೇಕೆಂಬ ಉತ್ಸಾಹ ತೋರಿಸಿದರು. ಮೊದಲನೆಯ ದಿನ ಗಾಂಧಿ ಜಯಂತಿ ಉದ್ಘಾಟನೆ ಎರಡನೇ ದಿನ ಅತಿಥಿ ಭಾಷಣ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಹಾಗೂ ತೋಟದ ಪ್ರದರ್ಶನವನ್ನು ಇಟ್ಟುಕೊಳ್ಳಲಾಯಿತ್ತು.

ಪುಸ್ತಕ ಪ್ರದರ್ಶನಕ್ಕೆ ಬೇಕಾದ ಟೇಬಲ್ ಬೆಂಚ್ ಇತ್ಯಾದಿಗಳನ್ನು ಸ್ಥಳೀಯ ಮಾಧ್ಯಮಿಕ ಶಾಲೆಗಳಿಂದ ತರಲಾಯಿತು ಕರುಣಾಗೃಹದ ಹಾಲ್‌ನಲ್ಲಿ ಅವುಗಳನ್ನು ಇಟ್ಟು ಅವುಗಳ ಮೇಲೆ ವಿವಿಧ ವಿಷಯಗಳ ಪುಸ್ತಕಗಳನ್ನು ಪ್ರದರ್ಶಿಸಲಾಯಿತು. ಈ ಪುಸ್ತಕ ಪ್ರದರ್ಶನಕ್ಕೆ "ಭಾರತಿ" ಎಂದು ನಾಮಕರಣ ಮಾಡಲಾಯಿತ್ತು. ಶನಿವಾರ ಮತ್ತು ಭಾನುವಾರದ ದಿನಗಳಂದೆ ಇದನ್ನು ನಡೆಸಲಾಗುತ್ತಿತ್ತು. ಊರಲ್ಲಿಯ ಹಾಗೂ ಸುತ್ತ ಮುತ್ತಲಿನ ಶಾಲೆಯ ಮಕ್ಕಳು ಮತ್ತು ಅಧ್ಯಾಪಕರು ಪುಸ್ತಕ ಪ್ರದರ್ಶನಕ್ಕೆ ಬರಬೇಕೆಂದು ತಿಳಿಸಲಾಗುತ್ತಿತ್ತು. ಮೊದಲ ವರ್ಷದ ಪುಸ್ತಕ ಪ್ರದರ್ಶನವನ್ನು ಕನ್ನಡದ ಹಿರಿಯ ಸಾಹಿತಿ ಮತ್ತು ಮೇಲುಕೋಟೆಯೊಂದಿಗೆ ಸಂಬಂಧ ಹೊಂದಿದ್ದ "ಸುಜನಾ"ಎಂಬ ಕಾವ್ಯನಾಮದ ನಾರಾಯಣ ಶೆಟ್ಟಿಯವರನ್ನು ಆಹ್ವಾನಿಸಲಾಯಿತ್ತು. ಅವರು ಬಹಳ ಆತ್ಮೀಯತೆಯಿಂದ ಮತ್ತು ಕಳಕಳಿಯಿಂದ ಪುಸ್ತಕ ಪ್ರದರ್ಶನದ ಉದ್ಘಾಟನೆ ಮಾಡಿ ಬಹಳ ಸೊಗಸಾದ ಭಾಷಣ ಮಾಡಿದರು. ನಂತರ ಅವರು ಪುಸ್ತಕ ಪ್ರದರ್ಶನದ ಒಳಗೆ ಹೋಗಿ ಅಲ್ಲಿ ಇದ್ದ ವಿವಿಧ ಬಗೆಯ ಪುಸ್ತಕಗಳನ್ನು ವಿಕ್ಷೀಸಿದರು ಅಷ್ಟೇ ಅಲ್ಲ ಹಲವಾರು ಪುಸ್ತಕಗಳನ್ನು ಕೂಡಾ ಖರೀದಿಸಿ ಪ್ರೋತ್ಸಾಹಿಸಿದರು. ಪುಸ್ತಕಗಳ ಪ್ರದರ್ಶನದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ ಕನ್ನಡ–ಕನ್ನಡ ನಿಘಂಟು ಕೂಡಾ ಇತ್ತು. ಆ ನಿಘಂಟು ಡಾ॥ ಪ್ರಭುಶಂಕರರವರೂ ಕಾಣಿಕೆಯಾಗಿ ಸ್ವಂತ ಉಪಯೋಗಕ್ಕೆಂದು ಕೊಟ್ಟಿದ್ದರು ಅವರು ಕೂಡ ನಿಘಂಟನ ಸಂಪಾದಕೀಯ ಮಂಡಳಿಯಲ್ಲಿ ಇದ್ದವರು. ಪುಸ್ತಕ ಪ್ರದರ್ಶನದ ಹಿರಿಮೆ ಹೆಚ್ಚಲಿ ಎಂಬ ಹೆಬ್ಬಯಕೆಯಿಂದ ಆ ನಿಘಂಟನ್ನು ಮಾರಾಟಕ್ಕೆ ಇಡಲಾಗಿತ್ತು. ಅಷ್ಟು ದೊಡ್ಡ ಬೆಲೆಯ ಪುಸ್ತಕವನ್ನು ಯಾರೂ ಖರೀದಿಸುವುದಿಲ್ಲ ಅದು ಹಾಗೆ ಉಳಿದು ಮರಳಿ ಬರುತ್ತದೆ ಎಂದು ಭಾವಿಸಲಾಗಿತ್ತು. ಆದರೆ ಸಖೇದ ಆಶ್ಚರ್ಯವೆಂದರೆ ಮೇಲುಕೋಟೆಯ ಒಬ್ಬ ವಿಧ್ಯಾರ್ಥಿ ಆ ದುಬಾರಿ ನಿಘಂಟನ್ನು ಖರೀದಿಸಿಯೇ ಬಿಟ್ಟ. ಮಾರಾಟದ ನಿಯಮದ ಪ್ರಕಾರ ಆ ನಿಘಂಟನ್ನು ಅವನಿಗೆ ಕೊಡಲೆಬೇಕಾಯಿತು. ಅದನ್ನು ಕೊಟ್ಟಾಗ ಅಘಾತವಾಯಿತು. ಪಶ್ಚಾತಾಪವೂ ಆಯಿತ್ತು. ಆದರೆ ಕಾಲ ಮಿಂಚಿತು. ಈ ಘಟನೆ ಎಂದೂ ಮರೆಯಲಾಗದಾಗಿದೆ. ತೋಟದಲ್ಲಿ ಗಾಂಧೀ ಜಯಂತಿ ಸಂದರ್ಭದಲ್ಲಿ ಬಹಳಷ್ಟು ತರಕಾರಿ ಬೆಳೆ ಹುಲುಸಾಗಿ ಬೆಳೆಯಿತು. ಎಲ್ಲವನ್ನು ವಿಶಿಷ್ಟ ಆಕಾರದಲ್ಲಿ ಬೆಳೆಯಲಾಗಿತ್ತು. ನೋಡುವವರ ಕಣ್ಣು ಮನಸ್ಸನ್ನು ಸೂರ್ಯಗೊಳ್ಳುವಂತದಾಗಿತ್ತು. ಕರುಣಾಗೃಹದ ಮಕ್ಕಳು ತುಂಬ ಕಷ್ಟ ಪಟ್ಟು ಕೆಲಸ ಮಾಡಿದ್ದನ್ನು ಜನ ನೋಡಿ ಮೆಚ್ಚಿದರೂ ಪ್ರದರ್ಶನದ ಅಂತಿಮ ದಿನ ಅಲ್ಲಿದ್ದ ತರಕಾರಿಯನ್ನೂ ಊರಿನವರಿಗೆ ಮಾರಾಟ ಮಾಡಲಾಯಿತು ಮುಂದೆ ಕೆಲವು ವರ್ಷ ಈ ಕಾರ್ಯಕ್ರಮ ನಡೆದು ನಂತರ ನಿಂತು ಹೋಯಿತು. ಆದರೆ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಹಾಗೂ ತೋಟಗಾರಿಕೆ ಪ್ರದರ್ಶನ ಮತ್ತು ಮಕ್ಕಳ ನೂಲುಗಾರಿಕೆ ಸ್ಪರ್ದೆ ಇತ್ಯಾದಿಗಳನ್ನು ಮರೆಯಲು ಸಾಧ್ಯವೇ ಇಲ್ಲ.

(ಮುಂದುವರಿಯುವುದು...)

ಖಾದಿ ವಿಚಾರ

"ಗಾಂಧಿಯಂತಹ ಒಬ್ಬ, ರಕ್ತ ಮಾಂಸ ತುಂಬಿದ, ವ್ಯಕ್ತಿ ಈ ಭೂಮಿಯ ಮೇಲೆ ನಡೆದಾಡಿದ್ದರು ಎಂದರೆ ಮುಂಬರುವ ಪೀಳಿಗೆಗಳುನಂಬುವುದೇ ಇಲ್ಲ"

ಸ್ಪಷ್ಟ ಮತ್ತು ಸ್ಫುಟ ಮಾತಿನ ಮೇಧಾವಿ ವಿಜ್ಞಾನಿಯಿಂದ ಬಂದ ಈ ಮಾತು ಅತಿಶಯೋಕ್ತಿಯಾಗಿರಲಾರದು. ಗಾಂಧಿಯ ಬರಹ ಮತ್ತು ಅವರ ಕೆಲಸ ಹಾಗೂ ವ್ಯಕ್ತಿತ್ವದ ಬಗ್ಗೆ ಇತರರು ಬರೆದಿರುವ ಅಗಾಧ ಬರಹಗಳಲ್ಲಿ ಸ್ವಲ್ಪ ಓದಿದರೂ ಅಚ್ಚರಿ ಮೂಡುತ್ತದೆ. 'ಒಂದು ವ್ಯಕ್ತಿಗೆ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧಿಸಲು ಹೇಗೆ ಸಾಧ್ಯವಾಯಿತು' ಎನಿಸುತ್ತದೆ. ಕಳೆದ ಶತಮಾನಕ್ಕೆ 'ಶತಮಾನದ ವ್ಯಕ್ತಿ' ಎಂದು ಇಡೀ ಜಗತ್ತೇ ಅವರನ್ನು ಆಯ್ಕೆ ಮಾಡಿದ್ದು ಸೋಜಿಗವಲ್ಲ.

ಗಾಂಧಿ ೮೦–೯೦ ವರ್ಷಗಳ ಹಿಂದೆ ಹೇಳಿರುವ ಮಾತುಗಳು ಇಂದಿನ ಬಗ್ಗೆಯೇ ಹೇಳಿರುವಂತಿದೆ. ಔದ್ಯೋಗಿಕ ವ್ಯವಸ್ಥೆಯ ಬಗ್ಗೆ ಅವರು ಹೇಳಿರುವ ಕೆಲವು ವಿಷಯಗಳಂತೂ ಇಂದಿನ ಬಗ್ಗೆಯೇ ಹೇಳಿರುವಂತಿದೆ.

ಔದ್ಯೋಗಿಕ ವ್ಯವಸ್ಥೆ ಹೇಗಿರಬಾರದು?

ಔದ್ಯೋಗಿಕ ವ್ಯವಸ್ಥೆ **(Industrialism)** ಎಂದರೆ ಕೈ ಎಣಿಕೆಯಷ್ಟು ಜನರು ಮಿಕ್ಕ, ಅಸಂಖ್ಯಾತ, ಬಹುಪಾಲು ಜನರನ್ನು ನಿಯಂತ್ರಿಸುವುದಲ್ಲದೆ ಮತ್ತೇನು? ಇದರಲ್ಲಿ ಆಕರ್ಷಕವಾದದ್ದೇನೂ ಇಲ್ಲ ಮತ್ತು ಇದು ಅನಿವಾರ್ಯವೂ ಅಲ್ಲ. ಬಹು ಸಂಖ್ಯೆಯ ಜನರು ಅಲ್ಪಸಂಖ್ಯೆಯವರು ಅವರಿಗೆ ಒಡ್ಡುತ್ತಿರುವ ಆಮಿಷಗಳನ್ನು 'ಬೇಡ'ಎಂದು ದೃಢವಾಗಿ ನಿರಾಕರಿಸಿದರೆ, ಅಲ್ಪ ಸಂಖ್ಯೆಯವರ ತಂತ್ರಗಳೇನೂ ನಡೆಯುವುದಿಲ್ಲ!

ಔದ್ಯೋಗಿಕ ವ್ಯವಸ್ಥೆಯ ಅನಿವಾರ್ಯ ದುಷ್ಪರಿಣಾಮವಾದ, ಸತತವಾಗಿ ಬೆಳೆಯುವ ನಿರುದ್ಯೋಗದ ಬಗ್ಗೆ ೧೯೩೦ರ ದಶಕದಲ್ಲಿ ಜರ್ಮನಿ ಗ್ರಾಮೀಣ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವ ಕಾರ್ಯಕ್ರಮ ಆರಂಭಿಸಿತ್ತು. ಇದರ ಬಗ್ಗೆ ಗಾಂಧಿ ಬರೆಯುತ್ತಾರೆ.

"ಜರ್ಮನಿ ಗ್ರಾಮೀಣ ಕೈಗಾರಿಕೆಗಳನ್ನು ಉಗ್ರ ಕ್ರಮಗಳಿಂದ ಪುನಶ್ಚೇತನಗೊಳಿಸುತ್ತಿದೆ ಎಂಬ ಮಾತು ಮುಖ್ಯವಲ್ಲ. ಅಂತಹ ಅತ್ಯುನ್ನತ ತಾಂತ್ರಿಕ ತಜ್ಞತೆ ಇರುವ ದೇಶ ಔದ್ಯೋಗಿಕ ವ್ಯವಸ್ಥೆಯಲ್ಲಿ ಅತಿ ಹೆಚ್ಚು ಮುಂದುವರಿದ ದೇಶ, ತನ್ನ ಭಯಂಕರ ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಗ್ರಾಮಿಣ ಕೈಗಾರಿಕೆಗಳನ್ನು ಪುನಃ ಆರಂಭಿಸುತ್ತಿದೆ ಎನ್ನುವ ಮಾತು ಮುಖ್ಯ"

ಭಾರತವೂ ಇಂಗ್ಲೆಂಡ್ ಮತ್ತು ಅಮೇರಿಕದಂತೆ ಆಗಬೇಕೆಂದರೆ, ಶೋಷಣೆ ಮಾಡಲು ಭೂಮಿಯ ಮೇಲೆ ಇನ್ನೂ ಇತರ ಜನಾಂಗಗಳು ಮತ್ತು ದೇಶಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಈವರೆಗೂ ಪಾಶ್ಚಾತ್ಯ ದೇಶಗಳು ಯೂರೋಪ್ ಹೊರಗಿರುವ, ಜಗತ್ತಿಗೆ ತಿಳಿದಿರುವ ಎಲ್ಲ ಜನಾಂಗಗಳು ಮತ್ತು ದೇಶಗಳನ್ನೂ ತಮ್ಮೊಳಗೆ ಹಂಚಿಕೊಂಡು ಬಿಟ್ಟಿವೆ. 'ಕಂಡು ಹಿಡಿಯಲು' ಇನ್ಯಾವ ಭಾಗವೂ ಉಳಿದಿಲ್ಲ. ಪಾಶ್ಚಾತ್ಯ ದೇಶಗಳ ಅನುಕರಣೆ ಮಾಡಿದರೆ ಭಾರತದ ಗತಿ ಏನಾಗಬಹುದು? ಆ ದೇಶಗಳ ಉದ್ಯೋಗ ವ್ಯವಸ್ಥೆ ಮತ್ತು ಶೋಷಣೆ ಎಲ್ಲಾ ಎಲ್ಲೆ ಮಿರಿ ಬೆಳೆದಾಗಿದೆ. ಅದರ ಫಲವಾಗಿ

ಇಂದು, ಆ ದೇಶಗಳು, ವಿಪರೀತವಾದ, ಪರಿಹಾರವೇ ಕಂಡುಕೊಳ್ಳಲಾಗದಂತಹ, ಸಮಸ್ಯೆಗಳನ್ನು ಎದುರಿಸುತ್ತಿವೆ. ಹೀಗಿರುವಾಗ, ಆ ದಿಕ್ಕಿನಲ್ಲಿ ಹೊಸದಾಗಿ ಹೆಜ್ಜೆ ಇಡುತ್ತಿರುವ ನಾವು ಅಂತಹ ಸಮಸ್ಯೆಗಳನ್ನು ಎದುರಿಸದೇ ಇರುತ್ತೇವೆಯೇ? ಉಗಿ ಹಡಗುಗಳು ಅಥವಾ ಟೆಲಿಗ್ರಾಫ್ ಬಗ್ಗೆ ನನ್ನ ಅಭ್ಯಂತರವಿಲ್ಲ (ಟೆಲಿಗ್ರಾಂ ಆರಂಭವಾದಾಗಿನಿಂದ ಗಾಂಧಿ, ಅಗತ್ಯವಿದ್ದಾಗ, ಟೆಲಿಗ್ರಾಂ ಸಂದೇಶಗಳನ್ನು ಕಳುಹಿಸುತ್ತಿದ್ದರು) ಔದ್ಯೋಗಿಕ ವ್ಯವಸ್ಥೆಯ ಕೆಡುಕುಗಳಿಲ್ಲದೆ ಅವು ನಿಲ್ಲುವುದಾದರೆ, ಇರಬಹುದು. ಆದರೆ ಅವುಗಳ ಕಾರಣದಿಂದ ನಾವು ಶೋಷಣೆಗೆ ಒಳಗಾಗುವುದಾದರೆ, ಅವೂ ಬೇಕಿಲ್ಲ, ಮಾನವ ಕುಲದ ಕಲ್ಯಾಣಕ್ಕೇನೂ ಅವುಗಳ ಅಗತ್ಯವಿಲ್ಲ.

ಭಾರತದ ಮೇಲೆ ಅನೇಕ ಸಂಸ್ಕೃತಿಯ ಜನಾಂಗಗಳು ದಾಳಿ ಮಾಡಿವೆ, ಆದರೂ ಭಾರತ ತನ್ನ ಸಂಸ್ಕೃತಿಯನ್ನು ಉಳಿಸಿಕೊಂಡಿದೆ. ಭಾರತ ತನ್ನಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳದೇ ಇಲ್ಲ. ಆದರೆ ಈ ಬದಲಾವಣೆಗಳು ನಮಗೆ ಪ್ರಗತಿ ತಂದಿವೆ. ಆದರೆ (ಪಾಶ್ಚಾತ್ಯ ರೀತಿಯ) ಔದ್ಯೋಗಿಕ ವ್ಯವಸ್ಥೆಯನ್ನು ಅನುಕರಿಸಿದರೆ, ದುರಂತ ಕಾದಿದೆ. ಈಗ ನಮ್ಮ ದೇಶದಲ್ಲಿರುವಂತಹ ಕಡು ಬಡತನ ಖಂಡಿತ ಇರಬಾರದು. ಆದರೆ ಅದಕ್ಕೆ ಪರಿಹಾರ ಈ ಔದ್ಯೋಗಿಕ ವ್ಯವಸ್ಥೆ ಅಲ್ಲ.ಪಾಶ್ಚಾತ್ಯ ದೇಶಗಳು ತಮ್ಮ ರಕ್ತ ಸಿಕ್ತ ಮಾರ್ಗವನ್ನು ಅನುಸರಿಸಿ ಈಗಾಗಲೇ ಸಾಕಷ್ಟು ಬಳಲಿವೆ. ಭಾರತದ ಭವಿಷ್ಯಅಂತಹ
ಮಾರ್ಗವನ್ನು ಅನುಸರಿಸುವುದರಲ್ಲಿ ಇಲ್ಲ. ರಕ್ತ ಚೆಲ್ಲದೆ. ಶಾಂತಿಯುತ, ಸರಳ ಹಾಗೂ ದೈವ ನಿಷ್ಠೆಯುಳ್ಳ ಜೀವನವನ್ನು ಅನುಸರಿಸುವುದರಲ್ಲಿದೆ. – *ಕೃಪಾ*

* * *

ಸಂತಾಪ..

ತಮಿಳುನಾಡಿನ ಹಿರಿಯ ಸರ್ವೋದಯ ನಾಯಕರಾಗಿದ್ದ ಎಮ್.ಮರಿಯಪ್ಪನ್‌ರವರು ದಿನಾಂಕ ೨೮-ಏಪ್ರಿಲ್ ರಂದು ತೀರಿಕೊಂಡರು. ಅವರಿಗೆ ೭೫ ವರ್ಷವಯಸ್ಸಾಗಿತ್ತು. ಮರಿಯಪ್ಪನ್ ಸರ್ವೋದಯ ತಸ್ಲೀಮಾದ ಸಂಪಾದಕರಾಗಿದ್ದರು. ಅಲ್ಲದೆ ಮಧುರೈ ಕಾಮ್‌ರಾಜ್ ವಿಶ್ವವಿದ್ಯಾಲಯ, ಖಾದಿಗ್ರಾಮ್ ವಿಶ್ವವಿದ್ಯಾಲಯ ತಮಿಳುನಾಡು ಸರ್ವೋದಯ ಮಂಡಲ, ಗಾಂಧೀ ಸ್ಮಾರಕ ನಿಧಿ ಮುಂತಾದಗಳೊಂದಿಗೆ ಸಕ್ರೀಯ ಸಂಪರ್ಕವಿರಿಸಿಕೊಂಡಿದ್ದರು. ೨೦೧೧ ಡಿಸಂಬರ್‌ನಲ್ಲಿ ಮಧುರೈನಲ್ಲಿ ನಡೆದ ೪೪ನೇ ಸರ್ವೋದಯ ಸಮಾಜ ಸಮ್ಮೇಳನದ ಸ್ವಾಗತ ಸಮಿತಿಯ ಸದಸ್ಯರು ಮತ್ತು ನೇತಾರರಾಗಿದ್ದರು. ಅವರಿಗೆ ಜನಪದ ವಿಚಾರವು ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಸರ್ವೋದಯ ಆಂದೋಲನದ ಮುನ್ನಡೆ

ಪಂಚಾಯತ್ ರಾಜ್ಯ ಮಸೂದೆ ತಿದ್ದುಪಡಿಗೆ ವಿರೋಧ

(೧೮-೦೬-೨೦೧೩ ರಂದು ಮೇಲುಕೋಟೆಯಲ್ಲ ನಡೆದ ಕರ್ನಾಟಕ ಸರ್ವೋದಯ ಮಂಡಲಿಯ ಸಭೆಯಲ್ಲಿ ಈ ಕೆಳಗೆ ಕಾಣಿಸಿದ ತೀರ್ಮಾನವನ್ನು ಕೈಗೊಳ್ಳಲಾಯಿತು)

ಗ್ರಾಮಸಭೆ ನಡೆಸದಿರುವ ಪಂಚಾಯತಿ ಅಧ್ಯಕ್ಷರನ್ನು ಮತ್ತು ಆಯಾ ವಾರ್ಡ್ ಸದಸ್ಯರನ್ನು ಅನರ್ಹಗೊಳಿಸಲು ಅವಕಾಶ ಕಲ್ಪಿಸುವ ಕರ್ನಾಟಕ ಪಂಚಾಯತ್ ರಾಜ್(ತಿದ್ದುಪಡಿ) ಮಸೂದೆಗೆ ಪ್ರತಿಪಕ್ಷಗಳ ವಿರೋಧದ ನಡುವೆಯೂ ೧೨/೦೬/೨೦೧೩ರಂದು ವಿಧಾನಸಭೆ ಒಪ್ಪಿಗೆ ನೀಡಿತು. ಪಂಚಾಯತ್ ರಾಜ್ ಜಾರಿಗೆ ಬಂದುದು ಮಹಾತ್ಮಾ ಗಾಂಧೀಜಿಯವರ ವಿಚಾರವನ್ನು ಸಂವಿಧಾನ ಸಭೆ ಒಪ್ಪಿದುದುರ ಪರಿಣಾಮವಾಗಿ. ಗಾಂಧೀಜಿಯವರ ಪ್ರಕಾರ ದೇಶದ ಆರುಲಕ್ಷ ಹಳ್ಳಿಗಳಲ್ಲಿ ಗ್ರಾಮರಾಜ್ಯ ಸ್ಥಾಪನೆಯಾಗಬೇಕೆಂಬುದಾಗಿತ್ತು. ಸಂವಿಧಾನ ಸಭೆ ಆ ವಿಚಾರವನ್ನು ಪೂರ್ಣ ಒಪ್ಪದೆ ಗ್ರಾಮರಾಜ್ಯಕ್ಕೆ ಹತ್ತಿರವಾಗುವಂಥ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ದೇಶದಲ್ಲಿ ಜಾರಿಗೆ ತಂದಿತು. ಪಂಚಾಯತ್ ರಾಜ್ ವ್ಯವಸ್ಥೆ ರಾಜ್ಯಸರ್ಕಾರದ ಪಟ್ಟಿಯಲ್ಲಿ ಸೇರಿಕೊಂಡಿತು. ಯೋಜನಾಯುಗ ಪ್ರಾರಂಭವಾದ ಮೇಲೆ ಪಂಚಾಯತ್ ರಾಜ್‌ಗೆ ವಿಶೇಷ ಮನ್ನಣೆ ಸಿಗಲು ಪ್ರಾರಂಭವಾಯಿತು ಮತ್ತು ಗ್ರಾಮ ಪಂಚಾಯತ್‌ಗಳಿಗೆ ಹೆಚ್ಚು ಅಧಿಕಾರ ಮತ್ತು ಹಣ ದೊರೆಯಲು ಪ್ರಾರಂಭವಾಯಿತು. ೧೯೫೦ ದಶಕದಿಂದೀಚೆಗೆ ಗ್ರಾಮ ಪಂಚಾಯಿತಿಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆಡಳಿತಾಂಗದಂತೆ ಅಂದರೆ ಪೂರ್ಣ ಸರ್ಕಾರೀ ಇಲಾಖೆಯಂತೆ ಕೆಲಸ ಮಾಡಲಾರಂಭಿಸಿದವು.

ಗ್ರಾಮಪಂಚಾಯತಿಗಳು ಕಾಲಕ್ರಮೇಣ ಗಣರಾಜ್ಯವೆಂದು ಪರಿವರ್ತಿತವಾಗಿ ಗ್ರಾಮರಾಜ್ಯ ಸ್ಥಾಪನೆಯಾಗಬೇಕೆಂಬುದು ಗಾಂಧೀಜಿಯವರ ಅಪೇಕ್ಷೆಯಾಗಿತ್ತು. ಆದರೆ ಇಂದು ಗ್ರಾಮ ಪಂಚಾಯತಿಗಳು ಸರ್ಕಾರದ ಕೈಗೊಂಬೆಗಳಾಗಿವೆ. ಸರ್ಕಾರದ ಆದೇಶಗಳನ್ನು ಶಿರಸಾಪಾಲಿಸಬೇಕಾದ ಜೀತದಾಳಾಗಿವೆ. ಪ್ರಜಾಪ್ರಭುತ್ವದ ಮೂಲ ಘಟಕವೆಂಬ ಹೆಸರಿನಲ್ಲಿ ಪಂಚಾಯತಿಗಳನ್ನು ಸರ್ಕಾರದ ಒಂದು ಇಲಾಖೆ ಮಟ್ಟಕ್ಕೆ ಇಳಿಸಲಾಗಿದೆ. ಪ್ರಜಾಪ್ರಭುತ್ವದ ತಳ ಮೂಲ ವ್ಯವಸ್ಥೆಯಾಗಬೇಕಿದ್ದ ಅವು ಈಗ ನೆಪಮಾತ್ರಕ್ಕೆ ಅಂಥ ಸಂಸ್ಥೆಗಳಾಗಿವೆ. ಕರ್ನಾಟಕ ರಾಜ್ಯ ಸರ್ಕಾರವು ಈಗಿನ ಪಂಚಾಯತ್‌ರಾಜ್ ಮಸೂದೆಗೆ ತಿದ್ದುಪಡಿ ಮಾಡಿ ಗ್ರಾಮಸಭೆ ನಡೆಸದ ಅಧ್ಯಕ್ಷರು ಅನರ್ಹರಾಗುತ್ತಾರೆಂಬ ಭಯೋತ್ಪಾದನೆಯ ಚಾವಟಿಯನ್ನು ಬೀಸಿದೆ. ಈ ಪ್ರಕಾರದ ತಿದ್ದುಪಡಿ ಪಂಚಾಯತ್‌ರಾಜ್‌ವ್ಯವಸ್ಥೆಗೂ, ಗ್ರಾಮರಾಜ್ಯದ ಗುರಿಗೂ, ಆಘಾತವನ್ನು ಉಂಟುಮಾಡಿದೆ. ಜನತಾ ಪ್ರತಿನಿಧಿಗಳನ್ನು ಕಾನೂನು ಮೂಲಕ ಅನರ್ಹಗೊಳಿಸುವ ಕ್ರಮ ಪ್ರಜಾತಂತ್ರದ ವ್ಯವಸ್ಥೆಗೆ ತೀರ ವಿರುದ್ಧವಾದುದು. ರಾಜ್ಯದ, ದೇಶದ, ರಾಜಕಾರಣಿಗಳು ವಿಧಾನಸಭೆಗಳಲ್ಲಿ ಮತ್ತು ಲೋಕಸಭೆಯಲ್ಲಿ ಯಾವ ರೀತಿ ವರ್ತಿಸುತ್ತಾರೋ ಅದರ ಪ್ರಭಾವವೇ ಪಂಚಾಯತಿಗಳ ಸದಸ್ಯರ ಮೇಲೂ ಉಂಟಾಗುತ್ತದೆ. ಮೇಲ್‌ಪಂಕ್ತಿ

ಸರಿಯಾಗಿದ್ದರೆ ಕೆಳಪಂಕ್ತಿ ಸರಿಯಾಗಿರುತ್ತದೆ. ಗ್ರಾಮಪಂಚಾಯತ್ ಸದಸ್ಯರಿಗೆ ಮತ್ತು ಗ್ರಾಮದ ಜನರಿಗೆ ಪಂಚಾಯತ್ ರಾಜ್ಯದ ಉದ್ದೇಶವೇನು, ಗುರಿಯೇನು, ಅದನ್ನು ಕೈಗೊಳ್ಳುವ ಬಗೆ ಹೇಗೆ ಎಂಬ ವಿಷಯವಾಗಿ ಸರ್ಕಾರ ಮತ್ತು ಜನನಾಯಕರು ಶಿಕ್ಷಣವನ್ನು ಕೊಡಬೇಕು. ಸಹಜ ಪ್ರಕ್ರಿಯೆಯಾಗಿಯೇ ಗ್ರಾಮಸಭೆಗಳು ನಿಯಮಿತವಾಗಿ ನಡೆಯುವಂತೆ ಮಾಡಬೇಕು ಮತ್ತು ಪಂಚಾಯತ್‌ರಾಜ್‌ವು ಕ್ರಮೇಣ ಗ್ರಾಮರಾಜ್ಯವಾಗುವಂತೆ ಮಾಡುವ ನಿಟ್ಟಿನತ್ತ ಹೋಗಲು ಸರ್ಕಾರವು ಪ್ರಯತ್ನಿಸಬೇಕೆ ಹೊರತು ತನ್ನ ಅಧೀನ ಇಲಾಖೆಯನ್ನಾಗಿ ಪರಿವರ್ತಿಸಕೊಡದೆಂದು ಕರ್ನಾಟಕರಾಜ್ಯ ಸರ್ವೋದಯ ಮಂಡಲಿಯು ಸರ್ವಾನುಮತದಿಂದ ತೀರ್ಮಾನಿಸುತ್ತದೆ. ಸಭೆಯ ಅಧ್ಯಕ್ಷತೆಯನ್ನು ಶ್ರೀ ಸುರೇಂದ್ರ ಕೌಲಗಿಯವರು ವಹಿಸಿದ್ದರು.

* * *

ಕಳೆದ ಮಾರ್ಚ್ ೧೭ರಂದು ಪಾಟ್ನಾದ ಸದಾಕತ್ ಆಶ್ರಮದಲ್ಲಿ ಅಖಿಲ ಭಾರತ ಸರ್ವೋದಯ ಮಂಡಲ (ಸರ್ವಸೇವಾ ಸಂಘ)ದ ಕಾರ್ಯಕಾರಿ ಸಮಿತಿ ಸಭೆನಡೆಯಿತು. ಆ ಸಭೆಯಲ್ಲಿ ೪೧ ಜನಸದಸ್ಯರು ಹಾಜರಿದ್ದರು. ಸಭೆಯ ಅಧ್ಯಕ್ಷತೆಯನ್ನು ರಾಧಭಟ್ ವಹಿಸಿದ್ದರು. ಆ ಸಭೆಯಲ್ಲಿ ಅಗಲಿ ಹೋದ ಹಿರಿಯರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ಮೊದಲು ದಿಲ್ಲಿಯಲ್ಲಿ ಡಿಸಂಬರ್ ೨೦೧೨-೧೨ ಮತ್ತು ೧೩ದಿನಾಂಕಗಳಲ್ಲಿ ನಡೆದಿದ್ದ. ಸಭೆಯ ತೀರ್ಮಾನಗಳನ್ನು ಒಪ್ಪಲಾಯಿತು. ಅಸ್ಸಾಂನಲ್ಲಿ ಕೈಗೊಳ್ಳಲಾಗಿದ್ದ ಶಾಂತಿಕಾರ್ಯದ ಬಗ್ಗೆ ಚರ್ಚೆನಡೆಯಿತು. ಮಾರ್ಚ್ ೭-೨೦೧೩ಕ್ಕೆ ಛತ್ತೀಸ್‌ಗಢ್‌ದಲ್ಲಿ ೨೪೩, ಮಹಾರಾಷ್ಟ್ರದಲ್ಲಿ ೧೬, ಪಂಜಾಬ್‌ನಲ್ಲಿ ೫೩ ಕೇರಳ ಹಾಗೂ ಉತ್ತಾರಖಂಡದಲ್ಲಿ ತಲಾ ಒಬ್ಬರಂತೆ ಒಟ್ಟು ೨೯೬ ಜನ ಲೋಕಸೇವಕರಿದ್ದರು. ೭೮೬ ಸರ್ವೋದಯ ಮಿತ್ರರಿದ್ದರು. ಜಲ-ಜಂಗಲ್-ಜಮೀನ್ ಅಭಿಯಾನದ ೨ನೇ ಭಾಗ ನಡೆಯಿತು. ಅಭಿಯಾನದ ಅಂಗವಾಗಿ ಮೊದಲನೇ ಪಾದಯಾತ್ರೆ ಉತ್ತರಖಂಡಾದಿಂದ ದಿಲ್ಲಿಯವರೆಗೆ ನಡೆದಿತ್ತು. ೨೦೧೩-೧೪ನೇ ಸಾಲಿಗೆ ಬಜೆಟನ್ನು ಸ್ವೀಕರಿಸಲಾಯಿತು. ಬಜೆಟ್‌ನ ಒಟ್ಟು ಮೊತ್ತ ೬೯.೬೯.೯೦೦ ರಷ್ಟಿದೆ. ೧೩ಲಕ್ಷ ರೂಪಾಯಿಯಷ್ಟು ಖೊತಾ ಇರುವುದನ್ನು ದಾನದ ಮೂಲಕ ಸಂಗ್ರಹಿಸಲಾಗುವುದೆಂದು ತೀರ್ಮಾನಿಸಲಾಯಿತು.

ಇತ್ತೀಚಿಗೆ ಅಂದರೆ ಮೇ ೧೭ ಮತ್ತು ೧೮ರಂದು ತ್ರಿವೇಂಡ್ರಮ್‌ನಲ್ಲಿ ಭಾರತೀಯ ಸಮಾಜವಾದಿ ಪಕ್ಷದ ದ್ವೈವಾರ್ಷಿಕ ಸಮಾವೇಶ ನಡೆಯಿತು. ಆ ಸಮಾವೇಶದಲ್ಲಿ "ಪಾಶ್ಚಿಮಾತ್ಯ ಮಾದರಿಯನ್ನು" ತಿರಸ್ಕರಿಸಿ ಸಂವಿಧಾನದ ನಿಜ ಆಶಯದ ಮೇರೆಗೆ ಭಾರತೀಯ ರೀತಿಯನ್ನು ಅನುಸರಿಸಿಬೇಕೆಂಬ ತೀರ್ಮಾನವನ್ನು ಕೈಗೊಳ್ಳಲಾಯಿತು. ಆ ತೀರ್ಮಾನದ ಅಂಗವಾಗಿ ಸಂವಿಧಾನ ತಿದ್ದು ಪಡಿ ೭೩ ಮತ್ತು ೭೪ರ ನಂತರ ಸ್ಥಳೀಯ ಸರಕಾರಗಳ ಮೂಲಕವೇ ಅಭಿವೃದ್ಧಿ ಕೆಲಸ ಕೈಗೊಳ್ಳಬೇಕು. ಮತ್ತು ಅಭಿವೃದ್ಧಿಯ ಮಾದರಿ ಯಾವುದೆಂಬುದನ್ನು ಸ್ಥಳೀಯರೇ ಸ್ಥಳೀಯ ಮಟ್ಟದಲ್ಲಿ ತೀರ್ಮಾನಿಸಬೇಕೆಂದು ಹೇಳಲಾಗಿದೆ. ಸಂಪತ್ತಿನ ಕೇಂದ್ರಿಕರಣ ಕೆಲವೇ ವ್ಯಕ್ತಿಗಳಲ್ಲಿ ಆಗದಂತೆ ಪ್ರತಿಯೊಬ್ಬ ಸಶಕ್ತ ಗ್ರಾಮೋದ್ಯೋಗ ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಬೇಕೆಂದು ಹೇಳಲಾಗಿದೆ. ಈ ವಿಚಾರ ಸರ್ವೋದಯ ಸಮಾಜ ನಿರ್ಮಾಣದ ವಿಚಾರವೇ ಆಗಿದೆ. ರಾಜಕೀಯ ಪಕ್ಷವೊಂದು ಸರ್ವೋದಯದ ಕೆಲವೂ ವಿಚಾರಗಳನ್ನು ಪ್ರಸ್ತಾಪಿಸಿದ್ದನ್ನು ಸರ್ವೋದಯ ಆಂದೋಲನ ಸ್ವಾಗತಿಸುತ್ತದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಜಿ.ವಿಶ್ವನಾಥ್ ; ಶ್ರೀ ಶಶಿಧರ ಕಶ್ಯಪ್ – ಮೈಸೂರು
ಡಾ॥ ಅರ್ಜುನಪುರಿ ಅಪ್ಪಾಜಿಗೌಡ – ಮದ್ದೂರು
ಶ್ರೀ ಕೆ.ನಾಗಾನಂದ – ಮಂಡ್ಯ
ಶ್ರೀ ಸಿ.ವೆಂಕಟೇಶ್ – ರಾಮನಗರ
ಶ್ರೀಮತಿ ಬಿ.ಆರ್.ಜ್ಯೋತಿಲಕ್ಷ್ಮಿ – ಚನ್ನೈ
ಶ್ರೀ ನಾಮದೇವ ಶೆಣೈ – ಕೇರಳ
ಶ್ರೀ ಶುಭೋದಯ ಕೊಡ್ಲು ; ಶ್ರೀ ಕೆ.ಯಶವಂತ್ ;
ಶ್ರೀ ಸಿ.ವೆಂಕಟೇಶ್ – ಮಂಗಳೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ ಚಂದ್ರಶೇಖರಯ್ಯ – ಶಿವಳ್ಳಿ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.